ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 22 ಸೋಮವಾರ 2026

47

ಸಂಪುಟ: 47 | ಸಂಚಿಕೆ: 67 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ- ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಪರಿಷತ್ ಚುನಾವಣೆ 'ಅಡ್ಡ ಮತದಾನ'ದ ಆಣೆ ಪ್ರಮಾಣ

ಧರ್ಮಸ್ಥಳದಲ್ಲಿ ಬಿಜೆಪಿ ಶಾಸಕಾಂಗ ಪಕ್ಷದ ಸಭೆ





ಬೆಂಗಳೂರು: ವಿಧಾನ ಪರಿಷತ್ ಚುನಾವಣೆಯಲ್ಲಿ ಶಾಸಕರು ಅಡ್ಡಮತದಾನ ಮಾಡಿರುವ ಹಿನ್ನೆಲೆಯಲ್ಲಿ ಮುಜುಗರಕ್ಕೀಡಾಗಿರುವ ರಾಜ್ಯ ಬಿಜೆಪಿ, ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಶಾಸಕಾಂಗ ಸಭೆ ಆಯೋಜಿಸುವುದರೊಂದಿಗೆ ಶಾಸಕರಿಂದ ಆಣೆ ಪ್ರಮಾಣ ಮಾಡಿಸಲು ಮುಂದಾಗಿದೆ.

ಈ ವಾರ ಅಥವಾ ಮುಂದಿನ ವಾರ ಧರ್ಮಸ್ಥಳದಲ್ಲಿ ಸಭೆ ನಡೆಯುವ ನಿರೀಕ್ಷೆಯಿದ್ದು, ಪಕ್ಷಕ್ಕೆ ದ್ರೋಹ ಬಗೆದವರನ್ನು ಪತ್ತೆಹಚ್ಚಲು ಪಕ್ಷದ ಎಲ್ಲಾ 63 ಶಾಸಕರಿಂದಲೂ ಶ್ರೀ ಮಂಜುನಾಥ ಸ್ವಾಮಿಯ ಸನ್ನಿಧಿಯಲ್ಲೇ ಆಣೆ-ಪ್ರಮಾಣ ಮಾಡಿಸಲು ರಾಜ್ಯ ಬಿಜೆಪಿ ನಾಯಕರು ನಿರ್ಧರಿಸಿದ್ದಾರೆ.

ಈ ಬಗ್ಗೆ ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನ ಪರಿಷತ್ ಚುನಾವಣೆಯಲ್ಲಿನ ಅಡ್ಡ ಮತದಾನದ ಆರೋಪ ಕುರಿತಂತೆ ಅತಿ ಶೀಘ್ರದಲ್ಲೇ ಧರ್ಮಸ್ಥಳದಲ್ಲಿ ನಮ್ಮ ಶಾಸಕಾಂಗ ಪಕ್ಷದ ಸಭೆ ಕರೆಯಲು ನಿರ್ಧರಿಸಿರುವುದಾಗಿ ಸ್ಪಷ್ಟಪಡಿಸಿದ್ದಾರೆ.

ಪರಿಷತ್ ಚುನಾವಣೆಯಲ್ಲಿ ನಮ್ಮಿಂದ 4 ಅಡ್ಡ ಮತದಾನ ಆಗಿದೆ ಎಂಬ ಚರ್ಚೆ ಮಾಧ್ಯಮಗಳಲ್ಲಿ ನಡೆಯುತ್ತಿದೆ. ನಮ್ಮ ಕಾರ್ಯಕರ್ತರು, ಶಾಸಕರ ನಡವಳಿಕೆ ಬಗ್ಗೆ ಬೇಸರ ಪಟ್ಟಿದ್ದಾರೆ. ಹೀಗಾಗಿ ಎಲ್ಲ 63 ಶಾಸಕರ ಮೇಲೂ ಅನುಮಾನ ಪಡುವಂತಾಗಿದೆ. ನಿನ್ನೆ ನಿತಿನ್ ನಬಿನ್ ಅವರಿಗೆ ಕರೆ ಮಾಡಿ ಈ ಬಗ್ಗೆ ಮಾಹಿತಿ ನೀಡಿದ್ದೇನೆ. ಈ ವಾರದಲ್ಲೇ ಧರ್ಮಸ್ಥಳದಲ್ಲಿ ಶಾಸಕಾಂಗ ಪಕ್ಷದ ಸಭೆ ಕರೆಯಲು ವಿಪಕ್ಷ ನಾಯಕ ಆರ್. ಅಶೋಕ್ ಅವರ ಜೊತೆ ಚರ್ಚೆ ಮಾಡುತ್ತೇನೆ. ಬಳಿಕ

ಅಧಿಕೃತ ವಿಪ್ ಜಾರಿ

ಬಿ.ವೈ.ವಿಜಯೇಂದ್ರ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರೊಂದಿಗೆ ದೂರವಾಣಿ ಮೂಲಕ ಸುದೀರ್ಘ ಚರ್ಚೆ ನಡೆಸಿದ್ದು, ಸಭೆಗೆ ಯಾರೊಬ್ಬರೂ ಗೈರಾಗದಂತೆ ಎಲ್ಲ ಶಾಸಕರಿಗೂ ಅಧಿಕೃತ 'ವಿಪ್' ಜಾರಿ ಮಾಡಲು ನಿರ್ಧರಿಸಲಾಗಿದೆ. ವಿಪಕ್ಷ ನಾಯಕ ಆರ್.ಅಶೋಕ್ ಅವರು ಎಲ್ಲ ಶಾಸಕರಿಗೂ ವಿಪ್ ಕೊಡಿಸುವ ಮೂಲಕ ಶಾಸಕಾಂಗ ಪಕ್ಷದ ಸಭೆಗೆ ಕಡ್ಡಾಯವಾಗಿ ಹಾಜರಿರುವಂತೆ ಸೂಚನೆ ನೀಡಲಿದ್ದಾರೆ.

ನಾವಿಬ್ಬರೂ ದೆಹಲಿಗೆ ತೆರಳಲಿದ್ದೇವೆ ಎಂದು ತಿಳಿಸಿದರು. ಈ ವಿಚಾರದ ಬಗ್ಗೆ ಕಾರ್ಯಕರ್ತರಿಗೆ ನೋವಾಗುವುದು ಸಹಜ. ಅಡ್ಡ ಮತದಾನ ವನ್ನು ನನ್ನ ಮನಸಾಕ್ಷಿ ಒಪ್ಪುತ್ತಿಲ್ಲ. ಸಾಮಾಜಿಕ ಜಾಲತಾಣದಲ್ಲಿ ಬರುತ್ತಿರುವ ಟೀಕೆಗಳ ಬಗ್ಗೆ ನಾನು ಕೂಡ ಗಮನಿಸಿದ್ದೇನೆ. ಇದನ್ನೇ ನೆಪ ಮಾಡಿಕೊಂಡು ಪರೋಕ್ಷ ದಾಳಿ ಮಾಡುವ ಕೆಲಸ ಹಾಗೂ ಕುತಂತ್ರ ನಡೆಯುತ್ತಿದೆ. ಆದ್ದರಿಂದ ಈ ಸಂಬಂಧ ಸತ್ಯಾಸತ್ಯತೆಯನ್ನು ನಾವು ಜನರ ಮುಂದಿಡಬೇಕಾಗಿದೆ. ■6ನೇ ಪುಟಕ್ಕೆ

ಕೀಳು ಮಟ್ಟದ ಅಡ್ಡಮತದ ಅಪಚಾರಕ್ಕೆ ಧರ್ಮಸ್ಥಳವನ್ನು ಎಳೆಯುವುದು ಬೇಡ

ಬೆಂಗಳೂರು: ನಿಜಕ್ಕೂ ನನಗೆ ನಮ್ಮ ಪಕ್ಷದ ರಾಜ್ಯಾಧ್ಯಕ್ಷರ ಈ ಘೋಷಣೆ ದಿಗ್ಭ್ರಮೆ ಉಂಟು ಮಾಡಿದೆ ಎಂದು ಮಾಜಿ ಸಚಿವ ಬಿಜೆಪಿ ಹಿರಿಯ ಶಾಸಕ ಎಸ್.ಸುರೇಶ್ ಕುಮಾರ್ ಹೇಳಿದ್ದಾರೆ.

ಶ್ರೀಕ್ಷೇತ್ರ ಧರ್ಮಸ್ಥಳ ಅದರದೇ ಪಾವಿತ್ರ್ಯತೆ ಹೊಂದಿದೆ. ರಾಜಕಾರಣದಲ್ಲಿ ನಡೆದುಬಿಟ್ಟಿರುವ ಕೀಳು ಮಟ್ಟದ ಅಡ್ಡಮತದ ಅಪಚಾರಕ್ಕೆ ಧರ್ಮಸ್ಥಳವನ್ನು ಎಳೆಯುವುದು ದಯವಿಟ್ಟು ಬೇಡ ಎಂದು ಮನವಿ ಮಾಡಿದ್ದಾರೆ. ಈ ಅಪಚಾರ ಮಾಡಿರುವವರು ಹೆತ್ತ ತಾಯಿಗೆ ದ್ರೋಹ ಮಾಡಿದಷ್ಟೇ ಪಾಪ ಮಾಡಿದ್ದಾರೆ. ಈಗಾಗಲೇ ಹಲವರು ಧರ್ಮಸ್ಥಳದ ಹಿರಿಮೆಯನ್ನು ಹಾಳು ಮಾಡುವ ಕೆಲಸವನ್ನು ಮಾಡುವುದರಲ್ಲಿ ವಿಕೃತಾನಂದ ಪಡೆದಿದ್ದಾರೆ. ಇಡೀ ನಾಡಿನ ಜನತೆ ನಂಬಿಕೆ ಇಟ್ಟಿರುವ ಶ್ರೀ ಕ್ಷೇತ್ರ ■6ನೇ ಪುಟಕ್ಕೆ

ಅಂತೂ ಇಂತೂ 'ನೀಟ್' ಮುಗೀತು

ಭಾರೀ ಬಿಗಿ ಭದ್ರತೆ ನಡುವೆ ಪರೀಕ್ಷೆ ಬರೆದ 22 ಲಕ್ಷ ಅಭ್ಯರ್ಥಿಗಳು

ನವದೆಹಲಿ: ದೇಶದಾದ್ಯಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ಭಾನುವಾರ ನಡೆದ ನೀಟ್-ಯುಜಿ ಮರು ಪರೀಕ್ಷೆಯಲ್ಲಿ 22 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆದರು.

ಪ್ರಶ್ನೆ ಪತ್ರಿಕೆ ಸೋರಿಕೆ ಹಿನ್ನೆಲೆಯಲ್ಲಿ ನಡೆದ ಮರು ಪರೀಕ್ಷೆಯು ಯಾವುದೇ ಗೊಂದಲ, ಅಡತಡೆಗಳಿಲ್ಲದೆ ಭಾರೀ ಬಿಗಿ ಭದ್ರತೆ ನಡುವೆ ಸಾಂಗವಾಗಿ ನಡೆದಿರುವುದರಿಂದ ವಿದ್ಯಾರ್ಥಿಗಳು ಮಾತ್ರವಲ್ಲದೆ, ಕೇಂದ್ರ ಸರ್ಕಾರವೂ ನಿಟ್ಟುಸಿರು ಬಿಟ್ಟಿದೆ. ದೇಶದ 551 ನಗರಗಳು ಮತ್ತು ವಿದೇಶದ 14 ನಗರಗಳಲ್ಲಿ ಮಧ್ಯಾಹ್ನ 2ರಿಂದ ಆರಂಭವಾಗಿ ಸಂಜೆ 5.15 ರವರೆಗೆ ಇಂಗ್ಲಿಷ್ ಸೇರಿದಂತೆ 12 ಭಾರತೀಯ ಭಾಷೆಗಳಲ್ಲಿ ಮರು ಪರೀಕ್ಷೆ ನಡೆಯಿತು. ವಿಕಲಚೇತನ ಅಭ್ಯರ್ಥಿಗಳಿಗೆ ಸಂಜೆ 6.20ರವರೆಗೆ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಗಿತ್ತು. ಅಭ್ಯರ್ಥಿಗಳು ಪರೀಕ್ಷಾ ಕೇಂದ್ರದೊಳಗೆ ಪಾರದರ್ಶಕವಾಗಿರುವ ನೀರಿನ ಬಾಟಲಿ, ಮಧುಮೇಹ ಸಮಸ್ಯೆ ಇರುವ ಅಭ್ಯರ್ಥಿಗಳು ಮಧುಮೇಹ ಮಾತ್ರೆಗಳು, ಬಾಳೆಹಣ್ಣು, ಸೇಬು ಮತ್ತು ಕಿತ್ತಳೆ ಮುಂತಾದ ಹಣ್ಣುಗಳನ್ನು ಕೊಂಡೊಯ್ಯಲು ಅವಕಾಶ ನೀಡಲಾಗಿತ್ತು.

ಒಟ್ಟು 95,000 ಪರೀಕ್ಷಾ ಕೊಠಡಿಗಳಲ್ಲಿ ಸಿಟಿವಿ ಕ್ಯಾಮರಾಗಳನ್ನು ಅಳವಡಿಸ ಲಾಗಿತ್ತು. ಒಟ್ಟಾರೆ 1,38,560 ಸಿಸಿಟಿವಿ ಕ್ಯಾಮರಾಗಳ ಮೂಲಕ ನೇರ ಕಣ್ಗಾವಲು ಇರಿಸಿದ್ದ ಎನ್‌ಟಿಎ, ನಕಲು ■6ನೇ ಪುಟಕ್ಕೆ

ಪರೀಕ್ಷಾರ್ಥಿಗಳಿಗೆ ಅಡ್ಡಿಯಾಗಬಾರದೆಂದು ವಿಮಾನ ನಿಲ್ದಾಣದಲ್ಲೇ 45 ನಿಮಿಷ ಕಾದ ಪ್ರಧಾನಿ ಮೋದಿ



ನವದೆಹಲಿ: ಭಾನುವಾರ ನೀಟ್-ಯುಜಿ ಮರುಪರೀಕ್ಷೆಗೆ ಹಾಜರಾಗುತ್ತಿದ್ದ ವಿದ್ಯಾರ್ಥಿಗಳಿಗೆ ಸಂಚಾರದ ವೇಳೆ ಯಾವುದೇ ತೊಂದರೆ ಉಂಟಾಗಬಾರದೆಂದು ಪ್ರಧಾನಿ ನರೇಂದ್ರ ಮೋದಿ ಅವರು ದೆಹಲಿ ವಿಮಾನ ನಿಲ್ದಾಣದಿಂದ ತಮ್ಮ ನಿವಾಸಕ್ಕೆ ತೆರಳುವುದನ್ನು ಸುಮಾರು 45 ನಿಮಿಷ ಕಾಲ ಮುಂದೂಡಿದರು.

ಅಧಿಕೃತ ಮಾಹಿತಿಯ ಪ್ರಕಾರ, ಪ್ರಧಾನಿ ಮೋದಿ ಮಧ್ಯಾಹ್ನ ಸುಮಾರು 1.15ಕ್ಕೆ ದೆಹಲಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದರು. ಸಾಮಾನ್ಯವಾಗಿ ಪ್ರಧಾನಿಯವರ ವಾಹನದ ಸಂಚಾರಕ್ಕಾಗಿ ನಿರ್ದಿಷ್ಟ ಮಾರ್ಗಗಳಲ್ಲಿ ಸಂಚಾರ ನಿಯಂತ್ರಣ ಮತ್ತು ತಾತ್ಕಾಲಿಕ ನಿರ್ಬಂಧ ಜಾರಿಗೊಳಿಸಲಾಗುತ್ತದೆ. ಆದರೆ, ಇಂದು ಮಧ್ಯಾಹ್ನ 2 ಗಂಟೆಗೆ ನೀಟ್-ಯುಜಿ ಮರುಪರೀಕ್ಷೆ ಆರಂಭವಾಗಬೇಕಿದ್ದರಿಂದ, ಸಾವಿರಾರು ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ತೆರಳುತ್ತಿದ್ದ ಸಮಯದಲ್ಲಿ ಸಂಚಾರಕ್ಕೆ ಅಡಚಣೆ ಉಂಟಾಗಬಾರದು ಎಂಬ ಕಾರಣದಿಂದ ಅವರು ವಿಮಾನ ನಿಲ್ದಾಣದಲ್ಲೇ ಉಳಿದು, ಪರೀಕ್ಷೆ ಆರಂಭವಾದ ನಂತರ ಪ್ರಧಾನಿ ತಮ್ಮ ನಿವಾಸಕ್ಕೆ ತೆರಳಿದರು.

ಮೈಸೂರಿನ 21 ಕೇಂದ್ರಗಳಲ್ಲಿ ನೀಟ್ ಮರುಪರೀಕ್ಷೆ

1847 ವಿದ್ಯಾರ್ಥಿಗಳು ಗೈರು, 6,039 ವಿದ್ಯಾರ್ಥಿಗಳು ಹಾಜರು



ಮೈಸೂರಿನ 21 ಪರೀಕ್ಷಾ ಕೇಂದ್ರಗಳಲ್ಲಿ ನೀಟ್ ಮರು ಪರೀಕ್ಷೆ ಸುಸೂತ್ರವಾಗಿ ನಡೆಯಿತು.

ಮೈಸೂರು, ಜೂ.21(ಎಂಕೆ)- ಪೊಲೀಸ್ ಬಿಗಿ ಭದ್ರತೆ, ಮೂರು ಹಂತದ ವ್ಯಾಪಕ ತಪಾಸಣೆ ಹಾಗೂ ಸಾರ್ವಜನಿಕರ ಪ್ರವೇಶ ನಿಷೇಧಾಜ್ಞೆಯೊಂದಿಗೆ ಮೈಸೂರಿನ 21 ಪರೀಕ್ಷಾ ಕೇಂದ್ರಗಳಲ್ಲಿ ನೀಟ್(ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ) ಮರು ಪರೀಕ್ಷೆ ಭಾನುವಾರ ಸುಸೂತ್ರವಾಗಿ ನಡೆಯಿತು.

ಮೈಸೂರು ನಗರದಲ್ಲಿ ನೀಟ್ ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದ 7,886 ವಿದ್ಯಾರ್ಥಿಗಳ ಪೈಕಿ 6,039 ವಿದ್ಯಾರ್ಥಿಗಳು ಪರೀಕ್ಷೆ ಬರೆದರೆ, 1847 ವಿದ್ಯಾರ್ಥಿಗಳು ಗೈರಾಗಿದ್ದರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಎಂ.ಜಿ.ಕೊಪ್ಪಲು ಸರ್ಕಾರಿ ಪದವಿ ಪೂರ್ವ ಕಾಲೇಜು, ಮೈಸೂರು ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಇಂಜಿನಿಯರಿಂಗ್, ಮಹಾರಾಣಿ ಮಹಿಳಾ ವಾಣಿಜ್ಯ ಕಾಲೇಜು, ರೀಜನಲ್ ಇನ್ಸ್ಟಿಟ್ಯೂಟ್ ಆಫ್ ಎಜುಕೇಶನ್ ಸೇರಿದಂತೆ 21 ಪರೀಕ್ಷಾ ಕೇಂದ್ರಗಳತ್ತ ಬೆಳಗ್ಗೆ 11 ಗಂಟೆಯಿಂದಲೇ ಆಗಮಿಸಿದ ವಿದ್ಯಾರ್ಥಿಗಳಿಗೆ ಮಧ್ಯಾಹ್ನ 1.30ರವರೆಗೆ ಪೊಲೀಸರು ಫ್ರಿಸ್ಕಿಂಗ್(ತಪಾಸಣೆ) ಸೇರಿದಂತೆ ಮೂರು ಹಂತದಲ್ಲಿ ತಪಾಸಣೆ ನಡೆಸಲಾಯಿತು. ಬಯೋಮೆಟ್ರಿಕ್ ಪರಿಶೀಲನೆ ನಡೆಸಿ, ಜೀನ್ಸ್ ಪ್ಯಾಂಟ್, ಬೆಲ್ಟ್, ಹೇರ್ ಕ್ಲಿಪ್, ಮೆಟಲ್, ಆಭರಣ, ತುಂಬು ತೋಳಿನ ಅಂಗಿ ಧರಿಸಿದವರನ್ನು ತಡೆದು, ಬದಲಾಯಿಸುವಂತೆ ಸೂಚಿಸಲಾಯಿತು. ನಂತರ ಶಿಕ್ಷಕರು ಪ್ರವೇಶ ಪತ್ರ ಹಾಗೂ ■6ನೇ ಪುಟಕ್ಕೆ

ಕೋಲ್ಕತ್ತಾದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪ್ರಧಾನಿ ಮೋದಿ ಭಾಗಿ

ಆರೋಗ್ಯಕರ, ಚೈತನ್ಯಭರಿತ ವೃದ್ಧಾಪ್ಯಕ್ಕೆ 'ಯೋಗ' ಮಂತ್ರ

ಯೋಗವನ್ನು ಜೀವನದ ಭಾಗವಾಗಿಸಿಕೊಳ್ಳಲು ಜನತೆಗೆ ಮನವಿ



ಕೋಲ್ಕತಾ: ಯೋಗವು ಕೇವಲ ದೇಹವನ್ನು ಸದೃಢಗೊಳಿಸುವ ಸಾಧನವಲ್ಲ, ಇದು ಆರೋಗ್ಯಕರ ಮತ್ತು ಚೈತನ್ಯಭರಿತ ವೃದ್ಧಾಪ್ಯಕ್ಕೆ ದಾರಿ. ಹೀಗಾಗಿ ಯೋಗವನ್ನು ಒಂದು ದಿನಕ್ಕೆ ಸೀಮಿತಗೊಳಿಸದೆ ಜೀವನದ ಭಾಗವಾಗಿಸಿಕೊಳ್ಳಿ ಎಂದು ಪ್ರಧಾನಿ ನರೇಂದ್ರ ಮೋದಿ ದೇಶದ ಜನತೆಗೆ ಕರೆ ನೀಡಿದ್ದಾರೆ.

ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ಕೋಲ್ಕತ್ತಾದ ಐತಿಹಾಸಿಕ ರೆಡ್ ರೋಡ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ' ಎಂಬ ಈ ಬಾರಿಯ ಘೋಷ ವಾಕ್ಯ ಕುರಿತು ಮಾತನಾಡಿದರು. ವಯಸ್ಸು ಹೆಚ್ಚಾಗುವುದು ಸಹಜ ಪ್ರಕ್ರಿಯೆಯಾಗಿದ್ದರೂ, ಆರೋಗ್ಯ ಮತ್ತು ಸಾಮರ್ಥ್ಯ ಕುಗ್ಗುವುದು ಅನಿವಾರ್ಯವಲ್ಲ. ವಯಸ್ಸು ಹೆಚ್ಚಾದಂತೆ ಅನಾರೋಗ್ಯವೂ ಹೆಚ್ಚಬೇಕು ಎಂಬ ಕಲ್ಪನೆಯನ್ನು ಬದಲಾಯಿಸುವ ಸಮಯ ಬಂದಿದೆ. ನಮ್ಮ ಗುರಿ 70ರ ವಯಸ್ಸಿನಲ್ಲಿ 50ರ ವಯಸ್ಸಿಗಿಂತ ಹೆಚ್ಚು ಜೀವನಶೈಲಿ ಹಾಗೂ ಕಾಯಿಲೆಗಳಿಗೆ ಪ್ರತಿರೋಧಕ ಶಕ್ತಿಯನ್ನು ಹೊಂದುವಂತಾಗಬೇಕು. 40ರ ವಯಸ್ಸಿನಲ್ಲಿ 20ರ ವಯಸ್ಸಿಗಿಂತ ■6ನೇ ಪುಟಕ್ಕೆ

ತಮಿಳುನಾಡು ಸಮುದ್ರಾಹಾರ ರಫ್ತು ಘಟಕದಲ್ಲಿ ಅನಿಲ ಸೋರಿಕೆ: 7 ಸಾವು, 46 ಮಂದಿ ಅಸ್ವಸ್ಥ

ಚೆನ್ನೈ: ಅಮೋನಿಯಾ ಅನಿಲ ಸೋರಿಕೆಯಾಗಿ ಏಳು ವಲಸೆ ಕಾರ್ಮಿಕರು ಸಾವನ್ನಪ್ಪಿರುವ ಘಟನೆ ತಮಿಳುನಾಡಿನ ತಿರುವಳ್ಳೂರು ಜಿಲ್ಲೆಯ ಸಮುದ್ರಾಹಾರ ರಫ್ತು ಘಟಕದಲ್ಲಿ ಭಾನುವಾರ ನಡೆದಿದ್ದು, ಇನ್ನೂ ಹಲವರು ಜೀವನ್ಮರಣ ಹೋರಾಟ ನಡೆಸುತ್ತಿದ್ದಾರೆ.


ಪೆರಿಯಪಾಳಯಂ ಬಳಿಯ ಕನ್ನಿಗೈಪೈರ್‌ನಲ್ಲಿರುವ ಸೇಂಟ್ ಪೀಟರ್ಸ್ ಮತ್ತು ಪಾಲ್ ಸೀಫುಡ್ ಎಕ್ಸ್‌ಪೋರ್ಟ್ಸ್ ಸೌಲಭ್ಯದಲ್ಲಿ ಇಂದು ಮಧ್ಯಾಹ್ನ ನಡೆದ ಘಟನೆಯ ನಂತರ 46ಕ್ಕೂ ಹೆಚ್ಚು ಕಾರ್ಮಿಕರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರಲ್ಲಿ ಕೆಲವರು ಗಂಭೀರ ಸ್ಥಿತಿಯಲ್ಲಿದ್ದಾರೆ ಎನ್ನಲಾಗಿದೆ.

ಸೀಗಡಿ ಸಂಸ್ಕರಣಾ ಘಟಕದಲ್ಲಿ ಸ್ಥಾಪಿಸಲಾದ ಅಳತೆ ■6ನೇ ಪುಟಕ್ಕೆ

ನಮ್ಮ ಡ್ಯಾಂಗಳು ತಮಿಳುನಾಡಿಗೆ ನೀರು ಬಿಡುವ ಅಣೆಕಟ್ಟೆಗಳಾಗಿವೆ

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಕಿಡಿ

- ತಮಿಳುನಾಡು ರಾಜಕೀಯ ಪಕ್ಷಗಳು ಕರ್ನಾಟಕದ ಮೇಲೆ ದಬ್ಬಾಳಿಕೆ ನಡೆಸುವುದ ನಿಲ್ಲಿಸಬೇಕು
- ಮೇಕೆದಾಟು ಎರಡು ರಾಜ್ಯಗಳಿಗೆ ಅನುಕೂಲಕರ; ತಕರಾರು ಮಾಡುವುದು ಸರಿಯಲ್ಲ



ಮಂಡ್ಯ, ಜೂ.21- ಕರ್ನಾಟಕದಲ್ಲಿ ಬರ ಪರಿಸ್ಥಿತಿ ಸೃಷ್ಟಿಯಾಗಿರುವುದು ಎಲ್ಲರಿಗೂ ಗೊತ್ತಿರುವ ವಿಚಾರವೇ. ಹೀಗಿದ್ದರೂ ನೆರೆಯ ತಮಿಳುನಾಡು ಕಾವೇರಿ ವಿಚಾರದಲ್ಲಿ ಖ್ಯಾತೆ ತೆಗೆದಿರುವುದು ಸರಿಯಲ್ಲ ಎಂದು ಬೇಸರ ವ್ಯಕ್ತಪಡಿಸಿದ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಖಾತೆ ಸಚಿವ ಹೆಚ್.ಡಿ. ಕುಮಾರಸ್ವಾಮಿ ನಮ್ಮ ಡ್ಯಾಂಗಳು ತಮಿಳುನಾಡಿಗೆ ನೀರು ಬಿಡುವ ಡ್ಯಾಂಗಳಾಗಿವೆ ಎಂದರು.

ಮಂಡ್ಯದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ನಂತರ ಮಾಧ್ಯಮಗಳ ಜೊತೆ ಮಾತನಾಡಿದ ಕೇಂದ್ರ ಸಚಿವರು, ತಮಿಳುನಾಡು ಕ್ಯಾತೆ ತೆಗೆಯುತ್ತಿರುವುದು ಇದೇ ಮೊದಲಲ್ಲ. ಕಳೆದ 50 ವರ್ಷದಿಂದಲೂ ಕಾವೇರಿ ವಿಚಾರದಲ್ಲಿ ಸಮಸ್ಯೆ ಸೃಷ್ಟಿ ಮಾಡುತ್ತಿದೆ. ತಮಿಳುನಾಡು ರಾಜ್ಯಕ್ಕೆ ನಿಗದಿಗಿಂತ ಎರಡು ಪಟ್ಟು ನೀರು ಕೊಟ್ಟಿದ್ದು ಇದೆ. ಅವರು ಅದನ್ನು ನೆನಪು ಮಾಡಿಕೊಳ್ಳುವುದಿಲ್ಲ. ಜಲಾಶಯಗಳು ತುಂಬಿದಾಗ ಯಥೇಚ್ಛವಾಗಿ ಆ ರಾಜ್ಯಕ್ಕೆ ನೀರು ಹರಿದು ಹೋಗಿದೆ. ಮಳೆ ಆಗದೆ ಜಲಾಶಯಗಳು ಖಾಲಿ ಬಿದ್ದಾಗ ಆ ರಾಜ್ಯವು ನಮ್ಮ ಮೇಲೆ ನೀರಿಗಾಗಿ ಒತ್ತಡ ಹೇರುವುದು ಸೂಕ್ತವಲ್ಲ ಎಂದು ಹೇಳಿದರು.

ವಾಸ್ತವ ಪರಿಸ್ಥಿತಿಯನ್ನು ತಮಿಳುನಾಡಿನವರು ಅರ್ಥ ಮಾಡಿಕೊಳ್ಳಬೇಕು. ನೆರೆಹೊರೆ ರಾಜ್ಯಗಳಲ್ಲಿ ವಾಸ ಮಾಡುವ ನಾವು ಅಣ್ಣ-ತಮ್ಮಂದಿರಂತೆ ಇರಬೇಕು. ಒಕ್ಕೂಟ ವ್ಯವಸ್ಥೆಯಲ್ಲಿ ತಿಕ್ಕಾಟ ನಡೆಸುವುದು ಸರಿಯಲ್ಲ. ಇರುವ ಪರಿಸ್ಥಿತಿಯನ್ನು ಅರಿತು ಪರಸ್ಪರ ಹಂಚಿಕೊಂಡು ನಡೆದರೆ ಎರಡು ರಾಜ್ಯಗಳಿಗೂ ಉತ್ತಮ ಎಂಬುದನ್ನು ತಮಿಳುನಾಡು ತಿಳಿದುಕೊಳ್ಳಬೇಕು. ಹೊರತುಪಡಿಸಿ ಕಾಲು ಕೆರೆದು ಜಗಳಕ್ಕೆ ಬರುವುದು ಒಳ್ಳೆಯ ನಡೆ ಅಲ್ಲ ಎಂದು ■6ನೇ ಪುಟಕ್ಕೆ

12 ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಮೈಸೂರು ಅರಮನೆ ಆವರಣದಲ್ಲಿ ಸಾವಿರಾರು ಜನರಿಂದ ಯೋಗ ಪ್ರದರ್ಶನ

- 'ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ' ಘೋಷ ವಾಕ್ಯದಡಿ ಕಾರ್ಯಕ್ರಮ
- ಜನಪ್ರತಿನಿಧಿಗಳು, ಗಣ್ಯರು ಭಾಗಿ
- ಮೋದಿಯಿಂದ ಯೋಗಕ್ಕೆ ಅಂತಾರಾಷ್ಟ್ರೀಯ ಮನ್ನಣೆ
- ಯೋಗದಿಂದ ಸ್ವಾಸ್ಥ್ಯ ಆರೋಗ್ಯ ಲಾಭ





ಮೈಸೂರು ಅರಮನೆ ಆವರಣದಲ್ಲಿ ಭಾನುವಾರ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ನಡೆದ ಯೋಗ ಪ್ರದರ್ಶನದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಸಂಸದ ಯದುವೀರ್, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಮತ್ತಿತರರು ಭಾಗವಹಿಸಿದ್ದರು.

ಮೈಸೂರು, ಜೂ.21(ಬಿಎಲ್‌ಯು)- ವಿಶ್ವ ವಿಖ್ಯಾತ ಮೈಸೂರು ಅರಮನೆ ಆವರಣದಲ್ಲಿ ಇಂದು 12ನೇ ಅಂತಾ ರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಸಾವಿರಾರು ಮಂದಿ ಯೋಗ ಪ್ರದರ್ಶಿಸಿದರು.

ಮೈಸೂರು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮೈಸೂರು ಅರಮನೆ ಮಂಡಳಿ ಹಾಗೂ ಆಯುಷ್ ಇಲಾಖೆ ಸಂಯುಕ್ತವಾಗಿ 'ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ' ಎಂಬ ಘೋಷ ವಾಕ್ಯದೊಂದಿಗೆ ಆಯೋಜಿಸಿದ್ದ ಯೋಗ ದಿನಾಚರಣೆಯಲ್ಲಿ ವಿಶೇಷ ಚೇತನ ಮಕ್ಕಳು, ಯೋಗಪಟುಗಳು, ಯೋಗಾಸಕ್ತರು ಸಹಸ್ರಾರು ಸಂಖ್ಯೆ ಯಲ್ಲಿ ಪಾಲ್ಗೊಂಡು ಯೋಗ ದಿನವನ್ನು ಸಂಭ್ರಮಿಸಿದರು.

ಯೋಗ ದಿನಾಚರಣೆಯನ್ನು ಉದ್ಘಾಟಿಸಿದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಯೋಗಕ್ಕೆ ಅಂತಾರಾಷ್ಟ್ರೀಯ ಮನ್ನಣೆ ದೊರಕಿಸಿಕೊಟ್ಟಿದ್ದಾರೆ. ಅಂತಾರಾಷ್ಟ್ರೀಯ ಯೋಗ ದಿನವಾದ ಇಂದು ಮೈಸೂರು, ಕರ್ನಾಟಕ, ಭಾರತ ಮಾತ್ರವಲ್ಲದೆ ವಿಶ್ವದ ಬಹಳಷ್ಟು ದೇಶಗಳಲ್ಲಿ ಯೋಗ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಗುತ್ತಿದೆ ಎಂದರು.

ಯೋಗಕ್ಕೂ ಮೈಸೂರಿಗೂ ಅವಿನಾಭಾವ ನಂಟಿದೆ. ನಮ್ಮ ಪೂರ್ವಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಯೋಗಕ್ಕೆ ಉತ್ತೇಜನ ನೀಡಿದ್ದರು. ಮೈಸೂರಿನ ಸಂಸ್ಕೃತ ಪಾಠಶಾಲೆಯಲ್ಲಿ ಯೋಗ ಶಿಕ್ಷಣಕ್ಕೆ ಆದ್ಯತೆ ನೀಡಿದರು. ಅಂದಿನಿಂದ ಮೈಸೂರಿನಲ್ಲಿ ಯೋಗಾಭ್ಯಾಸ ಸಂಸ್ಕೃತಿಯ ನೆಲೆಗಟ್ಟಿನಲ್ಲಿ ನಿರಂತರವಾಗಿ ಮುಂದುವರೆದು ಬಂದಿದೆ ಎಂದು ತಿಳಿಸಿದರು.

ಯೋಗದಿಂದ ದೈಹಿಕ, ಮಾನಸಿಕ ಸಮತೋಲನ ಹಾಗೂ ಸ್ವಾಸ್ಥ್ಯ ಆರೋಗ್ಯ ಕಾಪಾಡಿಕೊಳ್ಳಬಹುದು. ಯೋಗಾಭ್ಯಾಸದಿಂದ ಮಾನಸಿಕ ತೃಪ್ತಿಯೂ ದೊರೆಯುತ್ತದೆ ಎಂದು ಅಭಿಪ್ರಾಯಪಟ್ಟ ಅವರು, ಯೋಗ ಭಾರತದ ■6ನೇ ಪುಟಕ್ಕೆ

ತಮಿಳುನಾಡಿನ ಸಿಎಂ ವಿಜಯ್ ಸರ್ಕಾರದಲ್ಲಿ ರಾಮರಾಜ್ಯ ನಿರ್ಮಾಣದ ಲಕ್ಷಣ ಕಾಣುತ್ತಿದೆ

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾಜಿ ನಿರ್ದೇಶಕಿ ಡಾ.ಲೋಲಾಕ್ಷಿ ಅಭಿಪ್ರಾಯ



ಮೈಸೂರಿನ ರೋಟರಿ ಸಭಾಂಗಣದಲ್ಲಿ ಆಯೋಜಿಸಿದ್ದ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಡಾ.ಲೋಲಾಕ್ಷಿ ಮಾತನಾಡಿದರು.

ಮೈಸೂರು, ಜೂ.21(ಬಿಎಲ್‌ಯು)– ಪ್ರಸ್ತುತ ತಮಿಳುನಾಡಿನ ಮುಖ್ಯಮಂತ್ರಿ ವಿಜಯ್ ಸರ್ಕಾರದಲ್ಲಿ ರಾಮರಾಜ್ಯ ನಿರ್ಮಾಣವಾಗುವ ಲಕ್ಷಣಗಳು ಕಾಣುತ್ತಿವೆ ಎಂದು ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿಕಟಪೂರ್ವ ನಿರ್ದೇಶಕಿ ಡಾ.ಲೋಲಾಕ್ಷಿ ಅಭಿಪ್ರಾಯಪಟ್ಟರು.

ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ಮಹರ್ಷಿ ವಾಲ್ಮೀಕಿ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ "ವಾಲ್ಮೀಕಿ ಜನಾಂಗ: ಸಾಂಸ್ಕೃತಿಕ ಪ್ರಶ್ನೆಗಳು" ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ವಿಜಯ್ ಅವರು ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ಪರಿಣಾಮಕಾರಿಯಾದ ಹಲವು ಸುಧಾರಣೆಗಳನ್ನು ತಂದಿದ್ದಾರೆ ಎಂದರು.

ತಮಿಳುನಾಡಿನಲ್ಲಿ ಎಲ್ಲೆ ಮಹಿಳಾ ದೌರ್ಜನ್ಯವಾದರೂ ನನ್ನನ್ನೆ ನೇರವಾಗಿ ಭೇಟಿ ಮಾಡಿ ದೂರು ನೀಡಬಹುದು ಎಂದು ಭರವಸೆ ನೀಡಿದ್ದಾರೆ. ಅಲ್ಲದೆ ಬೇಜವಾಬ್ದಾರಿ ತೋರಿರುವ ಹಲವು ಅಧಿಕಾರಿಗಳನ್ನು ಅಮಾನತು ಮಾಡಿದ್ದಾರೆ. ಈ ಮೂಲಕ ಆಡಳಿತದಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ಹಲವು ಕಠಿಣ ಕ್ರಮ ಕೈಗೊಂಡಿದ್ದಾರೆ ಹಾಗೂ ಕೈಗೊಳ್ಳುತ್ತಿದ್ದಾರೆ ಎಂದರು.

ಇದನ್ನೆಲ್ಲಾ ನೋಡಿದರೆ ವಿಜಯ್ ಅವರ ಸರ್ಕಾರದ ಅವಧಿಯಲ್ಲಿ ತಮಿಳುನಾಡಿನಲ್ಲಿ ರಾಮರಾಜ್ಯ ನಿರ್ಮಾಣದ ಲಕ್ಷಣಗಳು ಗೋಚರಿಸುತ್ತಿವೆ. ರಾಮ ರಾಜ್ಯ ಎಂದರೆ ಮಧ್ಯರಾತ್ರಿ ಮಹಿಳೆ ನಿರ್ಭೀತಿಯಿಂದ ಓಡಾಡುವಂತಹ ಪರಿಸ್ಥಿತಿಯಾಗಿದೆ. ಇದನ್ನೆ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರು ಹೇಳಿದ್ದರು. ಇಂತಹ ರಾಮರಾಜ್ಯದ ಪರಿಕಲ್ಪನೆ ದೇಶದಲ್ಲಿ ಸಾಕಾರಗೊಳ್ಳಬೇಕು ಎಂದು ಆಶಿಸಿದರು.

ವಾಲ್ಮೀಕಿ ರಾಮಾಯಣದಲ್ಲಿ ಶಬರಿ, ಗುಹ ಎಂಬ ರಾಜ ಸೇರಿದಂತೆ ಹಲವು ವಿಶಿಷ್ಟ ವ್ಯಕ್ತಿತ್ವಗಳು ಅನಾವರಣಗೊಂಡಿದೆ. ರಾಮನಲ್ಲಿದ್ದ ಅವರ ಶ್ರೇಷ್ಠ ಭಕ್ತಿಯನ್ನು ವಾಲ್ಮೀಕಿಯವರು ತುಮ್ಬ ಬರಹದಲ್ಲಿ ವಿವರಿಸಿದ್ದಾರೆ ಎಂದರು. ರಾಜ್ಯ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಕನ್ನಡ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಹಿರಿಯ ಪ್ರಾಧ್ಯಾಪಕ ಪ್ರೊ.ಪ್ರಶಾಂತ್ ನಾಯಕ್, ಮಹರ್ಷಿ ವಾಲ್ಮೀಕಿ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ನಂಜುಂಡಸ್ವಾಮಿ ಹರದನಹಳ್ಳಿ ಸೇರಿದಂತೆ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವಿವಿಧ ಕ್ಷೇತ್ರದ ಸಾಧಕರಿಗೆ 'ಶ್ರೀ ನಾಲ್ವಡಿ' ಪ್ರಶಸ್ತಿ ಪ್ರದಾನ



ಮೈಸೂರು ಕನ್ನಡ ವೇದಿಕೆ ವತಿಯಿಂದ ಭಾನುವಾರ ವಿವಿಧ ಕ್ಷೇತ್ರದ ಸಾಧಕರಿಗೆ 'ಶ್ರೀ ನಾಲ್ವಡಿ' ಪ್ರಶಸ್ತಿ ನೀಡಿ, ಆತ್ಮೀಯವಾಗಿ ಅಭಿನಂದಿಸಲಾಯಿತು.

ಮೈಸೂರು,ಜೂ.21(ಎಂಕೆ)– ಮೈಸೂರಿನ ಸುಬ್ಬರಾಯನಕೆರೆಯ ಸ್ವಾತಂತ್ರ್ಯ ಉದ್ಯಾನವನದಲ್ಲಿನ ಯೋಗ ಮಂಟಪದಲ್ಲಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಆಯೋಜಿಸಿದ್ದ ರಾಜರ್ಷಿ ಕೃಷ್ಣರಾಜ ಒಡೆಯರ್ ಜಯಂತ್ಯೋತ್ಸವದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ 'ಶ್ರೀ ನಾಲ್ವಡಿ' ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ರಾಜರ್ಷಿ ಕೃಷ್ಣರಾಜ ಒಡೆಯರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ ಪ್ರಗತಿಪರ ಚಿಂತಕ ಪ್ರೊ.ಕೆ.ಕಾಳಚನ್ನೇಗೌಡ, ವಿವಿಧ ಕ್ಷೇತ್ರದ ಸಾಧಕರಾದ ಎ.ಪಿ.ನಾಗೇಶ್(ಸಮಾಜ ಸೇವೆ), ಡಾ.ಕೆ.ಬಿ.ಲಿಂಗರಾಜು(ಉದ್ಯಮ), ಎಂ.ಆರ್.ಅನಿತಾ (ಶಿಕ್ಷಣ), ಸಾಯಿ ಚಾಮರಾಜ ಮಂಡಕಳ್ಳಿ(ಹೋರಾಟ), ಸಿ.ನಾರಾಯಣಗೌಡ(ಉದ್ಯಮ ಮತ್ತು ಸಮಾಜ ಸೇವೆ), ಮೋಹನ್ ಕಾಯಕ (ಪತ್ರಿಕಾ), ಎಸ್.ಶಿವಕುಮಾರ್ (ಪೋಲೀಸ್ ಇಲಾಖೆ), ಜಿ.ಯದುನಂದನ್(ಸಮಾಜ ಸೇವೆ), ಸಾಲುಂಡಿ ದೊರೆಸ್ವಾಮಿ(ಶಿಕ್ಷಣ ಕ್ಷೇತ್ರ), ಕೆ.ಬ್ಬಯ್ಯ ಸ್ವಾಮೀಜಿ (ಹೋರಾಟ) ಅವರಿಗೆ 'ಶ್ರೀ ನಾಲ್ವಡಿ' ಪ್ರಶಸ್ತಿ ಪ್ರದಾನ ಮಾಡಿದರು.

ಬಳಿಕ ಮಾತನಾಡಿದ ಅವರು, ಸಮಾಜಮುಖಿಯಾಗಿ ಕೆಲಸ ಮಾಡುವವರನ್ನು ಗುರುತಿಸಿ ಪ್ರೋತ್ಸಾಹ ನೀಡುವ ಮೂಲಕ ಮತ್ತಷ್ಟು ಉತ್ತೇಜನ ನೀಡುವುದು ಶ್ಲಾಘನೀಯ. ಪ್ರಾಮಾಣಿಕರನ್ನು ಸದಾ ಪ್ರೋತ್ಸಾಹಿಸುತ್ತಿದ್ದ ಸಹೃದಯಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು, ತಮ್ಮ ಆಸ್ಥಾನದಲ್ಲಿ ಕೆಲಸ ಮಾಡುವ ಪ್ರಾಮಾಣಿಕರಿಗೆ ಗೌರವ ಸಂಭಾವನೆಯನ್ನು ನೀಡಿ ಅಭಿನಂದಿಸುತ್ತಿದ್ದರು ಎಂದು ಸ್ಮರಿಸಿದರು.

ಸ್ವಾತಂತ್ರ್ಯ ಪೂರ್ವದಲ್ಲಿದ್ದ ಸುಮಾರು 560 ಸಂಸ್ಥಾನಗಳಲ್ಲಿ ಜನೋಪಕಾರಿ ಸಂಸ್ಥಾನವೆಂದರೆ ಅದು ಮೈಸೂರು ಸಂಸ್ಥಾನ. ಆಡಳಿತ ಸುಧಾರಣೆಗಾಗಿ ಮತ್ತು ಭ್ರಷ್ಟಾಚಾರ ಮುಕ್ತ ಜನಸೇವೆಗಾಗಿ ಉತ್ತಮ ಅಧಿಕಾರಿಗಳನ್ನು ನೇಮಿಸಲಾಗುತ್ತಿತ್ತು. ಉತ್ತಮ ಅಧಿಕಾರಿಗಳ ನೇಮಕ ಉತ್ತಮ ಆಡಳಿತಕ್ಕೆ ಸಹಕಾರಿ ಎಂಬುದನ್ನು ಅರಿತಿದ್ದ ನಾಲ್ವಡಿ ಅವರು, ಪ್ರಾಮಾಣಿಕರನ್ನು ಶೋಧಿಸಿ ಅವಕಾಶಗಳನ್ನು ನೀಡುತ್ತಿದ್ದರು ಎಂದು ತಿಳಿಸಿದರು.

ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವೇದಿಕೆ ಪದಾಧಿಕಾರಿಗಳಾದ ನಾಲಬೀದಿ ರವಿ, ಮನೋಹರ್, ಸಾಲುಂಡಿ ದೊರೆಸ್ವಾಮಿ, ಬೋಗಾದಿ ಸಿದ್ದೇಗೌಡ, ಗುರುಬಸಪ್ಪ ಪ್ಯಾಲೇಸ್ ಬಾಬು, ಗೋಪಿ, ಬೀಡಾಬಾಬು, ಕಾವೇರಮ್ಮ, ಮಾಲಿನಿ, ಭವಾನಿ, ಪುಷ್ಪಲತಾ, ಎಲ್‌ಐಸಿ ಸಿದ್ದಪ್ಪ, ಗೋವಿಂದರಾಜು, ಹೊಸಕೆರೆ ಸ್ವಾಮಿ, ಮಾದಪ್ಪ, ಹರೀಶ್‌ಕುಮಾರ್, ಚಂದ್ರು, ಶಿವೇಗೌಡ, ಚಿನ್ನಪ್ಪ, ಸ್ವಾಮಿ ಗೈಡ್, ಸುನೀಲ್ ಮತ್ತಿತರರಿದ್ದರು.

ಪತ್ರಿಕಾ ವಿತರಕರಿಗೆ ರೈನ್‌ಕೋಟ್ ವಿತರಿಸಿ ಮಾಜಿ ಸಂಸದ ಪ್ರತಾಪ್ ಸಿಂಹ ಹುಟ್ಟುಹಬ್ಬ ಆಚರಣೆ


ಸಾಮಾಜಿಕ ಸೇವಾ ಕಾರ್ಯದ ಮೂಲಕ ಮಾಜಿ ಸಂಸದ ಪ್ರತಾಪ್ ಸಿಂಹ ಅವರ ಹುಟ್ಟುಹಬ್ಬ ಆಚರಿಸಲಾಯಿತು.

ಮೈಸೂರು, ಜೂ.21(ಎಂಕೆ)– ಪತ್ರಿಕಾ ವಿತರಕರಿಗೆ ರೈನ್‌ಕೋಟ್ ವಿತರಣೆ ಹಾಗೂ ವಿವಿಧ ಸಾಮಾಜಿಕ ಸೇವಾ ಕಾರ್ಯಗಳ ಮೂಲಕ ಮಾಜಿ ಸಂಸದ ಪ್ರತಾಪ್ ಸಿಂಹ ಅವರ ಹುಟ್ಟುಹಬ್ಬ ಆಚರಿಸಲಾಯಿತು.

ಮೈಸೂರಿನ ಚಿಕ್ಕಗಡಿಯಾರದ ಎದುರು ಬಿಜೆಪಿ ಮುಖಂಡ ಆರ್.ಪರಮೇಶ್ ಗೌಡ ನೇತೃತ್ವದಲ್ಲಿ ದಿನ ಬೆಳಗ್ಗೆ ಮನೆ ಮನೆಗೆ ಪತ್ರಿಕೆಗಳನ್ನು ರವಾನಿಸುವ ಪತ್ರಿಕಾ ವಿತರಕರಿಗೆ ರೈನ್‌ಕೋಟ್ ವಿತರಣೆ ಮಾಡಲಾಯಿತು. ಇದಕ್ಕೂ ಮುನ್ನ ದಿವಾನ್ಸ್ ರಸ್ತೆಯಲ್ಲಿರುವ ಅಮೃತೇಶ್ವರ ದೇವಸ್ಥಾನದಲ್ಲಿ ಮಾಜಿ ಸಂಸದ ಪ್ರತಾಪ್ ಸಿಂಹ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಮುಖಂಡರಾದ ಚೇತನ್, ಎಂ.ಕೆ.ಸುಂದರ್, ಟೆನಿಸ್ ಗೋಪಿ, ಸುರೇಂದ್ರ, ಬ್ರಹ್ಮಚಾರ್, ಗ್ಯಾರೇಜ್ ಶಿವಣ್ಣ, ಗಾಂಧಿನಗರ ವಿಜಯ್, ಗೋಪಾಲ್, ಕಲ್ಕೆರೆ ನಾಗರಾಜ್, ಸಾಗರ್‌ಶೆಟ್ಟಿ, ರವಿ ಕುಂಚಿಟಿಗ, ವಿನೋದ್ ಅರಸು, ಮೋಹನ, ಕೃಷ್ಣಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

ಅರ್ಚನೆ: ಬಿಜೆಪಿ ಚಾಮರಾಜ ವಿಧಾನಸಭಾ ಕ್ಷೇತ್ರದ ವತಿಯಿಂದ ಒಂಟಿಕೊಪ್ಪಲಿನ ಶ್ರೀ ಲಕ್ಷ್ಮಿ ವೆಂಕಟೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಸಿಹಿ ವಿತರಿಸುವ ಮೂಲಕ ಮಾಜಿ ಸಂಸದ ಪ್ರತಾಪ್ ಸಿಂಹರ ಹುಟ್ಟುಹಬ್ಬ ಆಚರಿಸಲಾಯಿತು. ಬಿಜೆಪಿ ಸಹ ವಕ್ತಾರ ಎಂ.ಜೆ.ಕಿರಣ್ ಗೌಡ, ಚಾಮರಾಜ ಕ್ಷೇತ್ರದ ಅಧ್ಯಕ್ಷ ದಿನೇಶ್‌ಗೌಡ, ಮಹಿಳಾ ಮೋರ್ಚಾ ಅಧ್ಯಕ್ಷೆ ಶಶಿಕಲಾ, ಮುಖಂಡರಾದ ಮಹೇಶ್, ಆರ್‌ಎಕ್ಸ್ ಪ್ರಕಾಶ್, ಎಸ್.ಕೆ.ದಿನೇಶ್, ಮಾಜಿ ಉಪಮೇಯರ್ ಶೈಲೇಂದ್ರ, ಪ್ರಕಾಶ್, ಬಂಗಾರಪ್ಪ, ಗಣೇಶ್ ಮತ್ತಿತರರಿದ್ದರು.

ನಾಳೆ ಮೈಸೂರಲ್ಲಿ ಕಾರ್ಯಾಗಾರ

ಮೈಸೂರು: ವಿಶ್ವ ಪರಿಸರ ದಿನಾಚರಣೆ ಹಿನ್ನೆಲೆ ಮೈಸೂರಿನ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ವತಿಯಿಂದ ನಗರ ಪ್ರದೇಶಗಳಲ್ಲಿ 'ಬ್ಲೂ–ಗ್ರೀನ್ ನೆಟ್‌ವರ್ಕ್‌ಗಳನ್ನು ಸುಧಾರಿಸುವ ತಂತ್ರಗಳು' ಕುರಿತ ಕಾರ್ಯಾಗಾರವನ್ನು ಜೂ.23ರಂದು ಮಾನಸ ಗಂಗೋತ್ರಿಯ ಪ್ರೊ.ಕೆ.ಎಸ್.ರಂಗಪ್ಪ ಸಭಾಂಗಣದಲ್ಲಿ ಬೆಳಗ್ಗೆ 10.30ಕ್ಕೆ ಆಯೋಜಿಸಲಾಗಿದೆ. ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತ ನಿತೇಶ್‌ಪಾಟೀಲ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮೈಸೂರು ವಿವಿ ಕುಲಪತಿ ಪ್ರೊ.ಲೋಕನಾಥ್, ಐಟಿಪಿಐ ಮೈಸೂರು ಕೇಂದ್ರದ ಸಂಚಾಲಕ ಪ್ರೊ.ಶಂಕರ್, ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್‌ನ ಅಧಿಕಾರಿಗಳು, ಸಿಬ್ಬಂದಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್‌ಗೆ ಸತತ ಎರಡನೇ ಜಯ


ರೋಹನ್ ಪಾಟೀಲ್ ಬ್ಯಾಟಿಂಗ್ ವೈಖರಿ.

ಮೈಸೂರು, ಜೂ.21(ವಿವಿಹೆಚ್)– ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಮಹಾರಾಜ ಟ್ರೋಫಿ ಸೀಸನ್–5ರ ನಾಲ್ಕನೇ ಲೀಗ್ ಪಂದ್ಯದಲ್ಲಿ ಶಿವಮೊಗ್ಗ ಯೋಧಾಸ್ ತಂಡದ ವಿರುದ್ಧ ಕಲ್ಯಾಣಿ ಬ್ಲಾಸ್ಟರ್ಸ್ ಬೆಂಗಳೂರು 5 ರನ್‌ಗಳ ರೋಚಕ ಗೆಲುವು ದಾಖಲಿಸಿತು. ಇದರೊಂದಿಗೆ ತಾವಾಡಿದ ಮೊದಲೆರಡು ಪಂದ್ಯದಲ್ಲಿ ಗೆಲುವು ದಾಖಲಿಸಿ ಅಗ್ರಸ್ಥಾನ ಅಲಂಕರಿಸಿತು.

ಸುಮಾರು 2 ಗಂಟೆಗಳಿಗೂ ಹೆಚ್ಚಿನ ಕಾಲ ಸುರಿದ ಮಳೆಯಿಂದಾಗಿ ಈ ಪಂದ್ಯವನ್ನು 10 ಓವರ್‌ಗಳಿಗೆ ಸೀಮಿತಗೊಳಿಸಲಾಯಿತು. ಅದರಂತೆ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಬೆಂಗಳೂರು ಭುವನ್ ಮೋಹನ್ ರಾಜು 23(13), ರೋಹನ್ ಪಾಟೀಲ್ ಅಜೇಯ 51(23) ಕೆ.ಶ್ರೀಜಿತ್ ಅಜೇಯ 47(25) ಬ್ಯಾಟಿಂಗ್ ನೆರವಿನಿಂದ 10 ಓವರ್‌ಗಳಲ್ಲಿ ಕೇವಲ 1 ವಿಕೆಟ್ ನಷ್ಟಕ್ಕೆ 124ರನ್ ಪೇರಿಸಿತು. ಶಿವಮೊಗ್ಗ ಪರ ಶ್ರೀಶಾ ಆಚಾರ್ 1 ವಿಕೆಟ್ ಪಡೆದರು.

125 ರನ್‌ಗಳ ಟಾರ್ಗೆಟ್ ಬೆನ್ನತ್ತಿದ ಶಿವಮೊಗ್ಗ 10 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 119 ರನ್ ಗಳಿಸಿ ಸೋಲೊಪ್ಪಿಕೊಂಡಿತು.

ಶಿವಮೊಗ್ಗ ಪರ ಲುವ್ನಿತ್ ಸಿಸೋಡಿಯಾ 11(5), ತುಷಾರ್ ಸಿಂಗ್ 5(5), ಕೆವಿ.ಅನೀಶ್ 12(6), ನಾಯಕ ಸಮರ್ ರವಿಚಂದ್ರನ್ ಗೋಲ್ಡನ್ ಡಕ್, ಹರ್ಷಿಲ್ ಧರ್ಮಾನಿ 13(9), ಆದರ್ಶ್ ಪ್ರಜ್ವಲ್ 17(9), ಎಂ.ಜಿ.ನವೀನ್ 16(6), ಯಶೋವರ್ಧನ್ ಪರಣ್ತಾಪ್ ಅಜೇಯ 38(6), ಮೋಹ್ಸಿನ್ ಖಾನ್ 2(1), ಅಭಿಲಾಷ್ ಶೆಟ್ಟಿ ಅಜೇಯ 2(2) ರನ್ ಕಲೆಹಾಕಿದರು.

ಬೆಂಗಳೂರು ಪರ ನಾಯಕ ಶುಭಾಂಗ್ ಹೆಗ್ಡೆ, ಪ್ರವೀಣ್ ದುಬೆ ಹಾಗೂ ಶ್ರೀವತ್ಸ ಆಚಾರ್ಯ ತಲಾ 2 ವಿಕೆಟ್ ಪಡೆದರೆ, ಸಮಿತ್ ದ್ರಾವಿಡ್ ಒಂದು ವಿಕೆಟ್ ಪಡೆದರು.

ಭಾನುವಾರ ಮಧ್ಯಾಹ್ನ ನಡೆಯಬೇಕಿದ್ದ ಹುಬ್ಬಳ್ಳಿ ಟೈಗರ್ಸ್ ಮತ್ತು ಕೋಸ್ಟಲ್ ಕಿಂಗ್ಸ್ ಮಂಗಳೂರು ನಡುವಣ ಪಂದ್ಯ ಮಳೆಯಿಂದಾಗಿ ರದ್ದಾಯಿತು.

1.30ರ ವೇಳೆಗೆ ಪ್ರಾರಂಭವಾದ ಮಳೆ ಬಿಟ್ಟು ಬಿಡದೇ ಕಾಡಿತ್ತು. 4 ಗಂಟೆ ವೇಳೆಗೆ ಮಳೆ ನಿಂತಿತು. ಪಿಚ್ ಪರಿಷ್ಕರಣೆಗಾಗಿ ಸಂಜೆ 5 ಗಂಟೆ ನಿಗದಿಪಡಿಸಲಾಗಿತ್ತು. 4.30ರ ವೇಳೆ ಮತ್ತೆ ಬಂದ ಮಳೆರಾಯ ಪಂದ್ಯಕ್ಕೆ ಅಡ್ಡಿಪಡಿಸಿದ

ಮಳೆ ವಿಪರೀತವಾಗುತ್ತಿದ್ದಂತೆ ಮ್ಯಾಚ್ ರೆಫ್ರಿ ಪಂದ್ಯವನ್ನು ಕಾಲ್‌ಆಫ್ ಮಾಡಿದರು. ಅದರಂತೆ ಇತ್ತಂಡಗಳ ನಡುವೆ ನಡೆಯಬೇಕಿದ್ದ ಮೊದಲ ಪಂದ್ಯ ಮಳೆಯಿಂದ ರದ್ದಾಯಿತು. ಇದರೊಂದಿಗೆ ಎರಡು ತಂಡಕ್ಕೂ ತಲಾ ಒಂದೊಂದು ಅಂಕ ಲಭಿಸಿತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.06.2026 ಸೋಮವಾರ, ಮಳೆ ನಕ್ಷತ್ರ: ಆರ್ದ್ರಾ, 22.06.2026ರಿಂದ 05.07.2026ವರೆಗೆ, ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಉತ್ತರಾ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ವಿದ್ಯಾವರ್ಧಕ ಪಿಯು ಕಾಲೇಜು:** ಮೊದಲ ವರ್ಷದ ಪದವಿ ಪೂರ್ವ ವಿದ್ಯಾರ್ಥಿಗಳ ಪರಿಚಯ, ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ, ದಿವ್ಯ ಸಾನ್ನಿಧ್ಯ: ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಕರೆಸ್ಪಾಂಡೆಂಟ್ ಸ್ವಾಮಿ ಯುಕ್ತೇಶಾನಂದಜಿ ಮಹಾರಾಜ್, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಗೌರವಾಧ್ಯಕ್ಷ ಗುಂಡಪ್ಪ ಗೌಡ, ಮುಖ್ಯ ಅತಿಥಿ: ವಿವಿಎಸ್ ಕಾರ್ಯದರ್ಶಿ ಪಿ.ವಿಶ್ವನಾಥ್, ಕೋಶಾಧಿಕಾರಿ ಶ್ರೀಶೈಲ್ ರಾಮಣ್ಣನವರ್, ವಿದ್ಯಾವರ್ಧಕ ಸಂಘದ ಸದಸ್ಯರಾದ ಶ್ರೀಮತಿ ವಿ.ಆರ್. ಶ್ಯಾಮಲಾ, ಸ್ಥಳ: ಶ್ರೀ ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಕಾಲೇಜು ಆವರಣ, ಶೇಷಾದ್ರಿ ಅಯ್ಯರ್ ರಸ್ತೆ, ಬೆಳಿಗ್ಗೆ 10 ಗಂಟೆಗೆ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆನ್ನುನೋವು, ಕತ್ತು ನೋವಿನ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಅರ್ಥ್ರೈಟಿಸ್ ಚಿಕಿತ್ಸಾ ಶಿಬಿರ, ಭುಜನೋವು, ಲಂಬಾರ್ ಸ್ಪಾಂಡಿಲೋಸಿಸ್, ಸೈಯಾಟಿಕಾ ತೊಂದರೆಗಳ ತಪಾಸಣಾ ಚಿಕಿತ್ಸಾ ಶಿಬಿರ, ಅಸೃಗ್ದರ (ಗರ್ಭಾಶಯ ರಕ್ತಸ್ರಾವ) ಚಿಕಿತ್ಸಾ ಶಿಬಿರ, ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ, ಬೆಳಗ್ಗೆ 9.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಗೀತಾರಾಧನ, 6.30 ಚಿಂತನ–ದಿವಾಕರ ಡೋಂಗ್ರೆ, 6.35 ಮತ್ತು ಸಂಜೆ 6.10: ಸಸ್ಯ ಸಿರಿ–ಆಹಾರವಾಗಿ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ರಾಧಿಕಾ ಭಟ್, 7.45 ಚಿತ್ರಗೀತೆಗಳು, 8.30 ಚಿತ್ರಗೀತೆಗಳು, 9.00 ನೆನಪಿನಂಗಳ–ಧ್ವನಿ ಮುದ್ರಣ ಭಂಡಾರದಿಂದ ಆಯ್ದ ಕಾರ್ಯಕ್ರಮ. ಹಿರಿಯ ಸಂಗೀತ ವಿದ್ವಾಂಸರಾದ ಪಂಡಿತ್ ಪುಟ್ಟರಾಜ ಗವಾಯಿ ಅವರೊಂದಿಗೆ ಆರ್.ಎನ್.ತ್ಯಾಗರಾಜನ್ ಅವರು ನಡೆಸಿದ್ದ ಸಂವಾದ. 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಚೆಪ್ಪಾಡ್ ಎ.ಇ.ವಾಮನನ್ ನಂಬೂದರಿ ಅವರ ಹಾಡುಗಾರಿಕೆಯಲ್ಲಿ ಸ್ವಾತಿತಿರುನಾಳರ ರಚನೆಗಳು. 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಗೇಮ್ ಷೋ. ಪ್ರಸ್ತುತಿ–ಕೀರ್ತನಾ ವಿ. ಮತ್ತು ಚಿನ್ಮಯಿ ಕೆ.ಎಸ್. **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ನಮ್ಮ ಆರೋಗ್ಯ –ಮಕ್ಕಳಲ್ಲಿ ಕಣ್ಣಿನ ಸಮಸ್ಯೆಗಳು ಮತ್ತು ಪರಿಹಾರ ಈ ಕುರಿತು ಮೈಸೂರಿನ ನೇತ್ರ ತಜ್ಞರಾದ ಡಾ.ರವಿಶಂಕರ್ ಜಿ. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ ತೇಜಸ್ವಿನಿ ಗಿರೀಶ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ–ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆ ಕುರಿತು ಮಾಹಿತಿ. 1.20 ಭಾವಗೀತೆಗಳು–ಪೃಥ್ವಿ ಎಸ್.ಭಾರದ್ವಾಜ್, 2.30 ಪ್ರದೇಶ ಸಮಾಚಾರ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಚಿತ್ರಾ ಶ್ರೀಕೃಷ್ಣ–ಹಾಡುಗಾರಿಕೆ 4.00–ಮಹಿಳಾರಂಗ–ವಿಶ್ವಯೋಗ ದಿನಾಚರಣೆ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ 'ಯೋಗವೇ ಜೀವನ''. ಪ್ರಸ್ತುತಿ–ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಮೈಸೂರು ಜಿಲ್ಲಾ ಸಮಿತಿ ಸದಸ್ಯರು. 4.30 ಹಿಂದಿ ಚಿತ್ರಗೀತೆಗಳು, 4.45 ಭಾಷಾ ಭಾರತಿ–ವಿಶೇಷ ಹಿಂದಿ ಪಾಠ ಸರಣಿ–ಸಹಯೋಗ ಭಾರತೀಯ ಭಾಷಾ ಸಂಸ್ಥಾನ, ಮೈಸೂರು. ಭಾಗವಹಿಸುವವರು–ಡಾ.ಬೀರೇಶ್‌ಕುಮಾರ್, ಡಾ.ಅಮಿತ್ ಕುಮಾರ್ ಝಾ ಹಾಗೂ ಚೇತನ್ ಬಾಜಿ, 5.00 ಡಾ.ಅಗರ್‌ವಾಲ್ಸ್ ಕಣ್ಣಿನ ಆಸ್ಪತ್ರೆ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು–ಡಾ.ಅಗರ್ ವಾಲ್ಸ್ ಕಣ್ಣಿನ ಆಸ್ಪತ್ರೆ, ಕುವೆಂಪುನಗರ, ಮೈಸೂರು. 6.30 ಜಿಲ್ಲಾ ವಾರ್ತಾ ಪತ್ರ, 6.51 ಕೃಷಿರಂಗ: ಕೃಷಿ ದೀವಿಗೆ ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ರಾಗಿ ಬೆಳೆಯ ಉತ್ಪಾದನಾ ತಾಂತ್ರಿಕತೆಗಳು ಈ ಕುರಿತು ಮಂಡ್ಯದ, ವಿ.ಸಿ.ಫಾರಂ, ವಲಯ ಕೃಷಿ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕ ಡಾ.ಎಚ್.ಆರ್.ರವೀಂದ್ರ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ: ವಿಶ್ವ ಸಂಗೀತ ದಿನದಲ್ಲಿ ವಿಶೇಷ ಚಿತ್ರ ಚಿತ್ತಾರ. ಪ್ರಸ್ತುತಪಡಿಸುತ್ತಾರೆ– ವಾದಿರಾಜ್ ಆರ್.ಜಮದಗ್ನಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ –ಎನ್.ಚೊಕ್ಕಮ್ಮ–ಹಾಡುಗಾರಿಕೆ ಹಾಗೂ ವೀಣಾವಾದನ, 10.00 'ಶ್ರೀ ವಿದ್ಯಾ ವಿಶಾರದ' ಶ್ರೀ ಜಯಚಾಮರಾಜ ಒಡೆಯರ್ ವಿರಚಿತ ದೇವಿಕೃತಿಗಳನ್ನು ಆಧರಿಸಿದ ಬಾನುಲಿ ಸರಣಿ. ಪ್ರಸ್ತುತಿ–ವಿದ್ವಾನ್ ವಿ.ನಂಜುಂಡಸ್ವಾಮಿ, 10.30 ಸವಿನೆನಪು.

ಕೆ.ಆರ್.ಬ್ಯಾಂಕ್ 107ನೇ ವರ್ಷದ ಸಂಸ್ಥಾಪನಾ ದಿನಾಚರಣೆ


ಮೈಸೂರಿನ ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್‌ನ 107ನೇ ಸಂಸ್ಥಾಪನಾ ದಿನ ಸಮಾರಂಭ ನಡೆಯಿತು. ಈ ವೇಳೆ ಬ್ಯಾಂಕ್ ಸಂಸ್ಥಾಪಕರಾದ ಶಟ್ಟಪ್ಪ ಸಿದ್ದಪ್ಪ ಅವರ ಪುತ್ಥಳಿಗೆ ಜಿಲ್ಲಾ ಪತ್ರಕರ್ತರ ಅಧ್ಯಕ್ಷ ಕೆ.ದೀಪಕ್ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು. ಈ ವೇಳೆ ಕೃಷ್ಣರಾಜ ಪೊಲೀಸ್ ಠಾಣೆ ಉಪವಿಭಾಗದ ಸಹಾಯಕ ಉಪಪೊಲೀಸ್ ಆಯುಕ್ತ ಕೆ.ಸಿ.ಪ್ರಕಾಶ್, ಬ್ಯಾಂಕ್ ಅಧ್ಯಕ್ಷ ಡಿ.ಬಸವರಾಜು (ಬಸಪ್ಪ), ಉಪಾಧ್ಯಕ್ಷೆ ಹೆಚ್.ಎನ್.ಸರ್ವಮಂಗಳ, ಪ್ರವ್ಯವಸ್ಥಾಪಕರಾದ ಶಾಂತಲಾ, ಬ್ಯಾಂಕ್‌ನ ನಿರ್ದೇಶಕರಾದ ಎಚ್.ವಾಸು, ನಂ.ಸಿದ್ದಪ್ಪ, ಜಿ.ಎಂ.ಪಂಚಾಕ್ಷರಿ, ಎಂ.ಡಿ.ಪಾರ್ಥಸಾರಥಿ, ಎಚ್.ವಿ.ಭಾಸ್ಕರ್, ಪ್ರತಿಧ್ವನಿ ಪ್ರಸಾದ್, ಅರುಣ್ ಸಿದ್ದಪ್ಪ, ನಾಗಜ್ಯೋತಿ, ಎಂ.ಎನ್.ನವೀನ್‌ಕುಮಾರ್, ತಾಯೂರು ಗಣೇಶ್ ಮೂರ್ತಿ, ಎಂ.ಶಿವಪ್ರಕಾಶ್, ಎಚ್.ಕೆ.ಅನಂತು, ಶ್ರೀನಿವಾಸ್ ಶೆಟ್ಟಿ, ನಾಗಬಸವಣ್ಣ ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

ಎಸ್‌ಸಿ, ಎಸ್‌ಟಿ ಪ್ರತಿಭಾವಂತ ವಿದ್ಯಾರ್ಥಿಗಳಿಂದ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ. 21– ಕರ್ನಾಟಕ ರಾಜ್ಯ ಸರ್ಕಾರಿ, ಎಸ್‌ಸಿ/ಎಸ್‌ಟಿ ನೌಕರರ ಸಂಘ, ಮೈಸೂರು ಜಿಲ್ಲಾ ಶಾಖೆ ವತಿಯಿಂದ ಮೈಸೂರು ಜಿಲ್ಲೆಯ 2025–26ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡಿ ಶೇ.80ಕ್ಕಿಂತ ಮತ್ತು ಖಾಸಗಿ ಮತ್ತು ಅನುದಾನಿತ ಶಾಲೆಗಳಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಅರ್ಜಿ ಜೊತೆಯಲ್ಲಿ ಅಂಕಪಟ್ಟಿ, ಜಾತಿ ಪ್ರಮಾಣ ಪತ್ರ, ಭಾವಚಿತ್ರ ಮತ್ತು ಆಧಾರ್ ಕಾರ್ಡ್ ಪ್ರತಿ ಗಳೊಡನೆ ಜೂ.30ರೊಳಗೆ ಸಲ್ಲಿಸಲು ಕೋರಲಾಗಿದೆ. ಮಾಹಿತಿಗೆ ಮೊ. 9448710391, 9741962104 ಸಂಪರ್ಕಿಸಬಹುದು.

ಮೈಸೂರು ಮಣಿಪಾಲ್ ಆಸ್ಪತ್ರೆಯಿಂದ 'ಆಂಬುಲೆನ್ಸ್ ಜಾಗೃತಿ ರ್‍ಯಾಲಿ'

ಸೈರನ್ ಕೇಳಿದ ಕೂಡಲೇ ಜಾಗಬಿಡಿ; ರೋಗಿಯ ಜೀವ ರಕ್ಷಣೆಗೆ ಪ್ರತಿ ಕ್ಷಣವೂ ಅತ್ಯಮೂಲ್ಯ: ಸಾರ್ವಜನಿಕರಲ್ಲಿ ಜಾಗೃತಿ


ಮೈಸೂರಿನ ಮಣಿಪಾಲ್ ಆಸ್ಪತ್ರೆ ವತಿಯಿಂದ ಆಯೋಜಿಸಿದ್ದ 'ಆಂಬುಲೆನ್ಸ್ ಜಾಗೃತಿ ರ್‍ಯಾಲಿ'ಗೆ ಗಣ್ಯರು ಚಾಲನೆ ನೀಡಿದರು.

ಮೈಸೂರು, ಜೂ.21– 'ವಿಶ್ವ ತುರ್ತು ಚಿಕಿತ್ಸಾ ದಿನ'ದ ಅಂಗವಾಗಿ ಮೈಸೂರಿನ ಮಣಿಪಾಲ್ ಆಸ್ಪತ್ರೆ ವತಿಯಿಂದ 'ಆಂಬುಲೆನ್ಸ್ ಜಾಗೃತಿ ರ್‍ಯಾಲಿ' ನಡೆಸಲಾಯಿತು.

ಮಣಿಪಾಲ್ ಆಂಬುಲೆನ್ಸ್ ರೆಸ್ಪಾನ್ಸ್ ಸರ್ವಿಸ್(ಮಾರ್ಸ್)' ಅಡಿಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ತುರ್ತು ಚಿಕಿತ್ಸಾ ತಜ್ಞರು, ಆಂಬುಲೆನ್ಸ್ ಸಿಬ್ಬಂದಿ, ಆಸ್ಪತ್ರೆ ಮುಖ್ಯಸ್ಥರು ಮತ್ತು ಸಂಚಾರಿ ಪೊಲೀಸ್ ಅಧಿಕಾರಿಗಳು ಭಾಗವಹಿಸಿ, ಜೀವ ಉಳಿಸುವಲ್ಲಿ ತುರ್ತು ವೈದ್ಯಕೀಯ ಚಿಕಿತ್ಸೆಯ ಪ್ರಾಮುಖ್ಯತೆ ಮತ್ತು ತುರ್ತು ಸಂದರ್ಭಗಳಲ್ಲಿ ಸಾರ್ವಜನಿಕರ ಸಹಕಾರದ ಅಗತ್ಯತೆ ಬಗ್ಗೆ ಜಾಗೃತಿ ಮೂಡಿಸಿದರು.

ಹತ್ತು ಮಾರ್ಸ್ ಆಂಬುಲೆನ್ಸ್‌ಗಳಿದ್ದ ರ್‍ಯಾಲಿಗೆ ನಗರ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಕೆ.ಎಸ್.ಸುಂದರ್ ರಾಜ್ ಮತ್ತು ಮೈಸೂರು ಎನ್‌ಆರ್ ಉಪ ವಿಭಾಗದ ಎಸಿಪಿ ಕೆ.ಟಿ.ಮ್ಯಾಥ್ಯೂಸ್ ಥಾಮಸ್ ಹಸಿರು ನಿಶಾನೆ ತೋರಿದರು.

ಈ ಸಂದರ್ಭದಲ್ಲಿ ಕೆಎಂಸಿ ಹಾಗೂ ಮೈಸೂರು ಮಣಿಪಾಲ್ ಆಸ್ಪತ್ರೆ ಕ್ಲಸ್ಟರ್ ಡೈರೆಕ್ಟರ್ ಪ್ರಮೋದ್ ಕುಂದರ್, ಮಣಿಪಾಲ್ ಆಸ್ಪತ್ರೆ ಮೈಸೂರು ನಿರ್ದೇಶಕ ಬಿ.ಜೆ.ಸಂದೀಪ್ ಪಟೇಲ್, ನ್ಯೂರೋ ಸರ್ಜನ್ ಡಾ.ಎ.ಆರ್.ಮಕ್ಸೂದ್ ಅಹ್ಮದ್ ಹಾಗೂ ಇಂಟರ್ವೆನ್ಷನಲ್ ಕಾರ್ಡಿಯಾಲಜಿಸ್ಟ್ ಡಾ.ಸಿ.ಬಿ.ಕೇಶವಮೂರ್ತಿ ಮತ್ತಿತರರು ಗಣ್ಯರು ಉಪಸ್ಥಿತರಿದ್ದರು.

ರ್‍ಯಾಲಿಯು ನಗರದ ಪ್ರಮುಖ ರಸ್ತೆಗಳ ಮೂಲಕ ಸಂಚರಿಸಿ, ಹೃದಯಾಘಾತ, ಸ್ಟ್ರೋಕ್ ಹಾಗೂ ಅಪಘಾತಗಳಂತಹ 'ವೈದ್ಯಕೀಯ ತುರ್ತು ಸಂದರ್ಭದಲ್ಲಿ ಪ್ರತಿ ಸೆಕೆಂಡೂ ಅಮೂಲ್ಯ', ಆದ್ದರಿಂದ ಆಂಬ್ಯುಲೆನ್ಸ್‌ಗೆ ದಾರಿ ಬಿಟ್ಟುಕೊಡುವುದು ಪ್ರತಿಯೊಬ್ಬರ ಜವಾಬ್ದಾರಿ ಎಂಬ ಮಹತ್ವದ ಸಂದೇಶ ಸಾರಿತು.

ಈ ಸಂದರ್ಭದಲ್ಲಿ ಮಾತನಾಡಿದ ಡಿಸಿಪಿ ಸುಂದರ್‌ರಾಜ್, ರಸ್ತೆಯಲ್ಲಿ ಸಾಗುವ ಆಂಬ್ಯುಲೆನ್ಸ್ ಕೇವಲ ರೋಗಿಯನ್ನಷ್ಟೇ ಅಲ್ಲ, ಒಂದು ಜೀವದ ಭರವಸೆಯನ್ನು ಕೊಂಡೊಯ್ಯುತ್ತಿರುತ್ತದೆ. ಟ್ರಾಫಿಕ್ ಅಥವಾ ಸಾರ್ವಜನಿಕರ ಸಹಕಾರದ ಕೊರತೆಯಿಂದ ವ್ಯರ್ಥವಾಗುವ ಪ್ರತಿಯೊಂದು ನಿಮಿಷವೂ ಗಂಭೀರ ಪರಿಣಾಮ ಬೀರಬಹುದು ಎಂದರು.

ಎಸಿಪಿ ಮ್ಯಾಥ್ಯೂಸ್ ಥಾಮಸ್ ಮಾತನಾಡಿ, ತುರ್ತು ಸಂದರ್ಭಗಳಲ್ಲಿ ಜೀವ ಉಳಿಸುವುದು ಕೇವಲ ಆಸ್ಪತ್ರೆ ಅಥವಾ ಪೊಲೀಸರ ಕೆಲಸವಲ್ಲ, ಅದು ಸಾರ್ವಜನಿಕರ ಜವಾಬ್ದಾರಿಯೂ ಹೌದು. ರಸ್ತೆ ಜಂಕ್ಷನ್‌ಗಳನ್ನು ಮುಕ್ತವಾಗಿಡುವುದು, ಅನಗತ್ಯವಾಗಿ ದಾರಿ ತಡೆಯದೆ ಆಂಬುಲೆನ್ಸ್‌ಗಳಿಗೆ ತಕ್ಷಣ ದಾರಿ ಮಾಡಿಕೊಡುವುದರಿಂದ ರೋಗಿಗಳನ್ನು ಬೇಗ ಆಸ್ಪತ್ರೆಗೆ ತಲುಪಿಸಬಹುದು ಎಂದು ಹೇಳಿದರು.

ಡಾ.ಸಿ.ಬಿ.ಕೇಶವಮೂರ್ತಿ ಮಾತನಾಡಿ, ಹೃದಯಾಘಾತವಾದಾಗ ಕಳೆಯುವ ಪ್ರತಿ ನಿಮಿಷವೂ ಹೃದಯಕ್ಕೆ ದೊಡ್ಡ ಹಾನಿ ಉಂಟುಮಾಡುತ್ತದೆ. ಆರಂಭಿಕ ಲಕ್ಷಣಗಳನ್ನು ನಿರ್ಲಕ್ಷಿಸುವುದರಿಂದ ಅಥವಾ ಟ್ರಾಫಿಕ್‌ನಿಂದಾಗಿ ರೋಗಿಗಳು ಆಸ್ಪತ್ರೆಗೆ ತಡವಾಗಿ ತಲುಪುತ್ತಿದ್ದಾರೆ. ಇಂತಹ ವಿಳಂಬ ಜೀವಕ್ಕೇ ಕುತ್ತು ತರಬಹುದು. ರಸ್ತೆಯಲ್ಲಿ ಆಂಬುಲೆನ್ಸ್ ಕಂಡ ತಕ್ಷಣ ದಾರಿ ಮಾಡಿಕೊಡುವುದು ಮಾನವೀಯ ಗುಣ ಎಂದರು.

ಡಾ.ಮಕ್ಸೂದ್ ಅಹ್ಮದ್ ಮಾತನಾಡಿ, ಪಾರ್ಶ್ವವಾಯು(ಸ್ಟ್ರೋಕ್) ಮತ್ತು ತಲೆಯ ತೀವ್ರ ಗಾಯಗಳಂತಹ ತುರ್ತು ಸಂದರ್ಭಗಳಲ್ಲಿ ಪ್ರತಿ ನಿಮಿಷವೂ ನಿರ್ಣಾಯಕವಾಗಿರುತ್ತದೆ. ಅನೇಕ ರೋಗಿಗಳು ಗೋಲ್ಡನ್ ಅವರ್ (ಅಮೂಲ್ಯ ಸಮಯ) ಕಳೆದ ನಂತರ ಆಸ್ಪತ್ರೆಗೆ ಬರುತ್ತಾರೆ. ಇದರಿಂದ ಚಿಕಿತ್ಸೆ ಕಷ್ಟವಾಗಿ, ಜೀವಕ್ಕೆ ಅಪಾಯ ಎದುರಾಗುತ್ತದೆ. ಲಕ್ಷಣಗಳನ್ನು ಬೇಗ ಗುರುತಿಸಿ ಆಸ್ಪತ್ರೆಗೆ ತಲುಪಿಸುವುದು ಬಹಳ ಮುಖ್ಯ. ಆಂಬುಲೆನ್ಸ್‌ಗೆ ದಾರಿ ಬಿಡುವ ಮೂಲಕ ಪ್ರತಿಯೊಬ್ಬ ನಾಗರಿಕನೂ ಒಂದು ಜೀವವನ್ನು ಉಳಿಸಬಹುದು ಎಂದು ಹೇಳಿದರು.

ಮೈಸೂರು ಮಣಿಪಾಲ್ ಆಸ್ಪತ್ರೆಯ ನಿರ್ದೇಶಕರಾದ ಸಂದೀಪ್ ಪಟೇಲ್ ಮಾತನಾಡಿ, ರೋಗಿಯು ಆಸ್ಪತ್ರೆಗೆ ಬರುವ ಮೊದಲೇ ಜೀವ ಉಳಿಸುವ ಕೆಲಸ ಶುರುವಾಗುತ್ತದೆ ಎಂದು ನಾವು ನಂಬುತ್ತೇವೆ. ಮೈಸೂರು ಸಂಚಾರಿ ಪೊಲೀಸರ ಜೊತೆ ಸೇರಿ ನಾವು ಸಾರ್ವಜನಿಕರಿಗೆ ಮತ್ತು ಪೊಲೀಸರಿಗೆ ಸಿಪಿಆರ್ ಹಾಗೂ ಪ್ರಥಮ ಚಿಕಿತ್ಸೆಯ ತರಬೇತಿ ನೀಡುತ್ತಿರುತ್ತೇವೆ. ತುರ್ತು ಸಂದರ್ಭದಲ್ಲಿ ಆಂಬುಲೆನ್ಸ್ ಬರುವ ಮೊದಲೇ ಹತ್ತಿರವಿರುವ ಸಾರ್ವಜನಿಕರು ಸಕಾಲದಲ್ಲಿ ಮಾಡುವ ಸಿಪಿಆರ್ ಪ್ರಯತ್ನವು ರೋಗಿಯ ಜೀವ ಉಳಿಸಲು ತುಂಬಾ ಸಹಾಯ ಮಾಡುತ್ತದೆ ಎಂದರು.

ವಿಶ್ವ ಸಾಹಿತ್ಯ ಕ್ಷೇತ್ರದಲ್ಲಿ ಸ್ಥಾನಮಾನ ಅಲಂಕರಿಸಿರುವ ಡಾ.ಎಸ್.ಎಲ್.ಭೈರಪ್ಪ

ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ ಸ್ಮರಣೆ

ಮೈಸೂರು,ಜೂ.21(ಪಿಎಂ)– ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಅವರ ಸಾಹಿತ್ಯದ ಮೌಲ್ಯ ಮಹತ್ತರವಾದುದು. ಅವರು ವಿಶ್ವ ಸಾಹಿತ್ಯ ಕ್ಷೇತ್ರದಲ್ಲಿ ಸ್ಥಾನಮಾನ ಅಲಂಕರಿಸಿದ್ದಾರೆ ಎಂದು ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ ಸ್ಮರಿಸಿದರು.

ಮೈಸೂರಿನ ಕೃಷ್ಣಮೂರ್ತಿಪುರಂನ ಬಿಎಸ್ಎಸ್ ವಿದ್ಯೋದಯದ ಪದ್ಮಜಾ ಶ್ರೀನಿವಾಸ ಸಭಾಂಗಣದಲ್ಲಿ ಪ್ರಿಯದರ್ಶನ ಸಾಂಸ್ಕೃತಿಕ ವೇದಿಕೆ ಶ್ರೀರಂಗಪಟ್ಟಣ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಡಾ.ಎಸ್.ಎಲ್.ಭೈರಪ್ಪ ಸಂಸ್ಮರಣೆ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಭೈರಪ್ಪ ಕೊನೆವರೆಗೆ ಬದ್ಧತೆ–ಪ್ರಾಮಾಣಿಕತೆಯಿಂದ ಬದುಕಿದವರು. ಅಂತಹ ಒಬ್ಬ ಸಾಹಿತಿಯ 29 ಕಾದಂಬರಿ ಬರುವವರೆಗೆ ಒಂದೇ ಒಂದು ಕಾದಂಬರಿ ವಿಮರ್ಶೆ ಸಹ ಕನ್ನಡದಲ್ಲಿ ಮಾಡಲಿಲ್ಲ. ಕನ್ನಡ ಪತ್ರಿಕೋದ್ಯಮ ಹಾಗೂ ಸಾಹಿತ್ಯದಲ್ಲಿ ಯಾವ ಪುಸ್ತಕ ವಿಮರ್ಶೆ ಮಾಡಬೇಕು. ಯಾರು ಮಾಡಬೇಕು ಎನ್ನುವುದನ್ನು ನವ್ಯರ ದೊಡ್ಡ ಗ್ಯಾಂಗ್ ನಿರ್ಧಾರ ಮಾಡುತ್ತಿತ್ತು ಎಂದು ದೂರಿದರು.

ಪತ್ರಿಕಾ ಕಚೇರಿಗಳಲ್ಲಿ ಅನಂತಮೂರ್ತಿ ಬಣ: ಎಲ್ಲಾ ಪತ್ರಿಕಾ ಕಚೇರಿಗಳಲ್ಲೂ ಅನಂತಮೂರ್ತಿ ಅವರ ಒಂದಷ್ಟು ಬಣ ಇರುತ್ತಿತ್ತು. ಎಲ್ಲಾ ಮ್ಯಾಗಜಿನ್ ಎಡಿಟರ್‌ಗಳು ಕೂಡ ಲಂಕೇಶ್ ಮತ್ತು ಅನಂತಮೂರ್ತಿ ಅವರ ನಿಯಂತ್ರಣದಲ್ಲಿ ಇರುತ್ತಿದ್ದರು. ಜೊತೆಗೆ ಇನ್ನೊಂದಷ್ಟು ಜನರು ಸಹ ನಿಯಂತ್ರಿಸುತ್ತಿದ್ದರು. ಅವರು ಸತತವಾಗಿ ಭೈರಪ್ಪನವರ ಪುಸ್ತಕ ಕೃತಿಗಳನ್ನು ಕೂಡ ವಿಮರ್ಶೆ ಮಾಡಲು ಬಿಡಲಿಲ್ಲ ಆದರೆ ಭೈರಪ್ಪನವರು ಈ ಬಗ್ಗೆ ಸ್ವಲ್ಪವೂ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಜೊತೆಗೆ ಯಾವುದೇ ಚಳುವಳಿ ಹಾಗೂ ಪಂಥಕ್ಕೂ ಸಿಲುಕಲಿಲ್ಲ. ನಂತರದ ದಿನಗಳಲ್ಲಿ ವಿಮರ್ಶಕರು ಏನಾದರೂ ಕುಟುವಾಗಿ ಬರೆದರೂ ಕೂಡ ತಲೆ ಕೆಡಿಸಿಕೊಂಡವರಲ್ಲ ಎಂದು ಹೇಳಿದರು.

ಭೈರಪ್ಪ ಒಬ್ಬರೇ ಗಟ್ಟಿ ಸಾಹಿತಿ ಎಂದು ಚಂದ್ರಶೇಖರ ಕಂಬಾರರು ನನಗೆ ಹೇಳುತ್ತಿದ್ದರು. ಭೈರಪ್ಪನವರು ಒಂದು ಅಕ್ಷರ ಬರೆಯುವುದಕ್ಕೂ ಮುನ್ನ 10 ಪುಸ್ತಕ ಓದುತ್ತಿದ್ದರು. ಯಾವ ಜ್ಞಾನವನ್ನು ಎರವಲು ಆಗಿ ತೆಗೆದುಕೊಂಡಿದ್ದು ಇಲ್ಲವೇ ಇಲ್ಲ ಸ್ವತಃ ಅನುಭವಿಸಿ ಬರೆಯುವ ಗುಣ ಅವರದು ಎನ್ನುತ್ತಿದ್ದರು. ಭೈರಪ್ಪನವರ ಸ್ಮರಣೆ ನಮ್ಮ ಕರ್ತವ್ಯ. ಅವರಂತಹ ವ್ಯಕ್ತಿತ್ವದ ಪ್ರೇರಣೆ ಪಡೆಯುವುದು ಕೂಡ ನಮ್ಮ ಋಣ ಎಂದರು.

ಭೈರಪ್ಪನವರು ದೈಹಿಕವಾಗಿ ಅಗಲಿದ್ದರೂ ಚಿತ್ತಬಿತ್ತಿಯಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. ಅಷ್ಟೇ ಅಲ್ಲ, ನಮ್ಮ ಯೋಚನೆಯಲ್ಲಿ ಸದಾ ಇದ್ದಾರೆ. ನಾವು ನಮ್ಮ ಬದುಕಿನಲ್ಲಿ ಹಲವು ಸಂದಗ್ಧ ಎದುರಿಸಿದ ಸಂದರ್ಭದಲ್ಲಿ ಭೈರಪ್ಪನವರ ವಿಚಾರಗಳು ನಮಗೆ ಆಸರೆಯಾಗುತ್ತವೆ. ಅವರ ಕಾದಂಬರಿ ಪಾತ್ರಗಳು ನೆರವಿಗೆ ಬರುತ್ತವೆ. ಅವರು ಬಿತ್ತಿದಂತಹ ವಾದ, ವಿಚಾರಗಳು ಚಿಂತನೆಗಳು ನಮಗೆ ಆಶ್ರಯ ಕೊಡಲಿವೆ. ಹೀಗಾಗಿ ಭೈರಪ್ಪನವರ ಆಲೋಚನೆ ಇಲ್ಲದೇ ನಮ್ಮ ದಿನಗಳು ಕಳೆಯುವುದಿಲ್ಲ ಎಂದು ಸ್ಮರಿಸಿದರು.

1996–97ರ ದಿನಗಳಲ್ಲಿ ಭೈರಪ್ಪನವರ ಮನೆಗೆ ಹೋಗಿದ್ದೆ. ಆಗ ಅವರು ನೀವು ಪಿ.ವಿ.ಕಾಣೆ ಹೆಸರು ಕೇಳಿದ್ದೀರಾ ಎಂದರು. ಪಿ.ವಿ.ಕಾಣೆ ಅವರಂತಹ ಶಿಸ್ತು ಪತ್ರಿಕೋದ್ಯಮದಲ್ಲಿ ಇರಬೇಕು ಎಂದು ನನಗೆ ಅಂದು ಅವರು ಹೇಳಿದ್ದರು. ನೀವು ಪತ್ರಿಕೆ ಮುದ್ರಣಕ್ಕೆ ಕಳುಹಿಸುವ ಮುನ್ನ ಕನಿಷ್ಠ 10 ಮಂದಿಯಾದರೂ ಪತ್ರಿಕೆಯನ್ನು ಓದಬೇಕು. ಕನಿಷ್ಠ 5 ಮಂದಿ ಫ್ಯಾಕ್ಟ್ ಚೆಕ್‌ಗಳನ್ನು ಮಾಡಬೇಕು. ಆಗ ಮಾತ್ರ ಅಕ್ಷರ ಎನ್ನುವುದಕ್ಕೆ ಮಹತ್ವ ಬರುತ್ತದೆ ಎಂದು ಹೇಳಿದ್ದರು. ಪತ್ರಿಕೆ ಕಚೇರಿಯಲ್ಲಿ ಕ್ವಾಲಿಟಿ ಕಂಟ್ರೋಲ್ ವಿಭಾಗ ತೆರೆಯಬೇಕು ಎಂದು ಸಲಹೆ ನೀಡಿದ್ದರು. ಅದರಂತೆ ನಮ್ಮ ಕಚೇರಿಯಲ್ಲಿ ಮೊಟ್ಟ ಮೊದಲ ಬಾರಿಗೆ ಕನ್ನಡ ಪತ್ರಿಕೋದ್ಯಮದಲ್ಲಿ ಕ್ವಾಲಿಟಿ ಕಂಟ್ರೋಲ್ ವಿಭಾಗ ತೆರೆದೆ. ಆ ವಿಭಾಗದ ಉದ್ಘಾಟನಾ ಕಾರ್ಯಕ್ರಮಕ್ಕೆ ಭೈರಪ್ಪ ಬಂದಿದ್ದರು. ಆಗ ಪತ್ರಿಕೋದ್ಯಮದ ಕುರಿತು ಅದ್ಭುತ ಭಾಷಣ ಮಾಡಿದ್ದರು ಎಂದು ನೆನಪಿಸಿಕೊಂಡರು.

'ಸಾಕ್ಷಿ ಪರ್ವ': ಭೈರಪ್ಪನವರಿಗೆ ಒಳದಾರಿ ಆಗುತ್ತಿರಲಿಲ್ಲ. ಅತ್ಯಂತ ಪ್ರಾಮಾಣಿಕ ವ್ಯಕ್ತಿತ್ವ ಅವರದು. ಭೈರಪ್ಪನವರಿಂದ ಅಂಕಣ ಬರೆಸಬೇಕೆಂಬ ಬಯಕೆಯಲ್ಲಿ ಅವರ ಬಳಿ ಮಾತನಾಡಿದಾಗ ತಾವು ಯಾವ ಕಾರಣಕ್ಕೆ ಅಂಕಣ ಬರೆಯುವುದಿಲ್ಲ ಎಂಬುದರ ಬಗ್ಗೆಯೇ ಒಂದು ಗಂಟೆ ಕಾಲ ಅರ್ಥಪೂರ್ಣವಾಗಿ ಮಾತನಾಡಿದ್ದರು. ನಾನು ಏನೇ ಬರೆದರೂ ಅದಕ್ಕಾಗಿ ಅಧ್ಯಯನ ಮಾಡಲೇಬೇಕು ಎನ್ನುತ್ತಿದ್ದರು. ಅದರಂತೆಯೇ ಅವರು ನಡೆದುಕೊಂಡವರು. ವಾರಕ್ಕೊಮ್ಮೆ ಅಂಕಣ ಬರೆಯುವುದು ನನಗೆ ಒಗ್ಗುವುದಿಲ್ಲ ಎಂದಿದ್ದರು. ಮತ್ತೆ ಅವರನ್ನು ಭೇಟಿ ಮಾಡಿ ಅವರಿಂದ ಯಾವ ಕಾಲದಲ್ಲಿ ಓದಿದರೂ ಪ್ರಸ್ತುತವಾಗಿರುವಂತಹ ಬರವಣಿಗೆ ಮಾಡಿಸಲಾಯಿತು. ಕಾದಂಬರಿ ಬರೆಯುವವರು ಕಾಲಂ ಬರೆಯುತ್ತಾರೆ ಎಂದು ಮುಖಪುಟದಲ್ಲಿ ಅಂದು ಪ್ರಕಟಿಸಲಾಗಿತ್ತು. 'ಸಾಕ್ಷಿ ಪರ್ವ' ಶೀರ್ಷಿಕೆಯಡಿ 9 ತಿಂಗಳ ಕಾಲ ಬರೆದರು. ಆ ಎಲ್ಲಾ ಲೇಖನಗಳು ಅದ್ಭುತವಾದವು. ಕೃತಿಯಾಗಿಯೂ ಅದು ಪ್ರಕಟವಾಗಿದೆ ಎಂದು ತಿಳಿಸಿದರು.

ಹುಟ್ಟೂರಿಗೆ ನೀರು ನೀಡುವ ಹಂಬಲ: ಅವರು ತೀರಿಕೊಳ್ಳುವ 2 ವರ್ಷಗಳ ಮುಂಚೆ ನಿರಂತರವಾಗಿ ನನಗೆ ಕರೆ ಮಾಡಿ, ನನ್ನ ಹುಟ್ಟೂರು ಸಂತೆಶಿವರಕ್ಕೆ ನೀರಿನ ಸೌಲಭ್ಯ ಕಲ್ಪಿಸಬೇಕು ಎನ್ನುತ್ತಿದ್ದರು. ನಾನು ಜೀವನದಲ್ಲಿ ವಿಧಾನಸೌಧಕ್ಕೆ ಹೋಗಿಲ್ಲ. ಮುಖ್ಯಮಂತ್ರಿ ಸೇರಿದಂತೆ ಯಾವುದೇ ರಾಜಕಾರಣಿಗಳ ಭೇಟಿ ಮಾಡಿಲ್ಲ. ನನ್ನೂರಿಗೆ ಕುಡಿಯುವ ನೀರು ಸೌಲಭ್ಯ ಕಲ್ಪಿಸಲು ಏನಾದರೂ ಮಾಡಬೇಕೆಂದು ನನ್ನೊಂದಿಗೆ ಹೇಳಿಕೊಂಡಿದ್ದರು. ಕೊನೆಗೆ ಅಂದಿನ ಸಿಎಂ ಬಸವರಾಜ ಬೊಮ್ಮಾಯಿ ಭೇಟಿ ಮಾಡಿಸಿ, ಯೋಜನೆಗೆ ಅಂಗೀಕಾರವೂ ದೊರೆಯಿತು. ವಿಳಂಬವೂ ಆಗಿ ಕೊನೆಗೆ ಯೋಜನೆ ಕಾರ್ಯಗತವಾಯಿತು. ನಮ್ಮೂರಿಗೆ ಕುಡಿಯುವ ನೀರು ಕೊಡಬೇಕು ಎಂಬ ಅವರ ಹಂಬಲ ಈಡೇರಿದಾಗ, ಅವರಲ್ಲಿ ಹರ್ಷ ಮನೆ ಮಾಡಿತ್ತು ಎಂದರು.

ಪ್ರತಾಪ್ ಸಿಂಹ ಕೂಡ ಒಬ್ಬ ಫಲಾನುಭವಿ: ಭಟ್ಟರೆ ನನ್ನ ಬಳಿ ಕೋಟಿ ಲೆಕ್ಕದಲ್ಲಿ ಹಣವಿದೆ. ನಾನು ಸಾಯುವ ವೇಳೆಗೆ ಒಂದು ಪೈಸೆ ಸಹ ನನ್ನಲ್ಲಿ ಇರಬಾರದು ಎಂದು ಭೈರಪ್ಪನವರು ಹೇಳಿದ್ದರು. 20 ವರ್ಷಗಳ ಕಾಲ ಜೀವನದಲ್ಲಿ ಬಡತನ ಅನುಭವಿಸಿದ್ದೇನೆ. ಬರಿಗೈಯಲ್ಲಿ ನಾನು ಹೋಗಬೇಕು. ಮಕ್ಕಳಿಗೆ ಎಲ್ಲಾ ಮಾಡಿದ್ದೇನೆ. ನನ್ನ ಗಳಿಕೆಯನ್ನು ಬಡ ವಿದ್ಯಾರ್ಥಿಗಳು ಹಾಗೂ ರೋಗಿಗಳಿಗೆ ನೆರವು ನೀಡಬೇಕು ಎಂದು ಹೇಳಿದ್ದರು. 2000ದಿಂದ 2026ರವರೆಗೆ 26 ವರ್ಷ ಅವರು ನನ್ನ ಮೂಲಕ ಲೇಖಕರು, ಚಿಂತಕರು, ಪತ್ರಕರ್ತರಿಗೆ ಸುಮಾರು 80 ಲಕ್ಷ ರೂಪಾಯಿ ಸಹಾಯ ಮಾಡಿಸಿದ್ದಾರೆ. ಈ ರೀತಿಯಲ್ಲಿ ಪ್ರತಾಪ್ ಸಿಂಹ ಕೂಡ ಒಬ್ಬ ಫಲಾನುಭವಿ ಎಂದು ಹೇಳಬಹುದು. ಭೈರಪ್ಪನವರು ಉತ್ತೇಜನ ನೀಡಿ ತಮ್ಮ ಕೈಲಾದ ಸಹಾಯ ಮಾಡುವ ಗುಣ ಹೊಂದಿದ್ದರು. ಭೈರಪ್ಪ ಅವರಂತಹ ಲೇಖಕ ಭಾರತದಲ್ಲೇ ಸಿಗಲು ಸಾಧ್ಯವಿಲ್ಲ ಎಂದು ಹೇಳಿದರು.

ಯಾರಾದರೂ ಗಣ್ಯರು ನಿಧನ ಹೊಂದಿದಾಗ, ಪತ್ರಿಕೆಯವರು ಲೇಖನ ಬರೆಯಲು ಕೇಳಿದರೆ ಬಹುತೇಕ ಸಾಹಿತಿಗಳು ನೀವೇ ಬರೆದುಕೊಂಡು ನನ್ನ ಹೆಸರು ಹಾಕಿ ಎನ್ನುತ್ತಾರೆ. ದೊಡ್ಡ ಸಾಹಿತಿಗಳೇ ಹೀಗೆ ಹೇಳುತ್ತಾರೆ. ಭೈರಪ್ಪನವರು ಮಾತ್ರ ಈ ರೀತಿಯ ಯಾವುದೇ ಗಿಮಿಕ್ ಮಾಡಲಿಲ್ಲ ಎಂದರು.

'ಭೈರಪ್ಪ ಮತ್ತು ರಾಷ್ಟ್ರೀಯತೆ' ಕುರಿತು ಕುವೆಂಪು ಭಾಷಾಭಾರತಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಪ್ರೊ.ಅಜಕ್ಕಳ ಗಿರೀಶ ಭಟ್ ಹಾಗೂ 'ಭೈರಪ್ಪನವರ ವೈಚಾರಿಕೆ ಮತ್ತು ಚಿಂತನ–ಮಂಥನಗಳು' ಕುರಿತು ಸಂಸ್ಕೃತ ವಿದ್ವಾಂಸ ವಿದ್ವಾನ್ ಗ.ನಾ.ಭಟ್ಟ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಹಿರಿಯ ಸಂಸ್ಕೃತ ವಿದ್ವಾಂಸರೂ ಆದ 'ಮೈಸೂರು ಮಿತ್ರ' ಅಂಕಣಕಾರ ಡಾ.ಹೆಚ್.ವಿ.ನಾಗರಾಜರಾವ್, ಬಿಎಸ್ಎಸ್ ವಿದ್ಯೋದಯ ಗೌರವ ಕಾರ್ಯದರ್ಶಿ ಆರ್. ವಾಸುದೇವ ಭಟ್ ಪಾಲ್ಗೊಂಡಿದ್ದರು. ಜಿ.ಎನ್. ಮಂಜುನಾಥ್ ಕಾರ್ಯಕ್ರಮ ನಿರ್ವಹಣೆ ಮಾಡಿದರು.



ಡಾ.ಎಸ್.ಎಲ್.ಭೈರಪ್ಪನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳದಂತೆ ನೋಟಿಸ್ ಬಂದಿತ್ತು...

ನಾನು ಈ ಕಾರ್ಯಕ್ರಮಕ್ಕೆ ಬರುತ್ತೇನೋ ಇಲ್ಲವೋ ಎಂದು ನಿನ್ನೆ ರಾತ್ರಿ 12 ಗಂಟೆಯವರೆಗೆ ಸಂದೇಹ ಇತ್ತು. ನನಗೊಂದು ಕೋರ್ಟ್ ನೋಟಿಸ್ ಬಂದಿದೆ. ಇವತ್ತಿನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬಾರದು ಎನ್ನುವುದು ಅದರ ಆಶಯ. ಅದರಲ್ಲೂ ಭೈರಪ್ಪನವರ ಬಗ್ಗೆ ಹೆಚ್ಚಿನ ವಿಷಯಗಳನ್ನು ಹೇಳಬಾರದು ಎನ್ನುವುದು ಕೂಡ ಒಂದು ಒಕ್ಕಣೆ ಎಂದು ವಿಶ್ವೇಶ್ವರ ಭಟ್ ಹೇಳಿದರು.

ನಾನು ಒಂದು ವೇಳೆ ಬರಲಿಲ್ಲ ಎಂದರೆ ಬೇಸರ ಮಾಡಿಕೊಳ್ಳಬೇಡಿ ಎಂದು ಹೇಳಿದ್ದೆ. ಕೊನೆಗೆ ಕಾನೂನು ತಜ್ಞರ ಅಭಿಪ್ರಾಯ ತೆಗೆದುಕೊಂಡೆ. ಅವರು ನಿಮಗೆ ಅನ್ನಿಸಿದ್ದನ್ನು ನೀವು ಮಾತನಾಡಿ ಉಳಿದಿದ್ದನ್ನು ನಾನು ನೋಡಿಕೊಳ್ಳುತ್ತೇನೆ ಎಂದರು. ನಂತರ ಬರಲು ನಿರ್ಧಾರ ಮಾಡಿದೆ. ಅದು ಯಾವ ಕೋರ್ಟ್ ನೋಟಿಸ್, ಕೊಟ್ಟವರು ಯಾರು ಎನ್ನುವುದು ಇಲ್ಲಿ ಹೇಳುವುದು ಬೇಡ ಎಂದರು.

ಬಹಿರಂಗಗೊಳ್ಳದ ಭೈರಪ್ಪನವರ ಪತ್ರ

ಭೈರಪ್ಪನವರು ತಮ್ಮ ಕೊನೆ ಕ್ಷಣದಲ್ಲಿ ಕೋರ್ಟ್‌ನ ಕಟಕಟೆಯಲ್ಲಿ ನಿಲ್ಲಬೇಕಾಯಿತು. ಆಗ ನಿಮಗೆ ನೆನಪಿನ ಶಕ್ತಿ ಇಲ್ಲವಂತೆ ಎಂದು ವಕೀಲರು ಪ್ರಶ್ನೆ ಮಾಡಿದಾಗ, 50 ವರ್ಷಗಳ ಹಿಂದೆ ನಡೆದ ಎಲ್ಲಾ ಘಟನೆ ಹೇಳಿ ನೀವೇ ಯೋಚನೆ ಮಾಡಿ ನನ್ನ ನೆನಪಿನ ಶಕ್ತಿ ಬಗ್ಗೆ ಎಂದು ಮರು ಪ್ರಶ್ನೆ ಹಾಕಿದ್ದರು. ಅಲ್ಲದೆ, ಭೈರಪ್ಪನವರಿಂದ ಹೇಳಿಸಿ ಅವರ ಆಸ್ತಿ ಲಪಟಾಯಿಸಬೇಕು ಎಂಬ ಕಾರಣದಿಂದ ಕೆಲವು ಮಂದಿ ಹುನ್ನಾರ ಮಾಡಿದ್ದರು ಎಂಬ ಆರೋಪವೂ ಎದುರಾಯಿತು. ನನ್ನ ಹತ್ತಿರ ಅವರು ಅವರ ಪತ್ನಿಗೆ ಬರೆದ 8 ಪುಟಗಳ ಪತ್ರ ಇದ್ದು, ಅದು ಎಲ್ಲಿಯೂ ಬಹಿರಂಗಗೊಂಡಿಲ್ಲ. ನಾನು ಬಿಡುಗಡೆ ಮಾಡುವುದೂ ಇಲ್ಲ. ಅಥವಾ ಸಂದರ್ಭ ಬಂದರೆ ನೋಡೋಣ. 94 ವರ್ಷದಲ್ಲಿ ಅವರು ಬರೆದ ಆ ಪತ್ರದಲ್ಲಿ ಎಲ್ಲಿಯೂ ವಿಚಾರದ ಪುನರಾವರ್ತನೆ ಇಲ್ಲ.
-ವಿಶ್ವೇಶ್ವರ ಭಟ್

ಶಿವದಾರ, ಜನಿವಾರ, ಉಡುದಾರಕ್ಕೂ ಕತ್ತರಿ

ದಾವಣಗೆರೆ: ನೀಟ್ ಪರೀಕ್ಷಾ ಕೇಂದ್ರಗಳಿಗೆ ಹಾಜರಾದ ವಿದ್ಯಾರ್ಥಿಗಳ ಮೈಮೇಲಿದ್ದ ಉಡುದಾರ, ಶಿವದಾರ ಹಾಗೂ ಜನಿವಾರಗಳಿಗೆ ಸಿಬ್ಬಂದಿ ಕತ್ತರಿ ಹಾಕಿದ ಪ್ರಸಂಗ ವರದಿಯಾಗಿದೆ.

ನಗರದ ಹೈಸ್ಕೂಲ್ ಮೈದಾನದಲ್ಲಿನ ಬಾಲಕರ ಪದವಿ ಪೂರ್ವ ಕಾಲೇಜು ಪರೀಕ್ಷಾ ಕೇಂದ್ರದಲ್ಲಿ ಈ ಘಟನೆ ನಡೆದಿದ್ದು, ಅಭ್ಯರ್ಥಿಗಳ ಮೈಮೇಲಿದ್ದ ಉಡುದಾರ, ಶಿವದಾರ ಹಾಗೂ ಜನಿವಾರಗಳನ್ನು ತೆಗೆಸಿ, ಅವುಗಳನ್ನು ಬುಟ್ಟಿಯೊಂದಕ್ಕೆ ಹಾಕಲಾಗಿದೆ. ಹಾಗೆಯೇ ಬೆಲ್ಟ್, ಉಂಗುರ, ಸರ, ಕಿವಿಯೋಲೆ, ರಬ್ಬರ್ ಬ್ಯಾಂಡ್, ಬುರ್ಖಾ ತೆಗೆಸಿ ಪರೀಕ್ಷೆಗೆ ಅವಕಾಶ ಕಲ್ಪಿಸಲಾಯಿತು ಎನ್ನಲಾಗಿದೆ. ತುಂಬು ತೋಳಿನ ಅಂಗಿ ಧರಿಸಿ ಬಂದವರಿಗೆ ಪ್ರವೇಶಾವಕಾಶ ನಿರಾಕರಿಸಿದ್ದರಿಂದ ಪೋಷಕರು ಅರ್ಧ ತೋಳಿನ ಅಂಗಿ ತರಿಸಿ ನಂತರ ಪರೀಕ್ಷಾ ಕೇಂದ್ರದೊಳಗೆ ಕಳುಹಿಸಿದ ಪ್ರಸಂಗವೂ ನಡೆದಿದೆ.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಶ್ರೀ ನಿತಿನ್ ಕುಮಾರ್ ಎಂ.ಎಸ್ ರವರ ಧರ್ಮಪತ್ನಿಯಾದ ಶ್ರೀಮತಿ ಹೆಚ್ ಎಸ್ ದೀಕ್ಷಾ ಹಾಗೂ ಟಿ ಶಿವರಾಮು ರವರ ಮಗನಾದ 36 ವರ್ಷ ವಯಸ್ಸಿನ ಶ್ರೀ ನಿತಿನ್ ಕುಮಾರ್ ಎಂ.ಎಸ್ ರವರು ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಹಾಲಿ ಮಾಲೀಕರಾದ ಮೈಸೂರು ಸಿಟಿ–570023, ವಿವೇಕಾನಂದ ನಗರ, 4ನೇ ಮೇನ್, ಮನೆ ನಂ.948 ರಲ್ಲಿ ವಾಸವಾಗಿರುವ ಲೇಟ್ ಮೋಹನ ಭಟ್ಟರ್. ಪಿ ರವರ ಧರ್ಮಪತ್ನಿ 71 ವರ್ಷದ ಶ್ರೀಮತಿ ಶ್ರೀದೇವಿ ಮೋಹನ್ ರವರಿಂದ ಶುದ್ಧ ಕ್ರಯಕ್ಕೆ ಪಡೆಯಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾವುದೇ ವ್ಯಕ್ತಿ/ ವ್ಯಕ್ತಿಗಳಿಗೆ, ಸಂಘ, ಸಂಸ್ಥೆ, ಬ್ಯಾಂಕ್, ಇನ್ನಿತರರಿಂದ ಯಾವುದೇ ರೀತಿಯ ಹಕ್ಕು, ಆಸಕ್ತಿ, ಭಾಧ್ಯತೆ ಹಿತಾಸಕ್ತಿ ಹಾಗೂ ಆಕ್ಷೇಪಣೆಗಳು ಇದ್ದಲ್ಲಿ ಅದನ್ನು ಸಂಬಂದಪಟ್ಟ ದಾಖಲೆಗಳ ಸಹಿತ ಈ ಕೆಳಗೆ ತಿಳಿಸಲಾದ ಕಛೇರಿ ವಿಳಾಸಕ್ಕೆ ಈ ಪ್ರಕಟಣೆಯ ದಿನದಿಂದ ಹದಿನೈದು (15) ದಿನಗಳ ಒಳಗಾಗಿ ಲಿಖಿತವಾಗಿ ತಿಳಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಷೆಡ್ಯೂಲ್ ಸ್ವತ್ತಿನ ಮೇಲೆ ಬೇರೆ ಯಾರಿಗೂ ಯಾವುದೇ ಹಕ್ಕು, ಹಿತಾಸಕ್ತಿ ಇಲ್ಲವೆಂದು ಪರಿಗಣಿಸಿ ಕ್ರಯವನ್ನು ಪೂರ್ಣಗೊಳಿಸಲಾಗುವುದು. ನಿರ್ದಿಷ್ಟ ಅವಧಿ ಮುಗಿದ ನಂತರ ಬರುವ ಯಾವುದೇ ಆಕ್ಷೇಪಣೆ ಅಥವಾ ಹಕ್ಕುಗಳಿಗೆ ಅವಕಾಶವಿರುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಿನಕಲ್ ಗ್ರಾಮದ ಖಾತಾ ಜಂಜರ್ ನಂ 1741 ಸ್ವತ್ತಿನ ಸಂಖ್ಯೆ 4955/10 ಯು.ಐ.ಡಿ.ನಂ. 551497031198, ಪಿ.ಓ.ಆರ್. ನಂ. ಎಸ್. 34–4955/101 ರಲ್ಲಿನ ಪೂರ್ವ–ಪಶ್ಚಿಮ:50.00 ಅಡಿ, ಉತ್ತರ–ದಕ್ಷಿಣ : 40.00 ಅಡಿ ಒಟ್ಟು 2000 ಚದರ ಅಡಿ (1857.76 ಚದರ ಮೀಟರ್) ವಿಸ್ತೀರ್ಣವುಳ್ಳ ಚಕ್ಕುಬಂದಿ ಪೂರ್ವಕ್ಕೆ: ವೆಂಕಮ್ಮಣ್ಣಿ ರವರ ಸ್ವತ್ತು (4955/9 ರ ಸ್ವತ್ತು), ಪಶ್ಚಿಮಕ್ಕೆ: ಡಾಲಿ ಎಸ್ ಪ್ರಮೀಳ ರವರ ಸ್ವತ್ತು(ಗಲ್ಲಿ), ಉತ್ತರಕ್ಕೆ: ತಾರಾ ಮತ್ತು ರಘುರಾಮ್ ಬಿ.ಆರ್ ರವರ ಸ್ವತ್ತು (4955/8 ರ ಸ್ವತ್ತು), ದಕ್ಷಿಣಕ್ಕೆ: ರಸ್ತೆ (4959 ಮತ್ತು 4960 ರ ಸ್ವತ್ತು) 4 ಈ ಮಧ್ಯದಲ್ಲಿರುವ ಪೂರ್ವ ಪಶ್ಚಿಮ: 50.00 ಅಡಿ, ಉತ್ತರ ದಕ್ಷಿಣ: 40.00 ಅಡಿ ಒಟ್ಟು 2000 ಚದರ ಅಡಿ ವಿಸ್ತೀರ್ಣವುಳ್ಳ ನಿವೇಶನ.

ಸಹಿ/– ವೆಂಕಟೇಶ ಪಟವರ್ಧನ್, ವಕೀಲರು
ನಂ.2359/15, 12ನೇ ಕ್ರಾಸ್, ಬಸವೇಶ್ವರ ರಸ್ತೆ, ಕೆ.ಆರ್‌ಮೊಹಲ್ಲಾ, ಮೈಸೂರು–570004
ಮೊ. 9845565329
ನಿತಿನ್ ಕುಮಾರ್ ಎಂ ಎಸ್ ಮೊ.:9632196136
ದಿನಾಂಕ: 22.06.2026, ಸ್ಥಳ: ಮೈಸೂರು

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಶ್ರೀ ನಿತಿನ್ ಕುಮಾರ್ ಎಂ.ಎಸ್ ರವರ ಧರ್ಮಪತ್ನಿಯಾದ ಶ್ರೀಮತಿ ಹೆಚ್ ಎಸ್ ದೀಕ್ಷಾ ಹಾಗೂ ಟಿ ಶಿವರಾಮು ರವರ ಮಗನಾದ 36 ವರ್ಷ ವಯಸ್ಸಿನ ಶ್ರೀ ನಿತಿನ್ ಕುಮಾರ್ ಎಂ.ಎಸ್ ರವರು ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಹಾಲಿ ಮಾಲೀಕರಾದ ಬೆಂಗಳೂರು ಸಿಟಿ–560003, ಬೆಂಗಳೂರು ಉತ್ತರ, ಮಲ್ಲೇಶ್ವರಂ, 1ನೇ ಮೇನ್, 10ನೇ ಕ್ರಾಸ್, ಮನೆ ನಂ.24 ರಲ್ಲಿ ವಾಸವಾಗಿರುವ ಲೇಟ್ ಬಿ.ಎಸ್ ರಂಗಸ್ವಾಮಿ ರವರ ಮಗನಾದ ಬಿ ಆರ್ ರಘುರಾಮ್ ರವರಿಂದ ಶುದ್ಧ ಕ್ರಯಕ್ಕೆ ಪಡೆಯಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾವುದೇ ವ್ಯಕ್ತಿ/ವ್ಯಕ್ತಿಗಳಿಗೆ, ಸಂಘ, ಸಂಸ್ಥೆ, ಬ್ಯಾಂಕ್, ಇನ್ನಿತರರಿಂದ ಯಾವುದೇ ರೀತಿಯ ಹಕ್ಕು, ಆಸಕ್ತಿ, ಭಾಧ್ಯತೆ ಹಿತಾಸಕ್ತಿ ಹಾಗೂ ಆಕ್ಷೇಪಣೆಗಳು ಇದ್ದಲ್ಲಿ ಅದನ್ನು ಸಂಬಂದಪಟ್ಟ ದಾಖಲೆಗಳ ಸಹಿತ ಈ ಕೆಳಗೆ ತಿಳಿಸಲಾದ ಕಛೇರಿ ವಿಳಾಸಕ್ಕೆ ಈ ಪ್ರಕಟಣೆಯ ದಿನದಿಂದ ಹದಿನೈದು (15) ದಿನಗಳ ಒಳಗಾಗಿ ಲಿಖಿತವಾಗಿ ತಿಳಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಷೆಡ್ಯೂಲ್ ಸ್ವತ್ತಿನ ಮೇಲೆ ಬೇರೆ ಯಾರಿಗೂ ಯಾವುದೇ ಹಕ್ಕು, ಹಿತಾಸಕ್ತಿ ಇಲ್ಲವೆಂದು ಪರಿಗಣಿಸಿ ಕ್ರಯವನ್ನು ಪೂರ್ಣಗೊಳಿಸಲಾಗುವುದು. ನಿರ್ದಿಷ್ಟ ಅವಧಿ ಮುಗಿದ ನಂತರ ಬರುವ ಯಾವುದೇ ಆಕ್ಷೇಪಣೆ ಅಥವಾ ಹಕ್ಕುಗಳಿಗೆ ಅವಕಾಶವಿರುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಿನಕಲ್ ಗ್ರಾಮದ ಖಾತಾ ಜಂಜರ್ ನಂ 1774, 1774/3, ಸ್ವತ್ತಿನ ಸಂಖ್ಯೆ 1774/3 (ಹೂಟಗಳ್ಳಿ ನಗರಸಭೆ ನಮೂನೆ–3 ಎ ದಾಖಲೆಯ ಪ್ರಕಾರ ಸ್ವತ್ತಿನ ಇ–ಆಸ್ತಿ ಸಂಖ್ಯೆ 3651204098, ನಿರ್ಧರಣಾ ಸಂಖ್ಯೆ 1774/3) ರಲ್ಲಿನ ಪೂರ್ವ–ಪಶ್ಚಿಮ :15.240030 ಮೀಟರ್, ಉತ್ತರ–ದಕ್ಷಿಣ : 12.192024 ಮೀಟರ್ ವಿಸ್ತೀರ್ಣವುಳ್ಳ ನಿವೇಶನ ಚಕ್ಕುಬಂದಿ: ಪೂರ್ವಕ್ಕೆ– ಖಾಸಗಿ ಸ್ವತ್ತು, ಪಶ್ಚಿಮಕ್ಕೆ– ಡಾಲಿ ಎಸ್. ಪ್ರಮೀಳ ರವರ ಸ್ವತ್ತು, ಉತ್ತರಕ್ಕೆ– ರಸ್ತೆ, ದಕ್ಷಿಣಕ್ಕೆ– ಶ್ರೀದೇವಿ ಮೋಹನ್ ರವರ ಸ್ವತ್ತು, ಈ ಮಧ್ಯದಲ್ಲಿರುವ ಪೂರ್ವ ಪಶ್ಚಿಮ: 15.240030 ಮೀಟರ್, ಉತ್ತರ ದಕ್ಷಿಣ: 12.19.2024 ಮೀಟರ್ ಒಟ್ಟು 185.8068 ಚದರ ಮೀಟರ್ ವಿಸ್ತೀರ್ಣವುಳ್ಳ ನಿವೇಶನ.

ಸಹಿ/– ವೆಂಕಟೇಶ ಪಟವರ್ಧನ್, ವಕೀಲರು
ನಂ.2359/15, 12ನೇ ಕ್ರಾಸ್, ಬಸವೇಶ್ವರ ರಸ್ತೆ, ಕೆ.ಆರ್‌ಮೊಹಲ್ಲಾ, ಮೈಸೂರು–570004
ಮೊ. 9845565329
ನಿತಿನ್ ಕುಮಾರ್ ಎಂ ಎಸ್ ಮೊ.:9632196136
ದಿನಾಂಕ: 22.06.2026, ಸ್ಥಳ: ಮೈಸೂರು

ವೈಭವ್ ಅಬ್ಬರಕ್ಕೆ ಲಂಕಾ ತತ್ತರ; ತ್ರಿಕೋನ ಸರಣಿ ಗೆದ್ದ ಟೀಂ ಇಂಡಿಯಾ

ಶ್ರೀಲಂಕಾ, ಜೂ.21(ವಿವಿಹೆಚ್)– ಇಲ್ಲಿನ ಡಂಬುಲ್ಲಾದಲ್ಲಿ ಭಾನುವಾರ ನಡೆದ ಶ್ರೀಲಂಕಾ 'ಎ' ಮತ್ತು ಭಾರತ 'ಎ' ತಂಡಗಳ ನಡುವಣ ಫೈನಲ್ಸ್ ಪಂದ್ಯದಲ್ಲಿ ಶ್ರೀಲಂಕಾ 'ಎ' ತಂಡವನ್ನು 66 ರನ್‌ಗಳಿಂದ ಸೋಲಿಸಿದ ಭಾರತ 'ಎ' ತ್ರಿಕೋನ ಸರಣಿಯನ್ನು ಗೆದ್ದುಕೊಂಡಿತು.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ 'ಎ' ತಂಡ ನಿಗದಿತ 50 ಓವರ್‌ಗಳಿಗೆ 9 ವಿಕೆಟ್ ನಷ್ಟಕ್ಕೆ 377 ರನ್ ಗಳಿಸಿತು. 378 ರನ್ ಗುರಿ ಬೆನ್ನತ್ತಿದ ಶ್ರೀಲಂಕಾ 'ಎ' ತಂಡ 47.1 ಓವರ್‌ಗೆ ಆಲೌಟ್ ಆಗಿ ಸೋಲೊಪ್ಪಿಕೊಂಡಿತು

15 ವರ್ಷದ ವೈಭವ್ ಸೂರ್ಯವಂಶಿ 29 ಎಸೆತಗಳಲ್ಲಿ 94 ರನ್ (10 ಬೌಂಡರಿ, 8 ಸಿಕ್ಸರ್) ಬಾರಿಸಿ ಭಾರತ 'ಎ' ತಂಡ ಬೃಹತ್ ರನ್ ದಾಖಲಿಸಲು ಕೊಡುಗೆ ನೀಡಿದರು. ಸೂರ್ಯವಂಶಿ ಕೇವಲ 11 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಇದು ಲಿಸ್ಟ್ 'ಎ' ದಾಖಲೆಯಾಗಿದೆ. ನಾಯಕ ತಿಲಕ್ ವರ್ಮಾ (67), ಋತುರಾಜ್ ಗಾಯಕ್ವಾಡ್(40) ಮತ್ತು ಅನುಕುಲ್ ರಾಯ್ (15 ಬಾಲ್‌ಗಳಿಗೆ 39 ರನ್) ಕೂಡ ನಿರ್ಣಾಯಕ ಬ್ಯಾಟಿಂಗ್ ಪ್ರದರ್ಶನ ನೀಡಿದರು.

ಶ್ರೀಲಂಕಾ 'ಎ' ತಂಡವನ್ನು 47.1 ಓವರ್‌ಗಳಲ್ಲಿ 311 ರನ್‌ಗಳಿಗೆ ಆಲೌಟ್ ಮಾಡಿತು. ಸದೀರ ಸಮರವಿಕ್ರಮ (52) ಮತ್ತು ವನುಜಾ ಸಹನ್ (62) ಅರ್ಧಶತಕ ಗಳಿಸಿದರು. ಉಳಿದ ಬ್ಯಾಟರ್‌ಗಳು ಸ್ಥಿರ ಪ್ರದರ್ಶನ ನೀಡುವಲ್ಲಿ ವಿಫಲರಾದರು.

ವೇಗಿ ಯಶ್ ಠಾಕೂರ್ ಮತ್ತು ಸ್ಪಿನ್ನರ್ ವಿಪ್ರಜ್ ನಿಗಮ್ ತಲಾ ಮೂರು ವಿಕೆಟ್ ಪಡೆದು ಟೀಂ ಇಂಡಿಯಾ ಗೆಲುವಿಗೆ ಕೊಡುಗೆ ನೀಡಿದರು.

ಉತ್ತಮ ಬ್ಯಾಟಿಂಗ್ ಪ್ರದರ್ಶನದ ಮೂಲಕ ಭಾರತ 'ಎ' ತಂಡದ ಗೆಲುವಿಗೆ ಪ್ರಮುಖ ಪಾತ್ರ ವಹಿಸಿದ ವೈಭವ್ ಸೂರ್ಯವಂಶಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.



ಡಂಬುಲ್ಲಾದಲ್ಲಿ ಭಾನುವಾರ ನಡೆದ ಫೈನಲ್ಸ್ ಪಂದ್ಯದಲ್ಲಿ ಶ್ರೀಲಂಕಾವನ್ನು ಮಣಿಸಿದ ಬಳಿಕ ಟ್ರೋಫಿಯೊಂದಿಗೆ ಭಾರತ 'ಎ' ತಂಡದ ಆಟಗಾರರ ವಿಜಯೋತ್ಸವ

ಬಿಡದಿಯ ನಮ್ಮ ಜಮೀನನ್ನು ಸಾರ್ವಜನಿಕರ ಹಿತಾಸಕ್ತಿಗೆ ಮುಡಿಪಾಗಿಡುತ್ತೇವೆ, ಟೌನ್ ಶಿಪ್ ಯೋಜನೆ ಕೈಬಿಡುವಿರಾ?

ಪಾದಯಾತ್ರೆ ವೇಳೆ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸರ್ಕಾರಕ್ಕೆ ಸವಾಲು

ರಾಮನಗರ: ಬಿಡದಿಯಲ್ಲಿರುವ ನಮ್ಮ ಜಮೀನನ್ನು ಸಾರ್ವಜನಿಕರ ಹಿತಾಸಕ್ತಿಗಾಗಿ ಮುಡಿಪಾಗಿಡುತ್ತೇವೆ. ನೀವು ಟೌನ್‌ಶಿಪ್ ಯೋಜನೆಯನ್ನು ಕೈ ಬಿಡುತ್ತೀರಾ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ರಾಜ್ಯ ಸರ್ಕಾರಕ್ಕೆ ಸವಾಲು ಹಾಕಿದ್ದಾರೆ.

ಬಿಡದಿ ಟೌನ್‌ಶಿಪ್ ವಿರೋಧಿಸಿ ತಮ್ಮ ನೇತೃತ್ವದಲ್ಲಿ ಯೋಜನಾ ವ್ಯಾಪ್ತಿಯ ಎಂಟು ಗ್ರಾಮಗಳಲ್ಲಿ ನಡೆದ ಸುಮಾರು 11 ಕಿಲೋಮೀಟರ್ ಪಾದಯಾತ್ರೆ ವೇಳೆ ಮಾತನಾಡಿದ ಅವರು, ಇಂದು ಪಾದಯಾತ್ರೆ ಮಾಡಿದ್ದೇವೆ, ಮುಂದೆ ವಿಧಾನಸೌಧಕ್ಕೆ ಮುತ್ತಿಗೆ ಹಾಕುತ್ತೇವೆ. ಇದು ಕೇವಲ ಆರಂಭವಷ್ಟೇ, ಮುಂದೆ ದೊಡ್ಡಮಟ್ಟದಲ್ಲಿ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಈ ಯೋಜನೆಗೆ ಒಪ್ಪಿಗೆ ಪಡೆಯಲು ಸರ್ಕಾರ ರೈತರಿಗೆ ಆಮಿಷ ಒಡ್ಡುತ್ತಿದೆ. ಕೃಷಿ ಭೂಮಿ ಕಳೆದುಕೊಂಡರೆ ರೈತರ ಬದುಕೇ ಸಂಕಷ್ಟಕ್ಕೆ ಸಿಲುಕಲಿದೆ. ಟೌನ್ ಶಿಪ್ ಯೋಜನೆಯಿಂದ ಸಣ್ಣ ರೈತರಿಗೆ ಹೆಚ್ಚು ಅನ್ಯಾಯವಾಗಲಿದೆ. ರೈತರ ಭೂಮಿ ಕಸಿದುಕೊಳ್ಳಲು ದಲ್ಲಾಳಿಗಳನ್ನು ಬಳಸಲಾಗುತ್ತಿದೆ. ರೈತರ ಒಗ್ಗಟ್ಟು ಒಡೆಯುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿದರು.

ಇವತ್ತಿನ ಪಾದಯಾತ್ರೆ ಪಕ್ಷ, ರಾಜಕಾರಣದ ಲಾಭ–ನಷ್ಟಕ್ಕೆ ಸಂಬಂಧಿಸಿರುವುದು ಅಲ್ಲ. ರೈತರ ಹಿತ ಕಾಯುವ ಸಲುವಾಗಿ ಮಾಡುತ್ತಿರುವ ಪಾದಯಾತ್ರೆ. ಇದು ಆರಂಭ ಅಷ್ಟೇ. ಏಳು ಜನ ನಿನ್ನೆ ಚೆಕ್ ತೆಗೆದುಕೊಂಡಿದ್ದಾರೆ. ಇಲ್ಲಿ ಫಲವತ್ತಾದ ಭೂಮಿ ಇದೆ. ಕೆಲವು ದಲ್ಲಾಳಿಗಳು ವ್ಯವಸ್ಥಿತವಾಗಿ ನಿಮ್ಮ ಭೂಮಿ ಹೊಡೆಯಲು ಸಂಚು ರೂಪಿಸುತ್ತಿದ್ದಾರೆ ಎಂದು ಕಿಡಿಕಾರಿದರು.

ಇದೇ ಸಿಎಂ ಅವರು ಚುನಾವಣೆಗೆ ಮುನ್ನ 'ಪೆನ್–ಪೇಪರ್ ಕೊಡಿ, ಬಡವರ ಉದ್ಧಾರ ಮಾಡುತ್ತೇನೆ' ಎಂದಿದ್ದೀರಿ. ಈಗ ಜನತೆ ಎರಡನ್ನೂ ಕೊಟ್ಟಿದ್ದಾರೆ. ಆ ಪೆನ್ನನ್ನು ರೈತರ ಪರವಾಗಿ ಬಳಸಿ, ಬಿಡದಿ ಕೃಷಿ ವಲಯ ತಿದ್ದುಪಡಿ ಮಾಡಿ. ಅದನ್ನು ಬಿಟ್ಟು ರಿಯಲ್ ಎಸ್ಟೇಟ್ ಮಾಫಿಯಾಗೆ ಸಹಿ ಹಾಕಲು ನಿಮ್ಮ ಪೆನ್ ಇದೆಯೇ? ಎಂದು ನಿಖಿಲ್ ಕುಮಾರಸ್ವಾಮಿ ಪ್ರಶ್ನಿಸಿದರು.

ಈ ವೇಳೆ ಶಾಸಕರುಗಳಾದ ಸುರೇಶ್ ಬಾಬು, ಹರೀಶ್ ಗೌಡ, ಎಂ.ಟಿ.ಕೃಷ್ಣಪ್ಪ, ಹೆಚ್.ಟಿ.ಮಂಜು, ಕೋರ್ ಕಮಿಟಿ ಅಧ್ಯಕ್ಷ ಜಿ.ಕೆ.ಕೃಷ್ಣರೆಡ್ಡಿ, ಮಹಿಳಾ ಘಟಕದ ಅಧ್ಯಕ್ಷೆ ರಶ್ಮಿ ರಾಮೇಗೌಡ, ಜಯಮುತ್ತು, ಅಶ್ವಿನ್ ಕುಮಾರ್, ಅನ್ನದಾನಿ, ಚೇತನ್ ಕೆಂಪರಾಜು ಸೇರಿದಂತೆ ಸಾವಿರಾರು ರೈತರು, ಜೆಡಿಎಸ್ ಕಾರ್ಯಕರ್ತರು ಹಾಗೂ ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಿದರು.

ಫ್ಲೆಕ್ಸ್ ಹರಿದಿದ್ದಕ್ಕೆ ಆಕ್ರೋಶ: ಪಾದಯಾತ್ರೆ ಸಂದರ್ಭದಲ್ಲಿ ಯೋಜನೆಯ ಪರ ಮತ್ತು ವಿರೋಧ ಇರುವವರ ನಡುವೆ ವಾಗ್ವಾದ ನಡೆಯಿತು. ಅಂಚಿಪುರ ಗ್ರಾಮದಲ್ಲಿ ಆರಂಭಿಸಿದ ನಿಖಿಲ್ ನಂತರ ಗ್ರಾಮದ ಕಾಲೋನಿ ಕಡೆಗೆ ಪಾದಯಾತ್ರೆ ಹೊರಟರು. ಅಷ್ಟೊತ್ತಿಗಾಗಲೇ ಗ್ರಾಮದ ವೃತ್ತದಲ್ಲಿ ಅಳವಡಿಸಿದ್ದ ಟೌನ್ ಶಿಪ್ ಪರವಾದ ಫ್ಲೆಕ್ಸ್‌ಗಳನ್ನು ಹೋರಾಟಗಾರರು ಹರಿದಿರುವ ಸುದ್ದಿ ಹಬ್ಬಿತ್ತು. ಕಾಲೋನಿಯ ಅಟ್ಟಿಮಾರಮ್ಮ ದೇವಸ್ಥಾನಕ್ಕೆ ನಿಖಿಲ್ ಅವರು ಭೇಟಿ ನೀಡಿ, ಒಳಕ್ಕೆ ಬರಲು ಮುಂದಾದರು. ಆಗ ಪರವಾಗಿರುವವರ ಗುಂಪು ಎದುರುಗೊಂಡಿತು. ಆಗ ನಿಖಿಲ್ ಕಾರು ಏರಿದರು. ಆಗ ಗ್ರಾಮಸ್ಥರು, ನಾವು ಯೋಜನೆ ಪರವಾಗಿದ್ದೇವೆ. ನಮ್ಮ ಭೂಮಿ ನಮ್ಮ ಹಕ್ಕು. ನಮಗೆ ಟೌನ್ ಶಿಪ್ ಬೇಕು ಎಂದರು. ಪರ ಹಾಗೂ ವಿರೋಧದ ಫ್ಲೆಕ್ಸ್ ವಿಚಾರಕ್ಕೆ ವಾಗ್ವಾದ ನಡೆಯಿತು. ಪೊಲೀಸರು ಸಮಾಧಾನಪಡಿಸಿ, ಪರಿಸ್ಥಿತಿ ತಿಳಿಗೊಳಿಸಿದರು.



ಬಿಡದಿ ಟೌನ್‌ಶಿಪ್ ವಿರೋಧಿಸಿ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಭಾನುವಾರ ನಡೆದ ಪಾದಯಾತ್ರೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕರಾದ ಎ.ಮಂಜು, ಅಶ್ವಿನ್ ಕುಮಾರ್, ಮೈಸೂರಿನ ಮಾಜಿ ಮೇಯರ್ ಎಂ.ಜೆ.ರವಿಕುಮಾರ್ ಮತ್ತಿತರರು ಪಾಲ್ಗೊಂಡಿದ್ದರು.

ಸಾರ್ವಜನಿಕ ಅಧಿಸೂಚನೆಗಾಗಿ

ಈ ಅಧಿಸೂಚನೆ ಮೂಲಕ ಸಾರ್ವಜನಿಕರ ಗಮನಕ್ಕೆ ತರುವ ವಿಷಯ ಏನೆಂದರೆ, ಅದಾಗಿ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತು ಮೂಲತಃ ಗುರುರಾಜ ರಾವ್ ಸಿ.ಆರ್. ಬಿನ್ ರಾಮರಾವ್ ಸಿ. (GURURAJA RAO C.R. S/o Ramarao C.) ಎಂಬುವವರಿಗೆ ಈ ಹಿಂದೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಮಂಜೂರಾತಿಯಾಗಿದ್ದು, ಸದರಿಯವರು ಷೆಡ್ಯೂಲ್ ಸ್ವತ್ತಿನ ಟೈಟಲ್‌ಡೀಡ್ ಪತ್ರವನ್ನು ಸಹಾ ಪ್ರಾಧಿಕಾರದಿಂದ ಅವರ ಹೆಸರಿಗೆ ಪಡೆದುಕೊಂಡಿರುತ್ತಾರೆ. ಸದರಿ ಗುರುರಾಜ ರಾವ್ ಸಿ.ಆರ್. ರವರು ದಿನಾಂಕ: 26–03–2018 ರಂದು ಮೈಸೂರಿನಲ್ಲಿಯೇ ಮರಣ ಹೊಂದಿರುತ್ತಾರೆ. ತದನಂತರ, ಷೆಡ್ಯೂಲ್ ಸ್ವತ್ತಿನ ಪೌತಿ ಖಾತೆಯು ಸದರಿಯವರ ಧರ್ಮಪತ್ನಿಯಾದ ರತ್ನ ಕೆ.ಜಿ. (RATHNA K.G., W/o Late Gururaja Rao C.R.) ರವರಿಗೆ ವರ್ಗಾವಣೆಯಾಗಿದ್ದು, ನಂತರ ಈ ಮೇಲ್ಕಂಡ ಲೇಟ್ ಗುರುರಾಜ ರಾವ್ ಸಿ.ಆರ್. ಮತ್ತು ಅವರ ಪತ್ನಿ ರತ್ನ ಕೆ.ಜಿ. ರವರುಗಳಿಗೆ ಸಂತಾನ ಭಾಗ್ಯ ಇಲ್ಲದೇ ಇರುವುದರಿಂದ, ಸದರಿ ರತ್ನ ಕೆ.ಜಿ. ರವರು ಅವರ ಜೀವಿತ ಕಾಲದಲ್ಲಿ ಈ ಷೆಡ್ಯೂಲ್ ಸ್ವತ್ತು ಅವರ ಖಾಸಾ ಸಹೋದರಿ ಶ್ರೀಮತಿ ಕೆ.ಜಿ. ಉಷಾ ಕೋಂ ಲೇಟ್ ವಿ. ನಾಗಭೂಷಣ್ ಮತ್ತು ಖಾಸಾ ಸಹೋದರನಾದ ಮತ್ತು ಶ್ರೀ ಗುರುರಾಜ್ ಕೆ.ಜಿ. ಬಿನ್ ಲೇಟ್ ಆರ್. ಗುಂಡೂರಾವ್‌ರವರುಗಳಿಗೆ ಸಮನಾಗಿ ಜಂಟಿಯಾಗಿ ಸೇರಬೇಕೆಂದು ದಿನಾಂಕ: 15–10–2018 ರಂದು ವಿಲ್ ಯಾ ಮರಣಶಾಸನ ಪತ್ರವನ್ನು ಬರೆದಿದ್ದು, ಸದರಿ ವಿಲ್ ಪತ್ರವು ದಿನಾಂಕ: 15–10–2018 ರಂದು ಮೈಸೂರು ದಕ್ಷಿಣ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಮೂರನೇ ಪುಸ್ತಕದ ಸಿ.ಡಿ. ನಂ. ಎಂ.ವೈ.ಎಸ್.ಡಿ. 348 ನೇದ್ದರಲ್ಲಿ ದಸ್ತಾವೇಜು ಸಂಖ್ಯೆ MYS-3-00416-2018-19 ನೇ ನಂಬರಾಗಿ ರಿಜಿಸ್ಟರ್ ಆಗಿರುತ್ತದೆ. ಸದರಿ ವಿಲ್ ಯಾ ಮರಣಶಾಸನ ಪತ್ರವು ಸದರಿಯವರ ಮೊದಲ ಹಾಗೂ ಕಟ್ಟಕಡೆಯ ವಿಲ್ ಶಾಸನವಾಗಿರುತ್ತದೆ. ತದನಂತರ ಸದರಿ ರತ್ನ ಕೆ.ಜಿ. ರವರು ಯಾವುದೇ ಸಂತಾನವಿಲ್ಲದೇ ದಿನಾಂಕ: 11–08–2020 ರಂದು ಮೈಸೂರಿನಲ್ಲಿ ಮರಣ ಹೊಂದಿರುತ್ತಾರೆ.

ಸದರಿ ರತ್ನ ಕೆ.ಜಿ. ರವರು ಬರೆದಿಟ್ಟಿರುವ ರಿಜಿಸ್ಟರ್ ವಿಲ್ ಯಾ ಮರಣಶಾಸನ ಪತ್ರದ ಮೇರೆ ಈ ಷೆಡ್ಯೂಲ್ ಸ್ವತ್ತು ಸದರಿ ರತ್ನ ಕೆ.ಜಿ. ರವರ ಕಾಲಾನಂತರ ಸದರಿಯವರ ಸಹೋದರಿ ಮತ್ತು ಸಹೋದರನಾದ ಶ್ರೀಮತಿ ಕೆ.ಜಿ. ಉಷಾ ಮತ್ತು ಶ್ರೀ ಗುರುರಾಜ್ ಕೆ.ಜಿ. ರವರುಗಳ ಸಂಪೂರ್ಣ ಹಕ್ಕಿಗೂ, ಮಾಲೀಕತ್ವಕ್ಕೂ ಸಹಾ ಒಳಪಟ್ಟು ಹಾಲೀ ಸದರಿಯವರುಗಳ ಹೆಸರಿನಲ್ಲಿ ಮೈಸೂರು ಮಹಾನಗರ ಪಾಲಿಕೆಯಲ್ಲಿ ಮೇಲ್ಕಂಡ ಸ್ವತ್ತಿನ ಜಂಟಿ ಖಾತೆಯೂ ಸಹಾ ವರ್ಗಾವಣೆಯಾಗಿರುತ್ತದೆ.

ಈ ರೀತಿಯಾಗಿ ಮೇಲ್ಕಂಡ ಶ್ರೀಮತಿ ಕೆ.ಜಿ. ಉಷಾ ಮತ್ತು ಶ್ರೀ ಗುರುರಾಜ್ ಕೆ.ಜಿ. ರವರುಗಳಿಂದ ಜಂಟಿಯಾಗಿ ಷೆಡ್ಯೂಲ್ ಸ್ವತ್ತನ್ನು, ನನ್ನ ಕಕ್ಷಿದಾರರಾದ ಶ್ರೀ ಎನ್. ಮಹೇಂದ್ರ ರವರು ಶುದ್ಧಕ್ರಯಕ್ಕೆ ಪಡೆಯುತ್ತಿದ್ದು, ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯಾದ ಕಾನೂನುಬದ್ಧ ಹಕ್ಕುಬಾಧ್ಯತೆಗಳು, ತಕರಾರುಗಳು ಇದ್ದಲ್ಲಿ ಈ ಸಾರ್ವಜನಿಕ ಅಧಿಸೂಚನೆ ಪ್ರಕಟಗೊಂಡ 7 (ಏಳು) ದಿವಸಗಳ ವಾಯಿದೆಯಲ್ಲಿ ಸೂಕ್ತ ನೈಜ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ನನ್ನ ವಿಳಾಸ ಅಥವಾ ದೂರವಾಣಿ ಸಂಖ್ಯೆಗೆ ಸಂಪರ್ಕಿಸತಕ್ಕದ್ದು.

ಈ ಮೇಲ್ಕಂಡ ವಾಯಿದೆಯಲ್ಲಿ ಯಾರಿಂದಲೂ ಯಾವ ರೀತಿಯಾದ ತಂಟೆ ತಕರಾರುಗಳು ಕಂಡುಬಾರದೇ ಇದ್ದಲ್ಲಿ, ಮೇಲ್ಕಂಡ ಶ್ರೀಮತಿ ಕೆ.ಜಿ. ಉಷಾ ಮತ್ತು ಶ್ರೀ ಗುರುರಾಜ್ ಕೆ.ಜಿ. ರವರುಗಳ ಸಂಪೂರ್ಣ ಮಾಲೀಕತ್ವಕ್ಕೆ ಒಳಪಟ್ಟಿರುವ ಷೆಡ್ಯೂಲ್ ಸ್ವತ್ತನ್ನು ಸದರಿಯವರುಗಳಿಂದ ನನ್ನ ಕಕ್ಷಿದಾರರು ಶುದ್ಧಕ್ರಯಪತ್ರದ ಮೂಲಕ ಕಾನೂನುಬದ್ಧ ರಿಜಿಸ್ಟರ್ ವ್ಯವಹರಣೆಯನ್ನು ಮಾಡಿಕೊಳ್ಳುತ್ತಾರೆ ಮತ್ತು ಷೆಡ್ಯೂಲ್ ಸ್ವತ್ತಿನ ವರ್ಗಾವಣೆಯ ಎಲ್ಲಾ ವ್ಯವಹರಣೆಗಳನ್ನು ಸಹಾ ಅವರ ಹೆಸರಿಗೆ ಮಾಡಿಕೊಂಡು, ಷೆಡ್ಯೂಲ್ ಸ್ವತ್ತಿನ ಸಂಪೂರ್ಣ ಕಾನೂನುಬದ್ಧ ಮಾಲೀಕರುಗಳಾಗುತ್ತಾರೆ ಎಂದು ಈ ಮೂಲಕ ತಿಳಿಯಪಡಿಸಿದೆ. ಮೇಲ್ಕಂಡ ವಾಯಿದೆಯ ನಂತರ ಬರುವ ಯಾವುದೇ ತಕರಾರುಗಳಿಗೆ ನನ್ನ ಕಕ್ಷಿದಾರರುಗಳು ಜವಾಬ್ದಾರರಾಗಿರುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ದಟ್ಟಗಳ್ಳಿ ಬಡಾವಣೆ, ಮೂರನೇ ಹಂತ, ಕನಕದಾಸನಗರದಲ್ಲಿರುವ ನಿವೇಶನ / ಮನೆ ನಂ. 2436, E-KHATHA No. 95542 66437 ನಂಬರ್ 6x9 ಮೀಟರ್ ಅಥವಾ 20x30 ಅಡಿ ಅಳತೆಯ ಸ್ವತ್ತಿಗೆ ಚಕ್ಕುಬಂಧಿ:– ಪೂರ್ವಕ್ಕೆ: 2437ನೇ ನಂಬರ್ ಸ್ವತ್ತು ; ಪಶ್ಚಿಮಕ್ಕೆ: 2435 ನೇ ನಂಬರ್ ಸ್ವತ್ತು ; ಉತ್ತರಕ್ಕೆ: ರಸ್ತೆ ; ದಕ್ಷಿಣಕ್ಕೆ: ಮೂಡಾ ನಿವೇಶನ.

Sd/- ಅರ್ತೀಶ್ ಕುಮಾರ್ ಎಂ. B.Com., LL.B., ADVOCATE, ENROLMENT No: KAR/6206/2024 'DEEDS ASSOCIATES', Shop No. 2, Property No. 902, Ashraya Layout, Nivedithanagar, Mysore-22. Mob. No. 9739297699
Date: 21-06-2026

ನಕ್ಕರೆ ಅದೇ ಸ್ವರ್ಗ

ಮಗ : ಅಪ್ಪ ನನಗೆ ಒಂದು ಹುಡುಗಿ ತುಂಬಾ ಇಷ್ಟ ಆಗಿದ್ದಾಳೆ. ಅವಳನ್ನೇ ಮದುವೆಯಾಗ್ತೀನಿ.

ಅಪ್ಪ : ಅವಳಿಗೂ ನೀನು ಇಷ್ಟನಾ?

ಮಗ : ಹೂ ಅಪ್ಪ, ಅವಳಿಗೆ, ಅವಳ ಅಮ್ಮನಿಗೆ, ಇಡೀ ಕುಟುಂಬಕ್ಕೆ ನಾನು ಅಂದ್ರೆ ತುಂಬಾ ಇಷ್ಟ

ಅಪ್ಪ : ಮತ್ತೇನು ತೊಂದರೆ? ಮದುವೆ ಮಾಡ್ಕೋ ಬಿಡು.

ಮಗ : ಆದರೆ, ಅವಳ ಗಂಡ ಒಬ್ಬನೇ ಸ್ವಲ್ಪ ಅಡ್ಡಿ ಮಾಡ್ತಾ ಇದ್ದಾನೆ.

ಮೈಸೂರು ಮಿತ್ರ

ಸೋಮವಾರ, ಜೂನ್ 22, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಹೃದಯ ಮತ್ತು ಮನಸ್ಸಿನ ನಡುವೆ ಸಂಘರ್ಷ ಏರ್ಪಟ್ಟಾಗ, ನಿಮ್ಮ ಹೃದಯದ ಕರೆಗೆ ಓಗೊಡಿ.... –ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಹಣ ಇರುವ ಗಂಡನನ್ನು ಕೈ ಹಿಡಿದರೂ ಋಣ ಇರುವಷ್ಟೇ ಪ್ರಾಪ್ತಿ.

ನಿಮ್ಮ ಪತ್ರಗಳು

ಅಡ್ಡ ಮತದಾನ: ಸಂವಿಧಾನಬದ್ಧವೇ?

ಮಾನ್ಯರೆ,


ವಿಧಾನಪರಿಷತ್ ಸದಸ್ಯರ ಸ್ಥಾನದ ಚುನಾವಣೆಯಲ್ಲಿ ಜೆಡಿಎಸ್ ಮತ್ತು ಬಿಜೆಪಿ ಪಕ್ಷದ ಸದಸ್ಯರಿಂದ ಅಡ್ಡ ಮತದಾನವಾಗಿದೆ ಎಂಬ ಬಗ್ಗೆ ಚರ್ಚೆಯಾಗುತ್ತಿದೆ. ಪಕ್ಷಗಳು ಆ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡು ಗೌಪ್ಯ ಮತದಾನ ವಾಗಿದ್ದರೂ ಯಾರು ಪಕ್ಷದ ನಿರ್ಧಾರದ ವಿರುದ್ಧ ಮತ ಚಲಾಯಿಸಿದ್ದಾರೆ ಎಂಬುದು ತಿಳಿದಿದೆ ಅಥವಾ ತಿಳಿಯಲು ಸಮಿತಿ ರಚಿಸುವುದಾಗಿ ಆಯಾ ಪಕ್ಷಗಳ ನಾಯಕರು ಹೇಳಿಕೆ ನೀಡಿ ಅವರ ವಿರುದ್ಧ ಕ್ರಮ ಜರುಗಿಸುವುದಾಗಿ ಹೇಳುತ್ತಿದ್ದಾರೆ.

ಅಂದರೆ ಸಂವಿಧಾನಬದ್ಧವಾಗಿ ನಡೆದ ಗೌಪ್ಯ ಮತದಾನ ಇವರಿಗೆ ತಿಳಿದಿವುದಾದರೆ ಅದು ಗೌಪ್ಯವಾಗಿ ಚುನಾವಣೆ ನಡೆಸಬೇಕಾದ ಚುನಾವಣಾ ಆಯೋಗದ ವೈಫಲ್ಯವಲ್ಲವೇ? ಗೌಪ್ಯ ಮತದಾನ ಅನ್ಯ ಮಾರ್ಗದಿಂದ ಭೇದಿಸುವುದು ನಿಯಮ ಬಾಹಿರವಾಗುವುದಿಲ್ಲವೇ? ಪ್ರಜಾಪ್ರಭುತ್ವ ಆಶಯದಡಿ ಸ್ವಂತ ತೀರ್ಮಾನದಂತೆ ಮತ ಚಲಾಯಿಸುವವರ ಮೇಲೆ ಸಾದಿಕೆಗಳಾಗುವುದಾದರೆ, ಹಿತ ಶತ್ರುಗಳಾಗುವುದಾದರೆ ಪಕ್ಷದ ವರಿಷ್ಠರ ನಿರ್ಧಾರದಂತೆ ವ್ಯಕ್ತಿಗಳನ್ನು ಆಯ್ಕೆ ಮಾಡುವುದೇ ಕ್ರಮಬದ್ಧವಾದ ನಿರ್ಧಾರವಾಗುವುದಾದರೆ ಗೌಪ್ಯ ಮತದಾನದ ಅವಶ್ಯಕತೆ ಏನಿದೆ.

ಸಾಮಾನ್ಯ ಚುನಾವಣೆಯಲ್ಲಿ ಮತದಾರರಿಗೆ ಆಮಿಷ, ಒತ್ತಾಯ, ಭಯ ಪಡಿಸಿ ಮತ ಪಡೆಯುವುದು ತಪ್ಪಾಗುವುದಾದರೆ, ಅದು ಈ ಚುನಾವಣೆಗೆ ಅನ್ವಯವಾಗಬೇಕಲ್ಲವೇ? ತಮ್ಮ ಇಚ್ಛೆಯಲ್ಲಿ ಮತದಾನ ಮಾಡಿರುವ ಶಾಸಕರಿಗೆ ಬಹಿರಂಗವಾಗಿಯೇ ಧಮಕಿ ಹಾಕುತ್ತಿರುವುದು ಎಷ್ಟರ ಮಟ್ಟಿಗೆ ಸರಿ. ಹಾಗಾಗಿ ಎಲ್ಲಾ ಪಕ್ಷಗಳು ಸರ್ವಾನುಮತದಿಂದ ಶಾಸನಕ್ಕೆ ತಿದ್ದುಪಡಿ ತಂದು ಚುನಾವಣೆ ಇಲ್ಲದೆ ಆಯಾ ಪಕ್ಷಗಳ ಸದಸ್ಯರ ಸಂಖ್ಯೆಗನುಗುಣವಾಗಿ ಪಕ್ಷ ಸೂಚಿಸಿದ ಸದಸ್ಯರನ್ನು ಆಯ್ಕೆ ಮಾಡುವುದು ಸೂಕ್ತವಲ್ಲವೇ? ಇದರಿಂದ ಚುನಾವಣಾ ಸಮಯ, ಜನರ ತೆರಿಗೆ ಹಣ ಉಳಿಯುವುದಲ್ಲದೆ ಶಾಸಕರನ್ನು ರೆಸಾರ್ಟ್‌ಗಳಲ್ಲಿ ಬಚ್ಚಿಡುವ, ಅಡ್ಡ ಮತದಾನವನ್ನು ತನಿಖೆಗೊಳಪಡಿಸುವ ಕೆಲಸವೂ ತಪ್ಪುತ್ತದೆ.

–ಕೆ.ಎಂ.ನಾಗರಾಜು, ವಿಜಯನಗರ 1ನೇ ಹಂತ, ಮೈಸೂರು.

ಶಾಸಕರೇ ಇತ್ತ ಗಮನಹರಿಸಿ....



ಮಾನ್ಯರೆ,

ಮೈಸೂರಿನ ವಿಜಯನಗರ 2ನೇ ಹಂತ ವಾಟರ್ ಟ್ಯಾಂಕ್ ರಸ್ತೆಯಲ್ಲಿ ದಿನೇ ದಿನೇ ಟ್ರಾಫಿಕ್ ಸಮಸ್ಯೆ ಹೆಚ್ಚಾಗುತ್ತಿದೆ. ಫುಟ್‌ಪಾತ್‌ನಲ್ಲಿ ಸಾರ್ವಜನಿಕರು ನಡೆದಾಡುವ ಸ್ಥಳದಲ್ಲಿ ತಿಂಡಿ ತಿನಿಸು ವ್ಯಾಪಾರಸ್ಥರದ್ದೇ ದರ್ಬಾರ್. ವಿ.ವಿ.ಪುರಂ ಸಂಚಾರಿ ಪೊಲೀಸರು ಬಂದರೂ ಡೋಂಟ್‌ಕೇರ್. ಸಾರ್ವಜನಿಕರ ಮನೆಗಳ ಮುಂದೆ ಗಾಡಿಗಳನ್ನು ನಿಲ್ಲಿಸಿ ಎಸ್ಕೇಪ್ ಆಗುತ್ತಿದ್ದಾರೆ.

ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕರೇ ಕೂಡಲೇ ಇವರನ್ನು ಸ್ಥಳಾಂತರಿಸಿ ಬೇರೆ ಜಾಗದಲ್ಲಿ ವ್ಯವಸ್ಥೆ ಮಾಡಿಕೊಡಿ. ಪಾಲಿಕೆ ಅಧಿಕಾರಿಗಳು ಕಂಡರೂ ಕೇಳರಿಯದಂತೆ ಕುಳಿತಿದ್ದಾರೆ. ವ್ಯಾಪಾರ ಮಾಡಲಿ. ಆದರೆ ರಸ್ತೆಯನ್ನೇ ತಡೆಗಟ್ಟಿಕೊಂಡು ಸಾರ್ವಜನಿಕರಿಗೆ ತೊಂದರೆ ಕೊಡುತ್ತಾ, ಆಂಬುಲೆನ್ಸ್, ಇನ್ನಿತರೆ ವಾಹನಗಳಿಗೆ ತೊಂದರೆ ಕೊಡುತ್ತಾ ವ್ಯಾಪಾರ ಮಾಡುವುದು ಕಾನೂನುಬಾಹಿರ. ಕೂಡಲೇ ಇವರನ್ನು ಪಾಲಿಕೆ ಅಧಿಕಾರಿಗಳಿಗೆ ಎಚ್ಚರಿಸಿ ಸರಿಯಾದ ಸ್ಥಳ ನಿಗದಿಪಡಿಸಿ.

–ಸುಬ್ರಹ್ಮಣ್ಯ, ವಿಜಯನಗರ 2ನೇ ಹಂತ, ಮೈಸೂರು.

ಮಧುಮೇಹ ತಡೆಗೆ ಕ್ರಾಂತಿಕಾರಿ ಕ್ರಮ ಅಗತ್ಯ!

ಮಾನ್ಯರೆ,

ಭಾರತವು ಇಂದು ಜಗತ್ತಿನ ಮಧುಮೇಹದ ರಾಜಧಾನಿ ಎಂಬ ಕಳವಳಕಾರಿ ಖ್ಯಾತಿಗೆ ಪಾತ್ರವಾಗಿದ್ದು, ನಮ್ಮ ದೇಶದ ಭವಿಷ್ಯದ ಆರೋಗ್ಯ ಇಂದಿನ ಆಹಾರ ಮಾಫಿಯಾದ ಕೈಯಲ್ಲಿ ಸಿಲುಕಿ ನಲುಗುತ್ತಿದೆ. ಈ ಮಾರಕ ಪರಿಸ್ಥಿತಿಯನ್ನು ತಡೆಯಲು ಸರ್ಕಾರವು ತಕ್ಷಣವೇ ಕಠಿಣ ನಿಯಮಗಳನ್ನು ಜಾರಿಗೆ ತರಬೇಕಿದೆ.

ಧೂಮಪಾನದ ಪ್ಯಾಕೇಟ್‌ಗಳ ಮೇಲಿರುವಂತೆ, ಅತಿಯಾದ ಸಕ್ಕರೆ ಮತ್ತು ಹಾನಿಕಾರಕ ರಾಸಾಯನಿಕ ಹೊಂದಿರುವ ಪ್ರತಿ ಆಹಾರ ಪದಾರ್ಥ ಹಾಗೂ ಪಾನೀಯಗಳ ಪ್ಯಾಕೆಟ್‌ಗಳ ಮೇಲೆ ಕಡ್ಡಾಯವಾಗಿ ಶೇ.50ರಷ್ಟು ದೊಡ್ಡದಾದ 'ಆರೋಗ್ಯ ಎಚ್ಚರಿಕೆ ಲೇಬಲ್' ಮುದ್ರಿಸುವುದನ್ನು ಕಡ್ಡಾಯಗೊಳಿಸಬೇಕು. ಆರೋಗ್ಯದ ಹೆಸರಿನಲ್ಲಿ ಯುವ ಪೀಳಿಗೆ ದಾರಿ ತಪ್ಪಿಸುತ್ತಿರುವ ಪ್ರತಿ ಪದಾರ್ಥದಲ್ಲೂ ಇರುವ ಸಕ್ಕರೆ ಅಂಶ ತುಂಬಿರುವ ಕಳಪೆ ಆರೋಗ್ಯ ಪಾನೀಯ, ಪೌಡರ್‌ಗಳು, ಪ್ರೋಟೀನ್ ಪೌಡರ್‌ಗಳನ್ನು ನಿಷೇಧಿಸಬೇಕು. ಅಲ್ಲದೆ, ಸೆಲೆಬ್ರಿಟಿಗಳನ್ನು ಬಳಸಿಕೊಂಡು ಸಾರ್ವಜನಿಕರನ್ನು ವಂಚಿಸುತ್ತಿರುವ ನಕಲಿ ಮತ್ತು ಸುಳ್ಳು ಪೌಷ್ಟಿಕಾಂಶದ ಜಾಹೀರಾತುಗಳನ್ನು ನೀಡುವ ಕಂಪನಿಗಳ ವಿರುದ್ಧ ಭಾರಿ ಮೊತ್ತದ ದಂಡ ಹಾಗೂ ಕಠಿಣ ಕಾನೂನು ಕ್ರಮ ಜಾರಿಯಾಗಬೇಕು. ಹೆಚ್ಚು ಸಕ್ಕರೆ ಹೊಂದಿರುವ ಜಂಕ್ ಫುಡ್ ಹಾಗೂ ಪಾನೀಯಗಳ ಮೇಲೆ ಪ್ರತ್ಯೇಕ ಶುಗರ್ ಟ್ಯಾಕ್ಸ್ (ಸಕ್ಕರೆ ತೆರಿಗೆ) ವಿಧಿಸುವ ಮೂಲಕ ಮತ್ತು ಶಾಲಾ ಕಾಲೇಜುಗಳ ಸುತ್ತಮುತ್ತ ಇವುಗಳ ಮಾರಾಟ ನಿಯಂತ್ರಿಸುವ ಮೂಲಕ ರಾಜ್ಯಗಳು ಜನಾರೋಗ್ಯವನ್ನು ರಕ್ಷಿಸಬೇಕಿದೆ. –ಡಾ.ವಿಜಯಕುಮಾರ್ ಎಚ್.ಕೆ., ಮೈಸೂರು.

ಇದರತ್ತಲೂ ಗಮನಹರಿಸಬೇಕಿದೆ!

ಮಾನ್ಯರೆ,



ಇತ್ತೀಚಿಗೆ ಮೈಸೂರು ಗ್ರಾಮಾಂತರ ಬಸ್ ನಿಲ್ದಾಣದ ಮುಂದಿನ ಫುಟ್‌ಪಾತ್ ಅತಿಕ್ರಮವನ್ನು ಸಂಚಾರ ಪೊಲೀಸರು ತೆರವುಗೊಳಿಸಿದ್ದಾರೆ. ಇದರಿಂದ ಪಾದಚಾರಿಗಳಿಗೆ ಅನುಕೂಲವಾಗಿದ್ದರೂ ನಿಜ. ಹಾಗೆಯೇ ಅದೇ ರಸ್ತೆಯಲ್ಲಿನ ಛತ್ರಿ ಮರದ ಎದುರಿನ ಎಂಎಸ್ ಗೋಲ್ಡ್ ಮುಂಭಾಗದ ಪಾದಚಾರಿ ರಸ್ತೆಯಂತೂ ಶಿಥಿಲಗೊಂಡಿದೆ. ಅನೇಕ ಕಡೆ ಇದೇ ಪರಿಸ್ಥಿತಿ. ಮಧ್ಯಾಹ್ನದವರು ಓಡಾಡುವುದಕ್ಕಂತೂ ಕಷ್ಟಕರವಾಗಿದೆ. ಇದರ ಬಗ್ಗೆ ಸಂಬಂಧಪಟ್ಟವರು ಗಮನಹರಿಸಬೇಕಿದೆ.


–ಗೋಪಿನಾಥ್ ಎಂ., ಕೆಸರೆ, ಮೈಸೂರು.

ಈ ಜೀವನ



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಜ್ಞಾನವೇ ಸಂಪತ್ತು...



ಮನುಷ್ಯನು ಜೀವನದಲ್ಲಿ ಅನೇಕ ರೀತಿಯ ಸಂಪತ್ತನ್ನು ಗಳಿಸಲು ಪ್ರಯತ್ನಿಸುತ್ತಾನೆ. ಹಣ, ಆಸ್ತಿ, ಅಧಿಕಾರ ಮತ್ತು ಕೀರ್ತಿ ಇವೆಲ್ಲವೂ ಜೀವನಕ್ಕೆ ಒಂದು ಮಟ್ಟಿನ ಸುಖ ನೀಡಬಹುದಾದರೂ, ಅವೆಲ್ಲಕ್ಕಿಂತ ಶ್ರೇಷ್ಠವಾದ ಸಂಪತ್ತು ಜ್ಞಾನ. ಏಕೆಂದರೆ ಭೌತಿಕ ಸಂಪತ್ತು ಕಳೆದುಹೋಗಬಹುದು, ಕಳ್ಳತನವಾಗಬಹುದು ಅಥವಾ ಕಾಲಕ್ರಮೇಣ ನಶಿಸಬಹುದು. ಆದರೆ ಜ್ಞಾನವೆಂಬ ಸಂಪತ್ತು ಮನುಷ್ಯನೊಂದಿಗೆ ಸದಾ ಇರುತ್ತದೆ; ಅದನ್ನು ಯಾರೂ ಕಸಿದುಕೊಳ್ಳಲು ಸಾಧ್ಯವಿಲ್ಲ. ಜ್ಞಾನವು ವ್ಯಕ್ತಿಯ ಚಿಂತನೆಗೆ ಬೆಳಕು ನೀಡುತ್ತದೆ, ವ್ಯಕ್ತಿತ್ವ ರೂಪಿಸುತ್ತದೆ ಮತ್ತು ಜೀವನದ ಸವಾಲುಗಳನ್ನು ಎದುರಿಸುವ ಶಕ್ತಿ ನೀಡುತ್ತದೆ. ಮನುಷ್ಯನ ಬದುಕಿನಲ್ಲಿ ಬೆಲೆ ಕಟ್ಟಲಾಗದ ಸಂಪತ್ತು ಯಾವುದೆಂದರೆ ಅದು ಜ್ಞಾನ. ಹಣ, ಆಸ್ತಿ, ಚಿನ್ನಾಭರಣಗಳಂತೆ ಬೆಲೆ ಕಟ್ಟಲಾಗದ್ದು ಜ್ಞಾನ. ಜ್ಞಾನವಿದ್ದರೆ ನಾವು ಎಲ್ಲಿಯೇ ಹೋದರೂ ಅದಕ್ಕೆ ತಕ್ಕ ಮನ್ನಣೆ ಸಿಗುತ್ತದೆ. ಜ್ಞಾನಕ್ಕಿಂತ ಮಿಗಿಲಾದುದು ಮತ್ತೊಂದಿಲ್ಲ, ಜ್ಞಾನಕ್ಕಿರುವ ಮೌಲ್ಯವೇ ಅಂತದ್ದು. ಇದನ್ನು ಅರಿತುಕೊಂಡೇ ಸರ್ವಜ್ಞ ಕವಿ ಜ್ಞಾನದ ಕುರಿತು ತನ್ನ ತ್ರಿಪದಿಯಲ್ಲಿ ಈ ರೀತಿ ಹೇಳಿದ್ದಾರೆ.

ಜ್ಞಾನದಿಂ ಮೇಲಿಲ್ಲ ಶ್ವಾನದಿಂ ಕೀಳಿಲ್ಲ
ಭಾನುಮಂಡಲದಿಂ ಬೆಳಗಿಲ್ಲ ಜಗದೊಳಗೆ
ಜ್ಞಾನವೇ ಮೇಲು ಸರ್ವಜ್ಞ

ಸರ್ವಜ್ಞರ ಈ ತ್ರಿಪದಿಯು ಜ್ಞಾನದ ಮಹತ್ವವನ್ನು, ಶ್ರೇಷ್ಠತೆಯನ್ನು ಸಾರುತ್ತದೆ. ಅಜ್ಞಾನವೆಂಬ ಅಂಧಕಾರವನ್ನು ತೊಲಗಿಸಿ ವಿವೇಕವೆಂಬ ಜ್ಯೋತಿಯನ್ನು ಬೆಳಗಬಲ್ಲ ಕೆಲಸವನ್ನು ಜ್ಞಾನ ನಮಗೆ ನೀಡುತ್ತದೆ. ಸೂರ್ಯನ ಕಿರಣಗಳು ಹೇಗೆ ಇಡೀ ಜಗತ್ತನ್ನು ಬೆಳಗುವುದೋ ಹಾಗೆಯೇ ಜ್ಞಾನವು ನಮ್ಮ ಬದುಕನ್ನು ಬೆಳಗುತ್ತದೆ. ಜ್ಞಾನವಿಲ್ಲದವನು ನಾಯಿಗಿಂತ ಕೀಳು ಎಂಬ ಮಾತು ಜ್ಞಾನವೆಂಬುದು ಎಲ್ಲ ಕಾಲದಲ್ಲಿಯೂ ಎಷ್ಟು ಪ್ರಮುಖವಾದುದು ಎಂಬುದನ್ನು ತಿಳಿಸುತ್ತದೆ.

ಜ್ಞಾನದಿಂದಾಗುವ ಪ್ರಯೋಜನಗಳು

ಮನುಷ್ಯನ ಜೀವನವೇ ಲೆಕ್ಕಾಚಾರದಿಂದ ಕೂಡಿದೆ. ಪ್ರತಿಯೊಂದರಲ್ಲಿಯೂ ದೊರಕುವ ಫಲವನ್ನು ಅಪೇಕ್ಷಿಸಿಯೇ ಆ ಕಾರ್ಯದಲ್ಲಿ ತೊಡಗಿಕೊಳ್ಳುವುದು ಸರ್ವೇಸಾಮಾನ್ಯ. ಇಂತಹ ಗುಣವುಳ್ಳ ಮನುಷ್ಯರಿಗೆ ಜ್ಞಾನದಿಂದ ಸಿಗುವ ಪ್ರಯೋಜನಗಳೇನು ಎಂಬ ಪ್ರಶ್ನೆ ಎದುರಾದರೆ ಅದಕ್ಕಿರುವ ಉತ್ತರಗಳು ಹೀಗೆ ವಿಭಿನ್ನವಾಗಿರುತ್ತವೆ.

ಅಜ್ಞಾನ ನಿವಾರಿಸುತ್ತದೆ

ಯಾವುದೇ ವಿಷಯದ ಕುರಿತು ನಮಗಿರುವ ಅಜ್ಞಾನವನ್ನು ನಿವಾರಿಸುವ ಬಗೆಯನ್ನು ಜ್ಞಾನ ನಮಗೆ ತಿಳಿಸಿ ಕೊಡುತ್ತದೆ. ಅಜ್ಞಾನವೆಂಬ ಕತ್ತಲೆ ಹೋಗಲಾಡಿಸಿ ಅರಿವಿನ ಜ್ಯೋತಿಯ ಬೆಳಕ ನೀಡಿ, ಸನ್ನಡತೆ ಹಾದಿಯಲ್ಲಿ ನಡೆಸುತ್ತದೆ. ಇದನ್ನು ತಿಳಿದುಕೊಂಡಾಗ ಸಿಗುವ ಆತ್ಮತೃಪ್ತಿ, ಸಂತೋಷ ನಮ್ಮನ್ನು ಮತ್ತಷ್ಟು ಕಲಿಯಲು ಪ್ರೇರಣೆ ನೀಡುಬಲ್ಲದು. ಹುಟ್ಟಿನಿಂದ ಯಾರು ಮೇಧಾವಿಗಳಾಗಿರಲು ಸಾಧ್ಯವಿಲ್ಲ. ಪ್ರತಿಯೊಂದನ್ನು ಕಲಿಯುತ್ತಾ ಹೋದಂತೆ ಜ್ಞಾನ ತನ್ನ ವ್ಯಾಪ್ತಿ ಹೆಚ್ಚಿಸಿಕೊಂಡು ವಿಸ್ತಾರಗೊಳ್ಳುತ್ತಾ ಸಾಗುತ್ತದೆ. ಜ್ಞಾನದಿಂದ ಸರಿ–ತಪ್ಪುಗಳ ವ್ಯತ್ಯಾಸ ತಿಳಿದು ಸರಿಯಾದ ದಾರಿಯಲ್ಲಿ ಸಾಗಲು ಸಹಾಯವಾಗುತ್ತದೆ. ಅಜ್ಞಾನದಿಂದ ಉಂಟಾಗುವ ಭಯ, ಮೂಢನಂಬಿಕೆ ಗಳನ್ನು ತರ್ಕಬದ್ಧವಾಗಿ ವಿವೇಚನಾಶೀಲತೆಯಿಂದ ಚರ್ಚಿಸಿ, ಚಿಂತಿಸಿ ಭಯ, ಆತಂಕಗಳನ್ನು ನಿವಾರಿಸುವ ಕೆಲಸವನ್ನು ಜ್ಞಾನ ನಮಗೆ ನೀಡುತ್ತದೆ.

ಅಹಂಕಾರ ಕಳೆಯುತ್ತದೆ

ತುಂಬಿದ ಕೊಡ ತುಳುಕುವುದಿಲ್ಲ ಎಂಬ ಗಾದೆಮಾತಿನಂತೆ ಜ್ಞಾನವನ್ನು ಸರಿಯಾದ ಮಾರ್ಗದಲ್ಲಿ ಪಡೆದು ಅದನ್ನು ಅರ್ಥ ಮಾಡಿಕೊಂಡವರು ಮಾತ್ರ ಅಹಂಕಾರ ಕಳೆದುಕೊಂಡು ಸಾಮಾನ್ಯರಂತೆ ವರ್ತಿಸುತ್ತಾರೆ. ಅರೆಬರೆ ತಿಳಿದವರು ತಾವೇ ಪ್ರವೀಣರೆಂದು ಬೀಗಿ ಎಲ್ಲರ ಮುಂದೆ ವೈಭವೀಕರಣದೊಂದಿಗೆ ಪ್ರದರ್ಶನ ಮಾಡಿ ಅಹಂಕಾರದ ತುತ್ತತುದಿಯನ್ನೇರುತ್ತಾರೆ. ಜ್ಞಾನಿಯಾದವನು ತನ್ನ ಪಾಂಡಿತ್ಯವನ್ನು ಇತರರನ್ನು ಮೆಚ್ಚಿಸಲೆಂದೋ ಅಥವಾ ಮತ್ತೊಬ್ಬರ ಮುಂದೆ ಪ್ರದರ್ಶನ ನೀಡಲೆಂದೋ ಬಯಸುವುದಿಲ್ಲ. ಬದಲಾಗಿ ನಾನು ಎಂಬ ಅಹಂಕಾರವನ್ನು ನೀಗಿಸಿಕೊಂಡು ಎಲ್ಲರೊಳಗೊಂದಾಗಿ ಬಾಳುವ ಕೆಲಸವನ್ನು ಮಾಡುತ್ತಾನೆ. ಆದರೆ, ಈ ತರಹದ ಜನರು ಪ್ರಸ್ತುತ ದಿನಗಳಲ್ಲಿ ಸಿಗುವುದು ಅತೀವಿರಳವಾಗಿದೆ.

ತಾವೇ ಹರಿಸರ್ವೋತ್ತಮರೆಂಬ ಕಾಣದ ಕಿರೀಟವನ್ನು ತಮ್ಮ ತಲೆ ಮೇಲೆ ಧರಿಸಿಕೊಂಡು ತಮಗಿಂತ ತಿಳಿದವರು ಮತ್ಯಾರು ಇರುವುದಿಲ್ಲವೆಂಬ ಅಹಂಕಾರ ವ್ಯಕ್ತಪಡಿಸಿ ಬಡಾಯಿ ಕೊಚ್ಚಿಕೊಳ್ಳುವರು. ಆದರೆ ನಿಜವಾದ ಜ್ಞಾನಿಯಾದವರು ಮಾತ್ರ ಎಲ್ಲವನ್ನು ತಿಳಿದೂ ಏನು ತಿಳಿಯದವನಂತೆ ತನ್ನ ತಿಳುವಳಿಕೆಯನ್ನು ಮಾತ್ರ ವಿಸ್ತರಿಸಿಕೊಂಡು ಜೀವನ ನಡೆಸುತ್ತಾರೆ. ಅಹಂಕಾರ ಕಳೆದುಕೊಂಡು ಎಲ್ಲರನ್ನೂ ಸಮಾನವಾಗಿ ಕಾಣುತ್ತಾ, ಪ್ರತಿಭೆಗೆ ಮನ್ನಣೆ ನೀಡುತ್ತಾ ಮುನ್ನಡೆಯುತ್ತಾರೆ. ನಿಜವಾದ ಜ್ಞಾನ ಅಹಂಕಾರವನ್ನು ಕಳೆಯುವ ಕೆಲಸವನ್ನು ಮಾಡಿದರೆ, ತೋರ್ಪಡಿಕೆಯ ಜ್ಞಾನ ಪಾಂಡಿತ್ಯದ ಪ್ರದರ್ಶನ ಮಾಡಿ, ನಾನು ಎಂಬ ಅಹಂಕಾರವನ್ನು ಹೆಚ್ಚಿಸಿಕೊಂಡು ಹಿಂದಕ್ಕೆಳೆಯುತ್ತದೆ.

ಜ್ಞಾನವು ವಿನಮ್ರತೆ ಕಲಿಸುತ್ತದೆ

ನಿಜವಾದ ಜ್ಞಾನವು ವ್ಯಕ್ತಿಗೆ ವಿನಮ್ರತೆ ಕಲಿಸುತ್ತದೆ. ತಗ್ಗಿ–ಬಗ್ಗಿ

> ಕದಿಯಲಾರದ ಸಂಪತ್ತು ಎಂದರೆ ಅದು ಜ್ಞಾನ. 'ನಹಿ ಜ್ಞಾನೇನ ಸದೃಶಂ' ಎಂಬ ಶ್ಲೋಕವು ಕೂಡ ಜ್ಞಾನಕ್ಕೆ ಮಿಗಿಲಾದುದು ಯಾವುದಿಲ್ಲ ಎಂಬುದನ್ನು ತಿಳಿಸುತ್ತದೆ. ಅಂತಹ ಜ್ಞಾನ ಸಂಪತ್ತನ್ನು ಹೆಚ್ಚಿಸಿಕೊಂಡು ನಿಜವಾದ ಅರ್ಥದಲ್ಲಿ ಜ್ಞಾನ ಸಂಪಾದನೆಯಲ್ಲಿ ಸಿರಿತನ ಬೆಳೆಸಿಕೊಳ್ಳೋಣ. ಜ್ಞಾನವು ಮನುಷ್ಯನ ಬದುಕಿಗೆ ದಾರಿದೀಪವಾಗಿರುವ ಅಮೂಲ್ಯ ಸಂಪತ್ತಾಗಿದೆ. ಹಣ, ಆಸ್ತಿ, ಅಧಿಕಾರವು ಕಾಲದೊಂದಿಗೆ ಬದಲಾಗಬಹುದು ಅಥವಾ ಕಳೆದು ಹೋಗಬಹುದು. ಆದರೆ ಜ್ಞಾನವು ಸದಾ ಶ್ರೀಮಂತರನ್ನಾಗಿರಿಸುತ್ತದೆ.

ನಡೆಯುವ, ವಿಚಾರಗಳನ್ನು ತಿಳಿದುಕೊಳ್ಳುವ, ಕಲಿಯುವುದು ಇನ್ನೂ ಇದೆ ಎಂಬ ವಿಶಾಲದೃಷ್ಟಿಕೋನವನ್ನು ಹೊಂದುವ ವಿನಮ್ರತೆಯನ್ನು ಕಲಿಸುತ್ತದೆ. ಜ್ಞಾನ ತಾಳ್ಮೆಯನ್ನು ಎಲ್ಲರೊಂದಿಗೂ ಸಮಭಾವನೆಯಿಂದ ನಡೆದುಕೊಳ್ಳುವುದನ್ನು ಕಲಿಸುತ್ತದೆ. 'ವಿದ್ಯಾ ದದಾತಿ ವಿನಯಂ' ಶ್ಲೋಕವು ವಿದ್ಯೆಯೊಂದಿಗೆ ನಿಜವಾದ ಜ್ಞಾನವನ್ನು ಪಡೆದವನು ಒಳ್ಳೆಯ ಸಂಸ್ಕಾರವನ್ನು ಪಡೆದು ವಿನಮ್ರನಾಗಿರುತ್ತಾನೆಂದು ತಿಳಿಸುತ್ತದೆ.

ಜ್ಞಾನವು ಬೆಳಗುತ್ತದೆ–ಬೆಳೆಯುತ್ತದೆ

ಜ್ಞಾನವು ನಿರಂತರವಾಗಿ ಬೆಳವಣಿಗೆ ಹೊಂದುತ್ತದೆ. ಹೊಸದಾಗಿ ತಿಳಿಯುವ, ಭಿನ್ನವಾಗಿ ತರ್ಕಿಸುವ, ಸ್ವಯಂ ಆಲೋಚನೆ ಮಾಡುವ, ಪ್ರತಿಯೊಬ್ಬರಿಂದಲೂ ಮಾಹಿತಿಗಳನ್ನು ಗ್ರಹಿಸುವ ಮೂಲಕ ನಿರಂತರ ಪ್ರಕ್ರಿಯೆಯಿಂದ ಬೆಳವಣಿಗೆಯನ್ನು ಹೊಂದುತ್ತದೆ. ತಾನು ಪಡೆದ ಜ್ಞಾನವನ್ನು ಇತರರಿಗೆ ಹಂಚುವ ಮೂಲಕ ಮತ್ತಷ್ಟು ಅನುಭವಗಳನ್ನು ಪಡೆಯಲು ಸಹಾಯಕವಾಗುತ್ತದೆ. ಇಷ್ಟು ಕಲಿತದ್ದು ಸಾಕು ಇನ್ನೂ ಕಲಿಯುವಂತದ್ದೇನಿಲ್ಲ ಎಂದುಕೊಂಡರೆ ಅಂದೇ ಜ್ಞಾನವು ಕುಂಠಿತಗೊಳ್ಳುತ್ತದೆ. ಜ್ಞಾನ ಸಂಪಾದನೆ ಮಾಡುವವರು ನಿರಂತರವಾಗಿ ಕಲಿಯುವ ಗುಣವನ್ನು ಬೆಳೆಸಿಕೊಂಡಾಗ ಜ್ಞಾನವು ಬೆಳವಣಿಗೆ ಹೊಂದುತ್ತದೆ.

ಜ್ಞಾನ ಹೆಚ್ಚಿಸಿಕೊಳ್ಳಲು ಇರುವ ಮಾರ್ಗಗಳು

ಕಲಿತಷ್ಟು ಪ್ರಬುದ್ಧರಾಗುತ್ತೇವೆ, ಹೊಸ ಹೊಸ ಸಂಗತಿಗಳನ್ನು ತಿಳಿದುಕೊಳ್ಳುತ್ತೇವೆ. ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಹಲವು ಮಾರ್ಗಗಳಿವೆ.

ಪುಸ್ತಕ ಓದುವುದು

ಸಾಮಾಜಿಕ ಜಾಲತಾಣಗಳಲ್ಲಿಯೇ ಮುಳುಗಿ ಹೋಗಿರುವ ಪ್ರಸ್ತುತ ದಿನಗಳಲ್ಲಿ ಪುಸ್ತಕ ಓದುವ ಅಭಿರುಚಿ ಬೆಳೆಸಿಕೊಳ್ಳಬೇಕಿದೆ. ಪ್ರಪಂಚದ ಎಲ್ಲಾ ಜ್ಞಾನವನ್ನು ಕೈಯಲ್ಲಿರುವ ಫೋನಿನಲ್ಲೇ ತಿಳಿದುಕೊಳ್ಳ ಬಲ್ಲೆನೆಂಬ ಹುಂಬತನ, ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯವಾಗಿದ್ದಷ್ಟು ಜನಪ್ರಿಯತೆ ಗಳಿಸಿಕೊಳ್ಳಬಹುದೆಂಬ ಭ್ರಮೆಗಳಿಗಿಂತ ಪುಸ್ತಕಗಳನ್ನು ಓದಿ ಗಳಿಸುವ ಜ್ಞಾನ ಶಾಶ್ವತವಾದುದು ಎಂಬ ವಾಸ್ತವಾಂಶವನ್ನು ತಿಳಿದುಕೊಳ್ಳಬೇಕಿದೆ.

ನಿರ್ದಿಷ್ಟವಾಗಿ ಯಾವ ಕ್ಷೇತ್ರದಲ್ಲಿ ಸಾಗಬೇಕೆಂಬ ಗುರಿಯುಳ್ಳವರು ಹಿರಿಯರು, ಸಂಶೋಧಕರು, ವಿದ್ವಾಂಸರು ಬರೆದಿರುವ ಕೃತಿಗಳನ್ನು ಓದಿ ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ಜ್ಞಾನವನ್ನು ಸಂಪಾದಿಸಿಕೊಳ್ಳಬಹುದು.

ಪುಸ್ತಕ ಓದುವ ಅಭಿರುಚಿ ಉಳ್ಳವರಿಗೆ ಸಾಮಾನ್ಯವಾಗಿ ಒಂಟಿತನ ಕಾಡುವುದಿಲ್ಲ. ಅಗತ್ಯವಾದ ಎಲ್ಲ ವಿಷಯಗಳನ್ನು ಗ್ರಹಿಸುವ, ಹೊಸತನ್ನು ಕಲಿಯುವ, ತಿಳಿಯದಿರುವ ವಿಚಾರಗಳ ಬಗ್ಗೆ ಜ್ಞಾನವನ್ನು ಪಡೆಯುವ ಅವಕಾಶ ಇರುತ್ತದೆ. ಉದಾಹರಣೆಗೆ: ಕನ್ನಡದ ಸಾಹಿತಿಗಳಾದ ಕಾರಂತರು, ಕುವೆಂಪು, ಎಸ್.ಎಲ್.ಭೈರಪ್ಪ, ಅ.ನ.ಕೃ, ಬೇಂದ್ರೆ ಹೀಗೆ ಅನೇಕರ ಸಾಹಿತ್ಯವನ್ನು ಓದುವುದರಿಂದ ಅಪಾರ ವಿಷಯ ಸಂಗ್ರಹವಾಗಿ ಜ್ಞಾನ ಹೆಚ್ಚುತ್ತದೆ. ದುರಂತ ಎಂದರೆ ಇಂದು ಪಠ್ಯ ಪುಸ್ತಕವನ್ನೇ ಓದದೇ ಕಾಲ ಕಳೆಯುತ್ತಿರುವ ಯುವಪೀಳಿಗೆಗೆ ಸಾಹಿತ್ಯದ ಪುಸ್ತಕ ಓದುವ ಮಹತ್ವವನ್ನು ಅನಿವಾರ್ಯವಾಗಿ ತಿಳಿಸಿಕೊಡಬೇಕಾಗಿದೆ.

ನನಗೆ ಸಮಯ ಸಿಕ್ಕಾಗ ಮೈಸೂರಿನ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಓಡಾಡುವ ಸಂದರ್ಭದಲ್ಲಿ ತ.ಸು.ಶಾಮರಾಯರ 'ಮೂರು ತಲೆಮಾರು' ಕೃತಿಯಲ್ಲಿ ಎ.ಎನ್.ಮೂರ್ತಿರಾಯರಿಗೆ ಹಿತವಚನ ಹೇಳಿ ಸಂತೈಸಿದ ಟಿ.ಎಸ್.ವೆಂಕಣ್ಣಯ್ಯ ಅವರ ಪ್ರಸಂಗವಾಗಲೀ, ಕುವೆಂಪು ಅವರು ಕುಕ್ಕರಹಳ್ಳಿ ಕೆರೆಯನ್ನು ವರ್ಣಿಸಿದ ಪ್ರಸಂಗ, ಭೈರಪ್ಪ ಅವರ ಅಭಿಮಾನಿಗಳು ಅವರನ್ನು ಭೇಟಿ ಮಾಡಿ ಮಾತನಾಡಿಸಿದ ಸಂದರ್ಭದ ವರ್ಣನೆಗಳೆಲ್ಲಾ ನೆನಪಾಗುತ್ತದೆ. ಅಕ್ಷರ ಬರೆಯುವಾಗ, ಭವಿಷ್ಯದ ಅಭದ್ರತೆ ಕಾಡಿದಾಗ, ಆತ್ಮವಿಶ್ವಾಸ ಕಡಿಮೆ ಎನಿಸಿದಾಗ ಧೈರ್ಯ ನೀಡುವ ಡಿವಿಜಿ ಅವರ 'ಮಂಕುತಿಮ್ಮನ ಕಗ್ಗ' ನೆನಪಿಗೆ ಬರುತ್ತದೆ. ಜಿ.ಎಸ್.ಶಿವರುದ್ರಪ್ಪ ಅವರ 'ಎದೆ ತುಂಬಿ ಹಾಡಿದೆನು' ಹಾಡು ನೆನಪಾದಾಗಲೆಲ್ಲ ಚಾಮುಂಡಿ ಬೆಟ್ಟದಲ್ಲಿ ಗುರುಗಳಾದ ತ.ಸು.ಶಾಮರಾಯರ ಎದುರು ಕವನ ವಾಚನ ಮಾಡಿದ ಜಿ.ಎಸ್.ಶಿವರುದ್ರಪ್ಪ ಅವರ ನೆನಪಾಗುತ್ತದೆ. ಆನೆಯನ್ನು ನೋಡಿದಾಗಲೆಲ್ಲಾ ತೇಜಸ್ವಿ ಅವರ 'ಕೃಷ್ಣೇಗೌಡನ ಆನೆ' ನೆನಪಾಗುತ್ತದೆ. ಭಗ್ನಪ್ರೇಮಿಗಳನ್ನು ನೋಡಿದಾಗ ರವಿಬೆಳಗೆರೆ ಅವರ 'ಹೇಳಿ ಹೋಗು ಕಾರಣವ' ಕಾದಂಬರಿ, ಕಾಲೇಜು ವಿದ್ಯಾರ್ಥಿಗಳನ್ನು ನೋಡಿದಾಗ ಎಸ್.ಎಲ್.ಭೈರಪ್ಪ ಅವರ 'ದೂರ ಸರಿದವರು', ಬಸ್ಸಿನಲ್ಲಿ ಸಂಚರಿಸುವಾಗ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ 'ಕನ್ನಡ ಮೌಲ್ವಿ' ಪ್ರಬಂಧ, ಸಂಬಂಧಗಳಿಗೆ ಕೊಡಬೇಕಾದ ಮಹತ್ವವನ್ನು ಕಾರಂತರ 'ಬೆಟ್ಟದ ಜೀವ', 'ಮರಳಿ ಮಣ್ಣಿಗೆ' ಕಾದಂಬರಿಗಳು, ಚಾಮರಾಜಪುರಂ ರೈಲ್ವೆ ನಿಲ್ದಾಣದತ್ತ ಸಂಚರಿಸುವಾಗ ತ್ರಿವೇಣಿ ಅವರ 'ಹೂವು ಹಣ್ಣು' ಕಾದಂಬರಿಯ ಕಥೆ ಹುಟ್ಟಿದ ಸನ್ನಿವೇಶ, ಕೋರ್ಟಿನ ವ್ಯಾಜ್ಯಗಳನ್ನು ಗಮನಿಸಿದಾಗ ಗೊರೂರು ಅವರ 'ಭೂತಯ್ಯನ ಮಗ ಅಯ್ಯು' ಕಥೆ ಹೀಗೆ ಒಂದೊಂದು ಕೃತಿಗಳು ಹಿರಿಯ ಸಾಹಿತಿಗಳ ಜೀವನ ಚಿತ್ರಣ, ಜೀವಾನುಭವ, ಅಂದಿನ ಸ್ಥಿತಿಗತಿ, ಮೊದಲಾದ ಹಲವು ಸಂಗತಿಗಳು ನೆನಪಿನ ಬುತ್ತಿಯಲ್ಲಿ ಅಚ್ಚಳಿಯದ ನೆನಪುಗಳಾಗಿ ಉಳಿದಿರುವುದಕ್ಕೆ ಕಾರಣ ಪುಸ್ತಕ ಓದುವ ಅಭಿರುಚಿ.

ಶಬ್ದ ಸಂಪತ್ತು ಹೆಚ್ಚಾಗಬೇಕಾದರೆ, ಸಭೆ, ಸಮಾರಂಭಗಳಲ್ಲಿ ನಿಂತು ಮಾತನಾಡಬೇಕಾದರೆ ವಿಷಯ ಸಂಗ್ರಹಣೆ ಅಗತ್ಯವಾಗಿ ಬೇಕಾಗಿರುತ್ತದೆ. ಕೇವಲ ಮೊಬೈಲ್, ಕೃತಕ ಬುದ್ಧಿಮತ್ತೆ ನೀಡುವ ಅನೇಕ ವಿಷಯಗಳಿಗಿಂತ ಪುಸ್ತಕಗಳು ಹೆಚ್ಚಿನ ಮಾಹಿತಿ ನೀಡುತ್ತವೆ, ಆತ್ಮವಿಶ್ವಾಸ ಹೆಚ್ಚಿಸುತ್ತವೆ, ಜ್ಞಾನವನ್ನು ಹೆಚ್ಚಿಸಿಕೊಳ್ಳಲು ನೆರವಾಗುತ್ತವೆ. ಹಾಗಾಗಿ ಜ್ಞಾನವನ್ನು ವೃದ್ಧಿಸಿಕೊಳ್ಳಲು ಪುಸ್ತಕಗಳ ಓದು ನಿರಂತರವಾಗಿರಬೇಕಾಗುತ್ತದೆ. ಪುಸ್ತಕ ಚಿಕ್ಕದಾಗಿರಲಿ, ದೊಡ್ಡದಾಗಿರಲಿ ಓದುವ ಮನಸ್ಸು ಮುಖ್ಯ. ಸಮಯವಿಲ್ಲವೆಂಬ ನೆಪವನ್ನು ಬಿಟ್ಟು ಓದುವ ಮುಖೇನ ಅನುಭವದೊಂದಿಗೆ ಜ್ಞಾನವನ್ನು ವೃದ್ಧಿಸಿಕೊಳ್ಳಬಹುದು.

ಅನುಭವಿಗಳ ಒಡನಾಟ, ಸಂವಾದಗಳಿಂದ

'ಹಳೇಬೇರು ಹೊಸ ಚಿಗುರು ಕೂಡಿರಲು ಮರ ಸೊಬಗು' ಎಂಬ ಡಿವಿಜಿ ಅವರ ಮಾತಿನಂತೆ ಅನುಭವಿಗಳ ಒಡನಾಟದಿಂದ, ಹಿರಿಯರೊಂದಿಗಿನ ಚರ್ಚೆ, ಸಂವಾದಗಳಿಂದ ಜ್ಞಾನ ಹೆಚ್ಚಿಸಿಕೊಳ್ಳಬಹುದು.

ಮರಕ್ಕಿಂತ ಮರ ದೊಡ್ಡದು ಎಂಬ ಮಾತಿನಂತೆ ಪ್ರತಿಯೊಬ್ಬರಲ್ಲೂ ಅವರದೇ ಆದ ಪ್ರತಿಭೆಗಳಿರುತ್ತದೆ. ಪರಸ್ಪರ ಸಂವಹನ ನಡೆಸುವುದರಿಂದ ಅವರ ಬದುಕಿನ ಅನುಭವಗಳನ್ನು ಹಂಚಿಕೊಳ್ಳುವುದರಿಂದ, ಸಮಸ್ಯೆಗಳಿಗೆ ಪರಿಹಾರಗಳನ್ನು ಬಗೆಹರಿಸುವ ಕ್ರಮಗಳನ್ನು ತಿಳಿದುಕೊಳ್ಳುವುದರಿಂದ ಹೀಗೆ ನಾನಾ ರೀತಿಯಲ್ಲಿ ಜ್ಞಾನವು ಹೆಚ್ಚಾಗುತ್ತದೆ.

ಆದರೆ ಪ್ರಸ್ತುತ ಜಂಗಮವಾಣಿಯಲ್ಲಿಯೇ ಮುಳುಗಿ ಮೈಮರೆತಿರುವ ಜನಾಂಗಕ್ಕೆ ಹಿರಿಯರ, ಪ್ರೇರಣೆ ನೀಡುವ ಮಾತುಗಳನ್ನು ಕೇಳುವ ತಾಳ್ಮೆಯಾಗಲೀ, ಹೊಸ ಸಂಗತಿಗಳನ್ನು ಕೇಳಿಸಿಕೊಳ್ಳುವ ವ್ಯವಧಾನವಾಗಲೀ ಇಲ್ಲ. ಕೇಳಿಸಿಕೊಳ್ಳುವ ತಾಳ್ಮೆ ಇಲ್ಲದಿರುವಾಗ ನಮಗೆ ತಿಳಿದಿರುವುದೇ ಸಾಕೆಂದು ಭಾವಿಸಿಕೊಂಡಾಗ ಜ್ಞಾನ ಅಷ್ಟಕ್ಕೇ ಸೀಮಿತವಾಗಿ ಉಳಿಯುತ್ತದೆ. ಜ್ಞಾನವನ್ನು ವಿಸ್ತಾರವಾಗಿ ಬೆಳೆಸಿಕೊಳ್ಳಬೇಕಾದರೆ ಅನುಭವಿಗಳೊಂದಿಗಿನ ಒಡನಾಟ, ಚರ್ಚೆ, ಸಂವಾದಗಳು ಅಗತ್ಯವಾಗಿ ಬೇಕಾಗಿರುತ್ತದೆ.

ಕುತೂಹಲದಿಂದ ಜ್ಞಾನ ವೃದ್ಧಿ

ಕುತೂಹಲವು ಹೊಸ ಸಂಶೋಧನೆಯ ದಾರಿ ಎಂಬ ಮಾತಿನಂತೆ ಹೊಸತನ್ನು ಕಲಿಯುವ, ವಿಭಿನ್ನವಾಗಿ ಆಲೋಚಿಸುವ, ನಮಗೆ ತಿಳಿಯದ ವಿಚಾರಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸುವುದನ್ನು ರೂಢಿಸಿಕೊಂಡಾಗ ಜ್ಞಾನ ಹೆಚ್ಚಾಗುತ್ತದೆ.

ಕುತೂಹಲ ಮನುಷ್ಯನ ಸಹಜ ಗುಣ. ಆದರೆ ಅದನ್ನು ಅನಗತ್ಯವಾದ ಸಂಗತಿಗಳತ್ತ ಹರಿಸದೇ, ಹೊಸ ರೀತಿಯಲ್ಲಿ, ವೈಚಾರಿಕವಾಗಿ, ವೈಜ್ಞಾನಿಕವಾಗಿ ಆಲೋಚಿಸುವ, ತರ್ಕಿಸುವಂತಹವುದರ ಕಡೆಗೆ ಗಮನ ಹರಿಸಿದರೆ ಹೊಸ ಹೊಸ ವಿಚಾರಗಳು ತಿಳಿಯುತ್ತವೆ, ಜ್ಞಾನ ಹೆಚ್ಚಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ದಂತಕಥೆಯಂತೆ ಪ್ರಚಲಿತವಾಗಿರುವ ನ್ಯೂಟನ್‌ನ ಸೇಬಿನ ಮರದ ಕಥೆ ಭೂಮಿಗಿರುವ ಗುರುತ್ವಾಕರ್ಷಣಾ ಶಕ್ತಿಯ ನಿಯಮವನ್ನು ಕಂಡು ಹಿಡಿಯಲು ಕಾರಣವಾಯಿತು. ನೋಡಿ ಒಂದು ಸಣ್ಣ ಕುತೂಹಲ ಹೊಸದೊಂದು ಅಂಶದ ಹುಟ್ಟಿಗೆ ಕಾರಣವಾಯಿತು, ಜ್ಞಾನ ವೃದ್ಧಿಯಾಯಿತು.

ಕಲಿಕೆಗೆ ಮನಸ್ಸು ಮುಕ್ತವಾದಾಗ

ಕಲಿಕೆಗೆ ವಯಸ್ಸಿನ ಮಿತಿಯಿಲ್ಲ. ಪುಟ್ಟ ಮಗುವಿನಿಂದ ಹಿಡಿದು ಹಿರಿಯರವರೆಗೆ ಎಲ್ಲರಿಂದಲೂ ಕಲಿಯುವಂತದ್ದು ಇರುತ್ತದೆ. ಕಲಿಕೆಗೆ ಮುಕ್ತವಾಗಿ ಮನಸ್ಸನ್ನು ತೆರೆದುಕೊಳ್ಳುವುದರಿಂದ ಜ್ಞಾನ ಹೆಚ್ಚಾಗುತ್ತದೆ. ಯಾರಿಂದಾದರೂ, ಎಲ್ಲಿಂದಾದರೂ ವಿಷಯವನ್ನು ತಿಳಿದುಕೊಳ್ಳುವೆ ಎಂಬ ಮನಸ್ಥಿತಿ ಇದ್ದಾಗ ಮಾತ್ರ ಏನು ಬೇಕಾದರೂ ಕಲಿಯಲು ಸಾಧ್ಯ. ಅವರ ಹತ್ತಿರ ಕಲಿಯುವುದೇನಿದೆ, ಎಲ್ಲವೂ ನನಗೆ ತಿಳಿದಿದೆ ಎಂಬ ಧೋರಣೆಯಾಗಲೀ, ನಾನು ಹಿರಿಯ ಕಿರಿಯವರಿಂದ ತಿಳಿಯಬೇಕಾದುದೇನಿಲ್ಲ ಎಂಬ ಮನೋಭಾವವಾಗಲೀ ಕಲಿಕೆಯನ್ನು ಮೊಟಕುಗೊಳಿಸುತ್ತದೆ. ಚಿಕ್ಕ ಮಗುವಿನಿಂದಾಗಲೀ, ವಯಸ್ಸಾದವರಿಂದಾಗಲೀ ಕಲಿಯುವ ವಿಚಾರಗಳು ಬೆಟ್ಟದಷ್ಟಿರುತ್ತದೆ. ಮುಕ್ತವಾಗಿ ಮನಸ್ಸು ತೆರೆದಿಟ್ಟುಗೊಂಡಾಗ ಉತ್ತಮ ಬಗೆಯಲ್ಲಿ ಕಲಿತು ಜ್ಞಾನವನ್ನು ಹೆಚ್ಚಿಸಿಕೊಳ್ಳಬಹುದು.

ಕದಿಯಲಾರದ ಸಂಪತ್ತು ಎಂದರೆ ಅದು ಜ್ಞಾನ. 'ನಹಿ ಜ್ಞಾನೇನ ಸದೃಶಂ' ಶ್ಲೋಕವು ಕೂಡ ಜ್ಞಾನಕ್ಕೆ ಮಿಗಿಲಾದುದು ಯಾವುದಿಲ್ಲ ಎಂಬುದನ್ನು ಸಾರುತ್ತದೆ. ಅಂತಹ ಜ್ಞಾನ ಸಂಪತ್ತನ್ನು ಹೆಚ್ಚಿಸಿಕೊಂಡು ನಿಜವಾದ ಅರ್ಥದಲ್ಲಿ ಜ್ಞಾನ ಸಂಪಾದನೆಯಲ್ಲಿ ಸಿರಿತನವನ್ನು ಬೆಳೆಸಿಕೊಳ್ಳೋಣ. ಜ್ಞಾನವು ಮನುಷ್ಯನ ಬದುಕಿಗೆ ದಾರಿದೀಪವಾಗಿರುವ ಅಮೂಲ್ಯ ಸಂಪತ್ತಾಗಿದೆ. ಹಣ, ಆಸ್ತಿ, ಅಧಿಕಾರವು ಕಾಲದೊಂದಿಗೆ ಬದಲಾಗಬಹುದು, ಕಳೆದುಹೋಗಬಹುದು. ಆದರೆ ಜ್ಞಾನವು ವ್ಯಕ್ತಿಯನ್ನು ಸದಾ ಶ್ರೀಮಂತನನ್ನಾಗಿರಿಸುತ್ತದೆ. ಅದು ಬದುಕಿಗೆ ಬೆಳಕನ್ನು ನೀಡುವುದಲ್ಲದೆ, ಆತ್ಮವಿಶ್ವಾಸ, ವಿವೇಕ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುತ್ತದೆ. ಜ್ಞಾನವಿರುವ ವ್ಯಕ್ತಿಯು ತನಗೆ ಮಾತ್ರವಲ್ಲದೆ ಸಮಾಜಕ್ಕೂ ಉಪಯುಕ್ತನಾಗುತ್ತಾನೆ; ಅಜ್ಞಾನದ ಕತ್ತಲೆಯನ್ನು ದೂರ ಮಾಡಿ ಪ್ರಗತಿಯ ಪಥವನ್ನು ನಿರ್ಮಿಸುತ್ತಾನೆ.

ತಿಳಿದುಕೊಂಡಷ್ಟು ಬೆಳೆಯುತ್ತೇವೆ,
ಬೆಳೆದಷ್ಟು ಜ್ಞಾನ ಹೆಚ್ಚಿಸಿಕೊಳ್ಳುತ್ತೇವೆ.

ಬಿಡದಿ ಟೌನ್‌ಶಿಪ್‌ಗೆ ವಿರೋಧ ಖಂಡಿಸಿ ಮೈಸೂರಲ್ಲಿ ಕಾಂಗ್ರೆಸ್ ಪ್ರತಿಭಟನೆ

ಮೈಸೂರು, ಜೂ.21(ಜಿಎ)–ಬಿಡದಿ ಬಳಿ ಹೆಚ್.ಡಿ.ಕುಮಾರಸ್ವಾಮಿ ಮಾಲೀಕತ್ವದ 46 ಎಕರೆ ಜಮೀನು ಉಳಿಸಿಕೊಳ್ಳಲು ಬಿಡದಿ ಟೌನ್‌ಶಿಪ್ ವಿರುದ್ಧ ರೈತರನ್ನು ಎತ್ತಿಕಟ್ಟುತ್ತಿದ್ದಾರೆ ಎಂದು ಆರೋಪಿಸಿ ಮೈಸೂರು ನಗರ, ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಬಿಡದಿ ಬಳಿ 46 ಎಕರೆ ಜಮೀನು ಇದೆ ಎಂದು ಅವರೇ ಸ್ವಯಂ ಘೋಷಿಸಿಕೊಂಡಿದ್ದಾರೆ. ಈ ಮೂಲಕ ಈ ಜಮೀನಿನ ಉಳಿವಿಗಾಗಿ ಬೇರೆ ಕಡೆಯಿಂದ ರೈತರನ್ನು ಕರೆತಂದು ಬಿಡದಿ ಟೌನ್‌ಶಿಪ್ ಯೋಜನೆಗೆ ವಿರೋಧ ವ್ಯಕ್ತಪಡಿಸುತ್ತಿರುವುದು ಈ ಭಾಗದ ಅಭಿವೃದ್ಧಿಗೆ ಮಾರಕವಾಗಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.



ಹೆಚ್.ಡಿ.ಕುಮಾರಸ್ವಾಮಿ ಮಾಲೀಕತ್ವದ 46 ಎಕರೆ ಜಮೀನು ಉಳಿಸಿಕೊಳ್ಳಲು ಬಿಡದಿ ಟೌನ್‌ಶಿಪ್ ವಿರುದ್ಧ ರೈತರನ್ನು ಎತ್ತಿಕಟ್ಟುತ್ತಿದ್ದಾರೆ ಎಂದು ಖಂಡಿಸಿ ಮೈಸೂರು ನಗರ, ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ಪ್ರತಿಭಟನೆ ನಡೆಸಲಾಯಿತು.

2006ರ ಯೋಜನೆಯಲ್ಲಿದ್ದ ನ್ಯೂನ್ಯತೆಗಳನ್ನು ಸರಿಪಡಿಸಿ ರೈತರಿಗೆ ಅನುಕೂಲ ಮಾಡಿಕೊಡಲಾಗುತ್ತಿದೆ. ಹಿಂದಿನ ಯೋಜನೆ ಪಿಪಿಪಿ ಮಾದರಿಯಲ್ಲಿತ್ತು. ಖಾಸಗಿ ಕಂಪನಿ ಬಿಡ್‌ನಿಂದ ಹಿಂದೆ ಸರಿದಿತ್ತು. ಭೂ ಮಾಲೀಕರಿಗೆ ಕಡಿಮೆ ಭೂಮಿ ಸಿಗುತ್ತಿತ್ತು. ಹಳ್ಳಿಗಳನ್ನು ಖಾಲಿ ಮಾಡಿಸಿ, ಪುನರ್‌ವಸತಿ ಯೋಜನೆ ಇತ್ತು. ಭೂಮಾಲೀಕರಿಗೆ ವಸತಿ ನಿವೇಶನ ಮಾತ್ರ ನೀಡಲಾಗುತ್ತಿತ್ತು. ಆದರೆ ಈಗಿನ ಯೋಜನೆಯಲ್ಲಿ ಸರ್ಕಾರವೇ ಸಂಪೂರ್ಣ ಹೂಡಿಕೆ ಮಾಡಲಿದೆ. ಭೂಮಾಲೀಕರಿಗೆ ಹೆಚ್ಚಿನ ಭೂಮಿ ಸಿಗಲಿದೆ. ಯಾವುದೇ ಹಳ್ಳಿಯನ್ನು ಖಾಲಿಮಾಡಿಸುವುದಿಲ್ಲ. ಭೂ ಮಾಲೀಕರಿಗೆ ವಸತಿ ಜೊತೆಗೆ ವಾಣಿಜ್ಯ ನಿವೇಶನಗಳೂ ಸಿಗಲಿವೆ. ಆದರೂ ಸುಮ್ಮನೆ ವಿರೋಧ ಮಾಡುತ್ತಿದ್ದಾರೆ ಎಂದು ದೂರಿದರು.

ಕುಮಾರಸ್ವಾಮಿ ಅವರು ಬಿಡದಿ ಟೌನ್‌ಶಿಪ್ ವಿರುದ್ಧವಾಗಿ ನಡೆಸುತ್ತಿರುವ ಹೋರಾಟದ ಮಾದರಿಯಲ್ಲಿ ಮೇಕೆದಾಟು, ಮಹಾದಾಯಿ, ಕಳಸಾ–ಬಂಡೂರಿ ಯೋಜನೆಗಾಗಿ ಕೇಂದ್ರ ಸರ್ಕಾರದ ಮೇಲೆ ಏಕೆ ಒತ್ತಡ ಹೇರುತ್ತಿಲ್ಲ. ಡಿ.ಕೆ.ಶಿವಕುಮಾರ್ ಜನಪರ ಆಡಳಿತಕ್ಕೆ ಮನಸೋತು ಜೆಡಿಎಸ್ ಕಾರ್ಯಕರ್ತರು, ನಾಯಕರು ಕಾಂಗ್ರೆಸ್ ಸೇರುತ್ತಾರೆ ಎಂದು ಆತಂಕಗೊಂಡು ಬಿಡದಿ ಟೌನ್‌ಶಿಪ್ ಯೋಜನೆಯನ್ನು ವಿರೋಧಿಸುತ್ತಿದ್ದಾರೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಕಾಂಗ್ರೆಸ್ ವಕ್ತಾರ ಎಸ್.ರಾಜೇಶ್, ಎಸ್.ಎ.ರಹೀಮ್, ಸುನಿಲ್ ನಾರಾಯಣ್, ಸಯ್ಯದ್ ಫಾರೂಖ್, ಕುಕ್ಕರಹಳ್ಳಿ ನಂಜುಂಡಸ್ವಾಮಿ, ಬಿ.ಜಿ. ಕೇಶವ, ಮೈಸೂರು ಬಸವಣ್ಣ, ರಂಗಸ್ವಾಮಿ, ಕನಕಮೂರ್ತಿ ಹಡಜನ, ರವಿನಾಯಕ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ವಿವಿ ಕುಲಪತಿ, ಕುಲಸಚಿವರು, ಸಿಬ್ಬಂದಿಯಿಂದ ಯೋಗ ಪ್ರದರ್ಶನ



ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ಮೈಸೂರು ವಿವಿಯ ಮಹಾರಾಜ ಕ್ರಿಕೆಟ್ ಮೈದಾನದಲ್ಲಿ ಏರ್ಪಡಿಸಿದ್ದ ಯೋಗ ಅಭ್ಯಾಸದಲ್ಲಿ ವಿಶ್ವವಿದ್ಯಾನಿಲಯದ ಕುಲಪತಿ, ಕುಲಸಚಿವರು ಹಾಗೂ ಸಿಬ್ಬಂದಿ ಯೋಗ ಅಭ್ಯಾಸ ನಡೆಸಿದರು.

ಮೈಸೂರು, ಜೂ.21(ಜಿಎ)– ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ, ಕುಲಸಚಿವರು, ಸಿಬ್ಬಂದಿ ಬೆಳ್ಳಂಬೆಳಗ್ಗೆಯ ಎಳೆ ಬಿಸಿಲಿನಲ್ಲಿ ಯೋಗ ಅಭ್ಯಾಸ ಮಾಡಿ ಮಾನಸಿಕ, ದೈಹಿಕ ಒತ್ತಡ ನಿವಾರಣೆಗೆ ಯೋಗಾಯೋಗ ಎಂದು ತೋರಿಸಿಕೊಟ್ಟರು.

ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ಮೈಸೂರು ವಿವಿಯ ಮಹಾರಾಜ ಕ್ರಿಕೆಟ್ ಮೈದಾನದಲ್ಲಿ ಏರ್ಪಡಿಸಿದ್ದ ಯೋಗ ಪ್ರದರ್ಶನದಲ್ಲಿ ಬಿಳಿ ಟೀಶರ್ಟ್ ಧರಿಸಿ ಶ್ರದ್ದೆಯಿಂದ ಯೋಗ ಅಭ್ಯಾಸದಲ್ಲಿ ತೊಡಗಿಕೊಂಡ ಕುಲಪತಿ, ಕುಲಸಚಿವರು ಹಾಗೂ ಸಿಬ್ಬಂದಿಗಳು ವಿವಿಧ ಆಸನಗಳನ್ನು ಪ್ರದರ್ಶಿಸಿ ಕೆಲಕಾಲ ದೇಹ ದಂಡಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿ, ಯೋಗ ಅಭ್ಯಾಸದಲ್ಲಿ ಪಾಲ್ಗೊಂಡ ವಾಗ್ಮಿ ಕೃಷ್ಣೇಗೌಡ ಮಾತನಾಡಿ, ಯೋಗ ಭಾರತದ ಸಾಫ್ಟ್ ಪವರ್ ಆಗಿ ವಿಶ್ವವನ್ನು ಪ್ರಭಾವಿಸುತ್ತಿದೆ ಎಂದು ಅಭಿಪ್ರಾಯಪಟ್ಟರು.

ನಾವೆಲ್ಲರೂ ಭಾರತ ದೇಶ ಅಭಿವೃದ್ಧಿ ಆಗಬೇಕು ಎಂದು ಹೇಳುತ್ತೇವೆ. ಎಲ್ಲರೂ ಬಾಯಲ್ಲಿ ಅಭಿವೃದ್ಧಿ, ಅಭಿವೃದ್ಧಿ ಅನ್ನೋ ಮಾತು ಕೇಳಿಸುತ್ತೆ. ಆದರೆ ನಾವು ಕಟ್ಟಬೇಕಾದದ್ದು ಅಭಿವೃದ್ಧಿ ಹೊಂದಿದ ದೇಶವನ್ನಲ್ಲ, ಅದು ತನ್ನಷ್ಟಕ್ಕೆ ತಾನೇ ಆಗೋ ಕಾರ್ಯ ಅದಕ್ಕೆ ಬದಲಾಗಿ ದೇಶ ಪ್ರಬುದ್ಧವಾಗಬೇಕಾದದ್ದು ಅನಿವಾರ್ಯ. ಯಾವ ಸಮಯದಲ್ಲಿ ನಾವು ಯಾವುದಕ್ಕೆ ಹೇಗೆ ಪ್ರತಿಕ್ರಿಯಿಸಬೇಕು ಅಂತ ಗೊತ್ತಿಲ್ಲದೆ ಇದ್ದರೆ ನಾವು ಅಪ್ರಬುದ್ಧರು ಎಂದರು.

ಯೋಗ ಮನುಷ್ಯನ ಮನಸ್ಸನ್ನು ಹೇಗೆ ಇಟ್ಟುಕೊಳ್ಳಬೇಕು, ಹೇಗೆ ನಿಯಂತ್ರಿಸಿಕೊಳ್ಳಬೇಕು ಅನ್ನೋದನ್ನ ನಮಗೆ ಹೇಳಿಕೊಡುತ್ತೆ ನಾವೆಲ್ಲರೂ ಇದನ್ನು ವ್ಯಾಯಾಮ ಅಷ್ಟೇ ಅಂತ ಭಾವಿಸಿದ್ದೇವೆ. ಅದಕ್ಕೂ ಮೀರಿದ್ದು. ಯೋಗ ಮನುಷ್ಯನ ದೇಹ, ಮನಸ್ಸು ಮತ್ತು ಆಧ್ಯಾತ್ಮಿಕತೆಯನ್ನು ಒಂದು ಸೂತ್ರಕ್ಕೆ ಒಳಪಡಿಸುವಂತಹ ಅತ್ಯದ್ಭುತವಾದಂತಹ ಭಾರತೀಯವಾದಂತಹ ಒಂದು ಅದ್ಭುತ ಪರಿಕಲ್ಪನೆಯಾಗಿದೆ ಎಂದರು.

ಒಂದು ದೇಶ ಇನ್ನೊಂದು ದೇಶವನ್ನು ಪ್ರಭಾವಿಸಬೇಕಾದರೆ ಅಥವಾ ಒಂದು ದೇಶ ಇನ್ನೊಂದು ದೇಶವನ್ನು ಆಕ್ರಮಿಸಬೇಕಾದರೆ ಈ ಕಾಲದಲ್ಲಿ ಯಾವುದೋ ಹಾರ್ಡ್ ಪವರ್ ಬೇಕಾಗಿಲ್ಲ. ಇಂದು

ನಾವು ವಿದೇಶಿ ಪ್ರಭಾವಕ್ಕೆ ಒಳಗಾಗುತ್ತಿದ್ದೇವೆ, ವಿದೇಶಿಗರು ಭಾರತದ ಯೋಗಕ್ಕೊಳಗಾಗಿದ್ದಾರೆ

ಅಮೆರಿಕಾ ಪ್ರಪಂಚವನ್ನೆಲ್ಲ ಆಕ್ರಮಿಸಿಕೊಳ್ಳುತ್ತಿರುವುದು ಹಾರ್ಡ್ ಪವರ್‌ನಿಂದ ಅಲ್ಲ, ಸಾಫ್ಟ್ ಪವರ್‌ನಿಂದ ಅಲ್ಲಿನ ಆಹಾರ ಕ್ರಮ, ಉಡುಪು, ಸಂಗೀತವನ್ನು ಕೇಳುತ್ತೇವೆ. ಎಲ್ಲವನ್ನು ಅವರು ಮಾಡಿದ ಹಾಗೆ ಮಾಡೋದಕ್ಕೆ ಪ್ರಯತ್ನ ಪಡುತ್ತಿದ್ದೇವೆ. ನಮಗೆ ಗೊತ್ತಿಲ್ಲದ ಹಾಗೆ ಅಮೆರಿಕದ ಪ್ರಭಾವಕ್ಕೆ ಅಥವಾ ಪಾಶ್ಚಿಮಾತ್ಯ ಜಗತ್ತಿನ ಪ್ರಭಾವಕ್ಕೆ ನಾವು ಬಿದ್ದಿದ್ದೇವೆ. ಆದರೆ ಇಡೀ ವಿಶ್ವವನ್ನು ಪ್ರಭಾವಿಸುವಂತಹ ಭಾರತದ ಸಾಫ್ಟ್ ಪವರ್ ಯೋಗ ಎಂದರು.

ಏನೇ ಮಾತಾಡಬೇಕಾದರೂ ಪಾಶ್ಚಿಮಾತ್ಯ ಜಗತ್ತಿನ ಕಡೆ ನೋಡುತ್ತೇವೆ. ಅದರಲ್ಲೂ ವಿಜ್ಞಾನದ ವಿಷಯದಲ್ಲಿ ಸಾಮಾನ್ಯವಾಗಿ ಪಾಶ್ಚಿಮಾತ್ಯ ಜಗತ್ತಿನ ಕಡೆ ನೋಡುತ್ತೇವೆ. ಅವರು ಹೇಳಿದ್ದು ಅಂತಿಮ ಎಂದು ಭಾವಿಸುತ್ತೇವೆ. ಆದರೆ ಯೋಗದ ವಿಷಯದಲ್ಲಿ ಮಾತ್ರ ಜಗತ್ತಿನ ನೂರಾರು ದೇಶಗಳು ಭಾರತ ಏನು ಹೇಳುತ್ತೆ ಅಂತ ಯೋಚನೆ ಮಾಡುತ್ತಿದೆ. ಆದರೆ, ನಾವು ಪಾಶ್ಚಿಮಾತ್ಯ ಜಗತ್ತಿಗೆ ಅತ್ಯಂತ ನಿಷ್ಠವಾಗಿ, ಅತ್ಯಂತ ವಿಧೇಯವಾಗಿ ಬದುಕುತ್ತಾ ಇರುವಂತಹ ಈ ಕಾಲದಲ್ಲಿಯೂ ಇಡೀ ಪ್ರಪಂಚವನ್ನು ಪ್ರಭಾವಿಸುವಂತಹ, ಇಡೀ ಪ್ರಪಂಚವನ್ನು ಗಾಢವಾಗಿ ತನ್ನ ಮುಷ್ಟಿಯಲ್ಲಿ ಇಟ್ಟುಕೊಳ್ಳುವಂತಹ ಅತ್ಯದ್ಭುತವಾದ ಸಾಫ್ಟ್ ಪವರ್ ಭಾರತ ದೇಶದ್ದು ಅಂದ್ರೆ ಅದು ಯೋಗ ಎಂದರು.

ಜಿಎಸ್‌ಎಸ್ ಸಂಸ್ಥೆಯ ಮುಖ್ಯಸ್ಥ ಶ್ರೀಹರಿ ಮಾತನಾಡಿ, ಪ್ರತಿನಿತ್ಯ ಯೋಗ ಮಾಡಿದರೆ ಜೀವನದಲ್ಲಿ ಒಂದು ಕೋಟಿ ರೂ. ಉಳಿತಾಯ ಮಾಡಿದಂತೆ. ಜೀವನದಲ್ಲಿ ಎರಡು ಮಂಡಿ ಕಳೆದುಕೊಂಡರೆ, ಹೊಸ ಮಂಡಿ ಹಾಕಿಸಲು 10 ಲಕ್ಷ ರೂ. ಖರ್ಚಾಗುತ್ತೆ. ಒಂದು ಹಾರ್ಟ್ ಅಟ್ಯಾಕ್ ಆದರೆ, 5 ಲಕ್ಷ ರೂ., ಕ್ಯಾನ್ಸರ್ ಅಂತ ಬಂದರೆ ಒಬ್ಬರಿಗೆ ಕನಿಷ್ಠ 50 ಲಕ್ಷ ರೂ. ಬೇಕು. ಅದರ ಬದಲು ನೀವು ನಿತ್ಯ ಒಂದು ಗಂಟೆ ಸಮಯ ವನ್ನು ಯೋಗಕ್ಕೆ ಹೂಡಿಕೆ ಮಾಡಿದರೆ, ಕೋಟಿ ರೂ. ಉಳಿತಾಯ ಮಾಡಬಹುದಾಗಿದೆ.

ಮೈಸೂರಿನಲ್ಲಿ 300ಕ್ಕೂ ಜಾಸ್ತಿ ಯೋಗ ಶಾಲೆಗಳಿವೆ. ಆ ಯಾವುದೇ ಯೋಗಶಾಲೆಯಲ್ಲಿ ನೊಂದಣಿ ಮಾಡಿಕೊಳ್ಳಬಹುದು. ಈಗಾಗಲೇ ಯೋಗ ಅಭ್ಯಾಸ ಇದ್ದರೆ, ನೀವೇ ಮಾಡಿಕೊಳ್ಳಬಹುದು. ಮೈಸೂರಿನಲ್ಲಿ ಯೋಗಕ್ಕೆ 1000 ರೂ. ಮಾತ್ರ ಪಡೆಯಲಾಗುತ್ತಿದೆ. ಪ್ರಧಾನಿಗಳು ಮೈಸೂರಿಗೆ ಬಂದು ಯೋಗ ಮಾಡಿದ್ದರು. ಅದರ ಪ್ರಭಾವ ಇಂದು 2 ಲಕ್ಷಕ್ಕೂ ಹೆಚ್ಚು ಜನ ಪ್ರತಿನಿತ್ಯ ಯೋಗ ಮಾಡುತ್ತಿದ್ದಾರೆ. ಇಂದು ಯೋಗ ತರಬೇತುದಾರರನ್ನು ಆ ಎಲ್ಲಾ ಶಾಲಾ–ಕಾಲೇಜುಗಳಲ್ಲಿ ತರಬೇತುದಾರರಿಗೆ ನೇಮಕ ಮಾಡಿಕೊಂಡು ಉದ್ಯೋಗ ನೀಡಿದ್ದಾರೆ. ಇಲ್ಲಿಂದ ಬೇರೆ ವಿದೇಶದಲ್ಲಿ ಲಕ್ಷಾಂತರ ರೂಪಾಯಿ ಸಂಪಾದನೆ ಮಾಡುತ್ತಿದ್ದಾರೆ. ಜೊತೆಗೆ ಯೋಗ ಪ್ರಚಾರವನ್ನೂ ಮಾಡುತ್ತಿದ್ದಾರೆ ಎಂದರು.

ಕುಲಸಚಿವೆ ಎಂ.ಕೆ.ಸವಿತಾ, ಪರೀಕ್ಷಾಂಗ ಕುಲಸಚಿವ ನಾಗರಾಜು ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಮೇಯರ್ ಸಂದೇಶ್‌ಸ್ವಾಮಿ ನೇತೃತ್ವದಲ್ಲಿ ಯೋಗ ದಿನಾಚರಣೆ



ಮೈಸೂರಿನ ಶಕ್ತಿನಗರದ ಉದ್ಯಾನವನದಲ್ಲಿ ಮಾಜಿ ಮೇಯರ್ ಸಂದೇಶ್‌ಸ್ವಾಮಿ ನೇತೃತ್ವದಲ್ಲಿ ಯೋಗ ದಿನ ಆಚರಿಸಲಾಯಿತು.

ಮೈಸೂರು,ಜೂ.21(ಎಂಕೆ)– ನರಸಿಂಹರಾಜ ಕ್ಷೇತ್ರ ವ್ಯಾಪ್ತಿಯ ಶಕ್ತಿನಗರದ ಉದ್ಯಾನವನದಲ್ಲಿ ಮಾಜಿ ಮೇಯರ್ ಸಂದೇಶ್‌ಸ್ವಾಮಿ ನೇತೃತ್ವದಲ್ಲಿ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು.

ಯೋಗ ಶಿಕ್ಷಕರಾದ ಧನುಷ್ ಮತ್ತು ನಿಕಿತಾ ಮಾರ್ಗದರ್ಶನದಲ್ಲಿ ನೂರಾರು ಮಂದಿ ನಿವಾಸಿಗಳು ಹಾಗೂ ಬಿಜೆಪಿ ಕಾರ್ಯಕರ್ತರು ವಿವಿಧ ಯೋಗಾಸನಗಳನ್ನು ಮಾಡುವ ಮೂಲಕ ಉತ್ಸಾಹಭರಿತ ಜೀವನಕ್ಕಾಗಿ ಯೋಗ ಅತ್ಯಾವಶ್ಯಕವೆಂಬ ಸಂದೇಶವನ್ನು ರವಾನಿಸಿದರು.

ಈ ವೇಳೆ ಮಾತನಾಡಿದ ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಯೋಗವು ದೇಹ ಮತ್ತು ಮನಸ್ಸಿನ ಆರೋಗ್ಯವನ್ನು ಕಾಪಾಡುವ ಮಹತ್ವದ ಸಾಧನವಾಗಿದ್ದು, ಎಲ್ಲರೂ ದಿನನಿತ್ಯದ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು. ಬಿಜೆಪಿ ಎನ್.ಆರ್.ಕ್ಷೇತ್ರದ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಪದ್ಮನಾಭ, ಮುಖಂಡರಾದ ಹೆಚ್.ಜಿ.ಗಿರಿಧರ್, ಸು.ಮುರಳಿ, ಬಿ.ಆನಂದ್, ಕಾರ್ತಿಕ್ ಮರಿಯಪ್ಪ, ಮಾಲಿನಿ ಪಾಲಾಕ್ಷ, ಉಮಾಶ್ರೀ, ಇಂದ್ರ, ದಿವ್ಯ, ಪವಿತ್ರ, ವನಜಾಕ್ಷಮ್ಮ, ಶಾಮ್ಲಾ, ಕವಿತಾ ಸಿಂಗ್, ಸ್ವಾಮಿ ರಜನಿಕಾಂತ್, ಶ್ರೀನಿವಾಸ್, ಶೇಖರ್, ರಮೇಶ್, ಯಶ್ವಂತ್ ಸಿಂಗ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ನೂರಾರು ಭಕ್ತರಿಂದ ಯೋಗ



ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ನಡೆದ ಅಂತರರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ ಯೋಗಪಟುಗಳು ಯೋಗ ಪ್ರದರ್ಶಿಸುತ್ತಿರುವುದು.

ಮೈಸೂರು, ಜೂ.21(ಎಂಟಿವೈ)– ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ಮೈಸೂರಿನ ದತ್ತಪೀಠ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಆಯೋಜಿಸಿದ್ದ ಯೋಗ ಪ್ರದರ್ಶನದಲ್ಲಿ ನೂರಾರು ಭಕ್ತರು ಸಾಮೂಹಿಕ ಯೋಗ ಪ್ರದರ್ಶಿಸಿ ಗಮನ ಸೆಳೆದರು.

ಗಣಪತಿ ಸಚ್ಚಿದಾನಂದ ಆಶ್ರಮದ ನಾದ ಮಂಟಪದಲ್ಲಿ ಆಯೋಜಿಸಿದ್ದ ಯೋಗ ದಿನಾಚರಣೆ ಕಾರ್ಯಕ್ರಮಕ್ಕೆ ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಸ್ವಾಮೀಜಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಚಾಲನೆ ನೀಡಿ ಮಾತನಾಡಿ, ಯೋಗದ ಮೊದಲನೇ ಲಕ್ಷಣವೇ ನಿಶ್ಯಬ್ದ ಮತ್ತು ಮೌನ. ಯಾವುದೇ ಕೆಲಸವನ್ನು ಆಯಾ ಕಾರ್ಯಕ್ಕೆ ತಕ್ಕಂತೆ ಶ್ರದ್ಧೆಯಿಂದ ಮಾಡುವುದೇ ನಿಜವಾದ ಯೋಗ. ಗುರುದೇವರಾದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ ಆಶೀರ್ವಾದ ಹಾಗೂ ಆದೇಶದಂತೆ ಆಶ್ರಮದಲ್ಲಿ ಕಳೆದ 50 ವರ್ಷಗಳಿಂದ 'ದತ್ತ ಕ್ರಿಯಾ ಯೋಗ'ವನ್ನು ಕಲಿಸಿಕೊಡಲಾಗುತ್ತಿದ್ದು, ಸಾಧಕ ಬೋಧಕರು ಇದರ ಯಶಸ್ವಿ ಪ್ರಚಾರ ಮಾಡುತ್ತಿದ್ದಾರೆ ಎಂದರು.

'ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ': ಈ ವರ್ಷದ ಯೋಗ ದಿನವನ್ನು 'ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ'(ಯೋಗ ಫಾರ್ ಹೆಲ್ದೀ ಏಜಿಂಗ್) ಧ್ಯೇಯದೊಂದಿಗೆ ನಡೆಯುತ್ತಿರುವುದು ಅತ್ಯಂತ ಮುಖ್ಯವಾಗಿದೆ. ಕಾಲವನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಆದರೆ ಕಾಲದಿಂದ ನಮ್ಮಲ್ಲಿ ಆಗುವ ಬದಲಾವಣೆಗಳನ್ನು ಯೋಗದ ಮೂಲಕ ಧನಾತ್ಮಕವಾಗಿ ರೂಪಿಸಿಕೊಳ್ಳಬಹುದು. ಕಾಲದ ಪ್ರಭಾವವು ನಮ್ಮ ಮೇಲೆ ಸರಿಯಾದ ರೀತಿಯಲ್ಲಿ ಬೀರುವಂತೆ ಮಾಡಲು ಯೋಗ ಸಹಕಾರಿಯಾಗಿದೆ ಎಂದರು.

ಮುಂದಿನ ವರ್ಷ 2 ಕೋಟಿ ಜನರ ಯೋಗಾಭ್ಯಾಸದ ಸಂಕಲ್ಪ: ಇತ್ತೀಚೆಗೆ ನಡೆದ 'ಮಹಾ ಸಂಕಲ್ಪ ದಿವಸ'ದಂದು ಮೈಸೂರಿನಲ್ಲಿ 1,200 ಯೋಗ ಉಪಾಧ್ಯಾಯರು, 1.20 ಲಕ್ಷಕ್ಕೂ ಹೆಚ್ಚು ಜನ ಯೋಗಾಭ್ಯಾಸ ಮಾಡಲು ನಿರ್ಧರಿಸಿರುವುದು ಶ್ಲಾಘನೀಯ. ಯೋಗದ ಪ್ರಚಾರ ಹೀಗೆಯೇ ಮುಂದುವರಿಯಬೇಕು. ಮುಂದಿನ ವರ್ಷ ರಾಜ್ಯದಲ್ಲಿ ಕನಿಷ್ಠ 2 ಕೋಟಿ ಜನರು ಯೋಗಾಭ್ಯಾಸ ಮಾಡುವಂತಾಗಬೇಕು. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಇಂದಿನಿಂದಲೇ ಪ್ರಯತ್ನವನ್ನು ಪ್ರಾರಂಭಿಸಬೇಕು ಎಂದು ಸಲಹೆ ನೀಡಿದರು.

ಯಾವುದೇ ಕೆಲಸವನ್ನು ಶ್ರದ್ಧೆಯಿಂದ ಮಾಡುವುದೇ ನಿಜವಾದ ಯೋಗ

ನ್ಯೂಜಿಲ್ಯಾಂಡ್‌ನಿಂದ ಕ್ಯಾಲಿಫೋರ್ನಿಯಾವರೆಗೆ 24 ಗಂಟೆಗಳ ಲೈವ್ ಯೋಗ: ದತ್ತ ಕ್ರಿಯಾ ಯೋಗದ ವ್ಯಾಪ್ತಿಯು ಜಾಗತಿಕ ಮಟ್ಟದಲ್ಲಿದ್ದು, ದಿನದ ಮೊದಲ ಸೂರ್ಯನ ಕಿರಣಗಳು ಬೀಳುವ ನ್ಯೂಜಿಲ್ಯಾಂಡ್ ದೇಶದಿಂದ ಪಶ್ಚಿಮದ ಅಮೆರಿಕದ ಕ್ಯಾಲಿಫೋರ್ನಿಯಾವರೆಗಿನ ಆಶ್ರಮದ ಎಲ್ಲಾ ಶಾಖೆಗಳಲ್ಲೂ ಯೋಗಾಭ್ಯಾಸ ನಡೆಯುತ್ತಿದೆ. ಸತತ 24 ಗಂಟೆಗಳ ಕಾಲ ದತ್ತ ಕ್ರಿಯಾ ಯೋಗದ ನೇರಪ್ರಸಾರ (ಲೈವ್) ನಡೆಯುವ ಸಂಕಲ್ಪ ಯಶಸ್ವಿ ಯಾಗಿ ನೆರವೇರುತ್ತಿದೆ ಎಂದರು. ಆಶ್ರಮದ ವೈದ್ಯರು ಹಾಗೂ ಕ್ರಿಯಾ ಯೋಗ ಶಿಕ್ಷಕರೂ ಆದ ಫಣೀಶ್ರೀ ಅವರ ಮಾರ್ಗದರ್ಶನದಲ್ಲಿ ಮಕ್ಕಳು ಸಿದ್ಧಪಡಿಸಿದ್ದ ಸಂಗೀತ ಹಾಗೂ ಯೋಗ ಪ್ರದರ್ಶನ ಕಾರ್ಯಕ್ರಮವು ಎಲ್ಲರ ಗಮನ ಸೆಳೆಯಿತು.

ಕೇಂದ್ರ ರೇಷ್ಮೆ ಸಂಶೋಧನೆ, ತರಬೇತಿ ಸಂಸ್ಥೆಯಲ್ಲಿ ವಿಶ್ವ ಯೋಗ ದಿನಾಚರಣೆ



ರೇಷ್ಮೆ ತರಬೇತಿ ಸಂಸ್ಥೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು.

ಮೈಸೂರು, ಜೂ.21(ಎಂಕೆ)– ಮೈಸೂರಿನ ಮಾನಂದವಾಡಿ ರಸ್ತೆಯಲ್ಲಿರುವ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯಲ್ಲಿ ಭಾನುವಾರ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು.

ಸಂಸ್ಥೆಯ ಸಭಾಂಗಣದಲ್ಲಿ ಅಧಿಕಾರಿ–ಸಿಬ್ಬಂದಿ ಸೇರಿದಂತೆ 70ಕ್ಕೂ ಹೆಚ್ಚು ಮಂದಿ ಸಾಮೂಹಿಕವಾಗಿ ಯೋಗ ಶಿಕ್ಷಕ ಬಸವರಾಜು ಮಾರ್ಗದರ್ಶನದಲ್ಲಿ ಭದ್ರಾಸಾನ, ವಕ್ರಾಸನ, ವೃಕ್ಷಾಸನ, ಮಕರಾಸನ, ಭುಜಂಗಾಸನ, ಸೇತುಬಂಧು, ತ್ರಿಕೋನಾಸನ, ಅರ್ಧಹಾಲಾಸನ, ಪ್ರಾಣಾಯಾಮ ನಾಡಿಶೋಧನಾಸನ ಸೇರಿದಂತೆ ಹತ್ತು–ಹಲವು ಆಸನಗಳನ್ನು ಮಾಡುವ ಮೂಲಕ ಯೋಗ ದಿನದ ಮಹತ್ವ ತಿಳಿಸಿದರು.

ಇದಕ್ಕೂ ಮುನ್ನ ಕಾರ್ಯಕ್ರಮ ಉದ್ಘಾಟಿಸಿದ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯ ಪ್ರಭಾರ ನಿರ್ದೇಶಕಿ ಡಾ.ಎಸ್.ಮಹೀಬಾ ಹೆಲೇನ್ ಮಾತನಾಡಿ, ಪ್ರತಿಯೊಬ್ಬರು ಸ್ವಯಂ ಇಚ್ಛೆಯಿಂದ ಆರೋಗ್ಯಕ್ಕಾಗಿ ಪ್ರತಿದಿನ ಯೋಗ ಮಾಡಬೇಕು ಎಂದು ತಿಳಿಸಿದರು.

ಪ್ರಸ್ತುತ ದಿನಗಳಲ್ಲಿ ಆರೋಗ್ಯದ ಬಗ್ಗೆ ನಾವು ಹೆಚ್ಚು ಗಮನ ನೀಡಬೇಕಾಗಿದೆ. ಆರೋಗ್ಯವೇ ನಮ್ಮ ಸಂಪತ್ತು. ಯುವ ಪೀಳಿಗೆಯು ಆರೋಗ್ಯ ಮತ್ತು ಯೋಗಕ್ಕೆ ತುಂಬಾ ಮಹತ್ವ ನೀಡಬೇಕು. ದೈನಂದಿನ ಕೆಲಸದ ಒತ್ತಡದಲ್ಲಿ ಆರೋಗ್ಯವನ್ನು ನಿರ್ಲಕ್ಷ್ಯ ಮಾಡಬಾರದು. ಇರುವ ಸಮಯದಲ್ಲಿಯೆ ಯೋಗದ ಕಡೆ ಗಮನ ನೀಡವುದು ಅವಶ್ಯಕವಾಗಿದೆ. ಮಾನಸಿಕ ಒತ್ತಡ ನಿವಾರಿಸಲು ಯೋಗವೆ ಮಾರ್ಗ. ಸಾಮರಸ್ಯ ಮತ್ತು ಶಾಂತಿಗಾಗಿ ಯೋಗ ಅವಶ್ಯಕ ಎಂದು ಕಿವಿಮಾತು ಹೇಳಿದರು.

ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯ ಡಾ.ಮಧುಸೂದನ್, ಡಾ.ಗುಲಾಬ್ ಖಾನ್, ಡಾ.ಚಂದ್ರಕಾಂತ್, ಡಾ.ಜಾಯ್ಸಿರಾಣಿ, ಡಾ.ಮಲ್ಲಿಕಾರ್ಜುನ, ನಾರಾಯಣ, ವೈ.ಆರ್.ರಘು, ಮಂಜುಳ ಮತ್ತಿತರರಿದ್ದರು.

ಯೋಗ ಆರೋಗ್ಯ ಸಂರಕ್ಷಣೆ ಸಾಧನ

ಯೋಗ ದಿನಾಚರಣೆಯಲ್ಲಿ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅಭಿಮತ



ಮೈಸೂರಿನ ಸರ್ಕಾರಿ ಪ್ರಕೃತಿ ಚಿಕಿತ್ಸಾ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಆಸ್ಪತ್ರೆ ಆವರಣದಲ್ಲಿ ಭಾನುವಾರ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ನಡೆಯಿತು.

ಮೈಸೂರು,ಜೂ.21(ಎಂಕೆ)– ಯೋಗವು ಭಾರತದ ಅಮೂಲ್ಯ ಪರಂಪರೆಯಾಗಿದ್ದು, ವಿಶ್ವದಾದ್ಯಂತ ಆರೋಗ್ಯ ಸಂರಕ್ಷಣೆಯ ಸಾಧನವಾಗಿ ಗುರುತಿಸಿಕೊಂಡಿದೆ ಎಂದು ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ತಿಳಿಸಿದರು.

ಮೈಸೂರಿನ ಕೆ.ಆರ್.ಎಸ್ ರಸ್ತೆಯಲ್ಲಿರುವ ಸರ್ಕಾರಿ ಪ್ರಕೃತಿ ಚಿಕಿತ್ಸಾ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಆಸ್ಪತ್ರೆ ಆವರಣದಲ್ಲಿ ಆಯುಷ್ ಇಲಾಖೆ ಸಹಯೋಗದೊಂದಿಗೆ ಆಯೋಜಿಸಿದ್ದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಯೋಗಾಭ್ಯಾಸದಿಂದ ಜೀವನದಲ್ಲಿ ಶಿಸ್ತು, ಏಕಾಗ್ರತೆ ಮತ್ತು ಸಮತ್ವವನ್ನು ಬೆಳೆಸಿಕೊಳ್ಳಬಹುದು ಎಂದರು.

ವಿಶ್ವದಾದ್ಯಂತ ಆಚರಿಸುವ ಯೋಗ ದಿನಾಚರಣೆ ಮಹತ್ವವನ್ನು ಮತ್ತಷ್ಟು ಹೆಚ್ಚಿಸುವ ನಿಟ್ಟಿನಲ್ಲಿ ಯುವ ಸಮೂಹ ಯೋಗದತ್ತ ಹೆಚ್ಚಿನ ಆಸಕ್ತಿ ವಹಿಸಬೇಕು. ದಿನವೂ 20–30 ನಿಮಿಷಗಳ ಕಾಲ ಯೋಗಾಭ್ಯಾಸ ಮಾಡುವ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಕರೆ ನೀಡಿದರು.

ಸರ್ಕಾರಿ ಪ್ರಕೃತಿ ಚಿಕಿತ್ಸಾ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಆಸ್ಪತ್ರೆಯ ಪ್ರಾಂಶುಪಾಲ ಡಾ.ಕೆ.ವಿ.ವೆಂಕಟಕೃಷ್ಣ ಮಾತನಾಡಿ, ಯೋಗವು ಕೇವಲ ದೈಹಿಕ ವ್ಯಾಯಾಮವಲ್ಲ, ಅದು ಸಮಗ್ರ ಜೀವನ ಪದ್ಧತಿಯಾಗಿದೆ. ಯೋಗದ ಮೂಲಕ ದೈಹಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಆರೋಗ್ಯವನ್ನು ಸಾಧಿಸಬಹುದು. ಒತ್ತಡದ ಜೀವನಶೈಲಿಯಲ್ಲಿ ಯೋಗವು ಆರೋಗ್ಯಕರ ಮತ್ತು ಸಂತುಷ್ಟ ಜೀವನಕ್ಕೆ ದಾರಿದೀಪವಾಗಿದೆ ಎಂದರು.

ಸರ್ಕಾರಿ ಹೈಟೆಕ್ ಪಂಚಕರ್ಮ ಆಸ್ಪತ್ರೆಯ ಉಪ ವೈದ್ಯಕೀಯ ಅಧೀಕ್ಷಕಿ ಡಾ. ವಾಣಿಶ್ರೀ, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಆಸ್ಪತ್ರೆಯ ಪ್ರಾಂಶುಪಾಲ ಡಾ. ಶ್ರೀವತ್ಸ, ಸ್ವಸ್ಥವೃತ್ತ ವಿಭಾಗದ ಮುಖ್ಯಸ್ಥ ಡಾ.ಸುಧೀಂದ್ರ ಜಿ.ನವಲೆ, ವೈದ್ಯಾಧಿಕಾರಿಗಳಾದ ಡಾ.ಡಿ.ಎಸ್.ಭಾರತೀಶ್, ಡಾ.ಮುರಳಿ ಆರ್.ನಾಡಿಗ, ಡಾ.ಗಜಾನನ ಹೆಗಡೆ, ನಂಜುಂಡಸ್ವಾಮಿ, ಸುಜಾತ, ಡಾ.ಡಿ.ಗಗನಲಕ್ಷ್ಮಿ, ಡಾ.ಹೆಚ್.ಅನಿತಾ, ಡಾ.ಆರ್.ಲಕ್ಷ್ಮಿ ಮತ್ತಿತರರಿದ್ದರು.

ರೈಲ್ವೆ ಭವನದಲ್ಲಿ ರೈಲ್ವೆ ಅಧಿಕಾರಿಗಳು, ಸಿಬ್ಬಂದಿಯಿಂದ ಯೋಗ ದಿನಾಚರಣೆ

ಮೈಸೂರು, ಜೂ.21(ಎಂಟಿವೈ)– ಮೈಸೂರಿನ ರೈಲ್ವೆ ಸಮುದಾಯ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ರೈಲ್ವೆ ಅಧಿಕಾರಿಗಳು, ಸಿಬ್ಬಂದಿ ಪಾಲ್ಗೊಂಡು ಯೋಗ ಪ್ರದರ್ಶಿಸಿದರು.

ನೈರುತ್ಯ ರೈಲ್ವೆಯ ಮೈಸೂರು ವಿಭಾಗದ ವತಿಯಿಂದ ಏರ್ಪಡಿಸಿದ್ದ ಯೋಗ ದಿನದ ಕಾರ್ಯಕ್ರಮದಲ್ಲಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಮುದಿತ್ ಮಿತ್ತಲ್ ಮಾತನಾಡಿ, ಆರೋಗ್ಯಕರ ಮತ್ತು ಸಮತೋಲನಯುತ ಸಮಾಜ ನಿರ್ಮಾಣದಲ್ಲಿ ಯೋಗದ ಪಾತ್ರ ಮುಖ್ಯವಾಗಿದೆ. ಇದು ದೈಹಿಕ ಆರೋಗ್ಯ, ಮಾನಸಿಕ ಸಮತೋಲನ, ಆಂತರಿಕ ಶಾಂತಿಯನ್ನು ಉತ್ತೇಜಿಸುವ ಸಮಗ್ರ ವಿಧಾನವಾಗಿದ್ದು, ಸಮತೋಲನಯುತ, ಅರ್ಥಪೂರ್ಣ ಜೀವನಶೈಲಿಗೆ ಸಹಕಾರಿಯಾಗಿದೆ ಎಂದು ತಿಳಿಸಿದರು.

ಇಂದಿನ ವೇಗದ ಮತ್ತು ಒತ್ತಡಭರಿತ ಜೀವನಶೈಲಿಯಲ್ಲಿ ಉತ್ತಮ ಆರೋಗ್ಯ, ಮಾನಸಿಕ ಶಾಂತಿ, ಸಮಗ್ರ ಕಲ್ಯಾಣವನ್ನು ಸಾಧಿಸಲು ಯೋಗವನ್ನು ನಿತ್ಯದ ಜೀವನದ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಳ್ಳಬೇಕು ಎಂದರು.

ಹಿರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಯೋಗ ತರಬೇತಿ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಕಳೆದ 23 ವರ್ಷದಿಂದ ಯೋಗ ತರಬೇತುದಾರರಾಗಿ ಸೇವೆ ಸಲ್ಲಿಸುತ್ತಿರುವ ರಘು ಅವರನ್ನು ಸನ್ಮಾನಿಸಲಾಯಿತು. ಮೈಸೂರು ವಿಭಾಗದ ಪ್ರಮುಖ ರೈಲು ನಿಲ್ದಾಣಗಳಲ್ಲಿಯೂ ಯೋಗ ಕಾರ್ಯಕ್ರಮವನ್ನು ಆಯೋಜಿಸಲಾಯಿತು.



ಮೈಸೂರಿನ ರೈಲ್ವೆ ಸಮುದಾಯ ಭವನದಲ್ಲಿ ಆಯೋಜಿಸಿದ್ದ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ರೈಲ್ವೆ ಅಧಿಕಾರಿಗಳು, ಸಿಬ್ಬಂದಿ ಪಾಲ್ಗೊಂಡು ಯೋಗ ಪ್ರದರ್ಶಿಸಿದರು.

ಸಮತಾ ಭವನದಲ್ಲಿ ಯೋಗ ದಿನಾಚರಣೆ



ಸಮತಾ ಭವನದಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು.

ಮೈಸೂರು,ಜೂ.21(ಎಂಟಿವೈ)– ಮೈಸೂರಿನ ಸಮತಾ ಭವನದಲ್ಲಿ ಬಿಜೆಎಸ್ ಸಂಸ್ಥೆ ಆಯೋಜಿಸಿದ್ದ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಹಲವು ಮಂದಿ ಪಾಲ್ಗೊಂಡು ಯೋಗ ಪ್ರದರ್ಶಿಸಿದರು.

ಯೋಗ ತರಬೇತುದಾರರಾದ ನಿಧಿ ಜೈನ್ ಮಾರ್ಗದರ್ಶನದಲ್ಲಿ ನಡೆದ ಯೋಗ ಪ್ರದರ್ಶನದಲ್ಲಿ ಸೂರ್ಯ ನಮಸ್ಕಾರ, ತಡಾಸನ, ವೃಕ್ಷಾಸನ, ಭುಜಂಗಾಸನಗಳನ್ನು ಯೋಗಪಟುಗಳು ಪ್ರದರ್ಶಿಸಿದರು. ಬಿಜೆಎಸ್ ಸಂಸ್ಥೆ ಅಧ್ಯಕ್ಷೆ ಶರ್ಮಿಳಾ ಧೋಕಾ, ನವರತ್ನ ಪಿಟ್ಲಿಯಾ, ಅಚಲ್ ದೇಸರ್ಲಾ, ಉಪಾಧ್ಯಕ್ಷ ಸಂತೋಷ್ ಸಲೇಚಾ, ಬಿಜೆಎಸ್ ಮೈಸೂರು ವಿಭಾಗದ ಅಧ್ಯಕ್ಷ ರಾಜನ್ ಬಾಗ್ಮಾರ್, ಕಾರ್ಯದರ್ಶಿ ದೀಪಕ್ ಬೋಹ್ರಾ, ಕೋಶಾಧಿಕಾರಿ ಮನೋಹರ ಸಂಕಲ, ಉಪಾಧ್ಯಕ್ಷ ಅಮಿತ್ ಚೌಹಾಣ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಕೋರ್ಟ್ ಆವರಣದಲ್ಲಿ ನ್ಯಾಯಾಧೀಶರು, ವಕೀಲರು ಯೋಗ ಪ್ರದರ್ಶನ

ಯೋಗ ದೈಹಿಕ ಆರೋಗ್ಯ, ಮನಸ್ಸಿನ ಶಾಂತತೆಗೆ ಸಹಕಾರಿ



ಮೈಸೂರಿನ ಜಯನಗರದಲ್ಲಿರುವ ನ್ಯಾಯಾಲಯಗಳ ಸಂಕೀರ್ಣ ಆವರಣದಲ್ಲಿ ವಿಶ್ವ ಯೋಗ ದಿನ ಆಚರಿಸಲಾಯಿತು.

ಮೈಸೂರು,ಜೂ.21(ಎಂಕೆ)– ಯೋಗ ಭಾರತೀಯರ ಸಾಂಪ್ರದಾಯಿಕ ಅಭ್ಯಾಸವಾಗಿದ್ದು, ಉತ್ತಮ ದೈಹಿಕ ಆರೋಗ್ಯ ಸ್ಥಿತಿ ಮತ್ತು ಮನಸ್ಸಿನ ಶಾಂತತೆ, ಸಮತೋಲನಕ್ಕೆ ಸಹಕಾರಿ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರೂ ಆದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಉಷಾರಾಣಿ ತಿಳಿಸಿದರು.

ಮೈಸೂರಿನ ಜಯನಗರದಲ್ಲಿರುವ ನ್ಯಾಯಾಲಯಗಳ ಸಂಕೀರ್ಣ ಆವರಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ನ್ಯಾಯಾಂಗ ಇಲಾಖೆ, ವಕೀಲರ ಸಂಘ ಮತ್ತು ಆಯುಷ್ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಅಪಘಾತಕ್ಕೀಡಾಗಿ ನೋವುಗಳನ್ನು ಅನುಭವಿಸುತ್ತಿದ್ದ ನನಗೆ ಆ ನೋವುಗಳಿಂದ ಮುಕ್ತಿ ನೀಡಿದ್ದು ಯೋಗ. ಪ್ರತಿನಿತ್ಯ ಸೂರ್ಯ ನಮಸ್ಕಾರ ಮಾಡಲು ಪ್ರಾರಂಭಿಸಿದಾಗಿನಿಂದ ನೋವುಗಳು ಶಮನವಾಗಿ ಗುಣಮುಖವಾಗಲು ಸಾಧ್ಯವಾಯಿತು ಎಂದು ತಿಳಿಸಿದರು.

ಸೂರ್ಯ ನಮಸ್ಕಾರ ಮುಂತಾದ ಆಸನಗಳು ದೈಹಿಕ ಮತ್ತು ಮಾನಸಿಕವಾಗಿ ಮಾತ್ರವಲ್ಲದೆ ನಮ್ಮ ಸರ್ವತೋಮುಖ ಅಭಿವೃದ್ಧಿಗೆ ಹಿರಿಯರು ನೀಡಿರುವ ಆಶೀರ್ವಾದ ರೂಪದ ವರವಾಗಿದೆ. ಪ್ರತಿದಿನ 15 ರಿಂದ 20 ನಿಮಿಷ ಧ್ಯಾನ ಮಾಡುವುದರಿಂದ ರಕ್ತದೊತ್ತಡ ಕಡಿಮೆಯಾಗಿ ಏಕಾಗ್ರತೆ ವೃದ್ಧಿಯಾಗುತ್ತದೆ ಎಂದರು.

ಧ್ಯಾನ ಎಂದರೆ ಕಣ್ಣು ಮುಚ್ಚಿ ಕುಳಿತುಕೊಳ್ಳುವುದಲ್ಲ. ಧ್ಯಾನ ನಮ್ಮ ಮನಸ್ಸನ್ನು ಅರಿತುಕೊಳ್ಳುವ ಸುಂದರ ಪ್ರಕ್ರಿಯೆ. ಇದು ನಮ್ಮ ಜೀವನವನ್ನು ಆನಂದಮಯವಾಗಿ ಮತ್ತು ಸಕಾರಾತ್ಮಕವಾಗಿ ನಡೆಸಲು ಸ್ಫೂರ್ತಿ ನೀಡುತ್ತದೆ. ಧ್ಯಾನವನ್ನು ಎಲ್ಲಿಬೇಕಾದರೂ ಯಾವ ಸ್ಥಳದಲ್ಲಿ ಬೇಕಾದರೂ ಮಾಡಬಹುದು. ಉಸಿರಾಟದ ಮೇಲೆ ಗಮನಹರಿಸುವ ಮೂಲಕ ನಾವು ಧ್ಯಾನದ ಪರಿಣಾಮವನ್ನು ಪಡೆಯಬಹುದಾಗಿದೆ ಎಂದರು.

ಆರೋಗ್ಯದತ್ತ ನಡೆ: ಯೋಗವು ಕೇವಲ ವ್ಯಾಯಾಮ ಮಾಡುವುದಲ್ಲ. ಆರೋಗ್ಯದತ್ತ ಸಾಗುವ ನಡೆಯಾಗಿದೆ. ನಮ್ಮಿಂದ ಬಾಹ್ಯ ಜಗತ್ತನ್ನು ಬದಲಾಯಿಸಲು ಸಾಧ್ಯವಿಲ್ಲವಾದರೂ ಆಂತರಿಕ ಬದುಕನ್ನು ಧ್ಯಾನದಿಂದ ಸುಂದರಗೊಳಿಸಿಕೊಳ್ಳಬಹುದಾಗಿದೆ. 'ಸರ್ವೇ ಸಂತು ನಿರಾಮ' ಎಂಬಂತೆ ಎಲ್ಲರೂ ರೋಗಗಳಿಂದ ಮುಕ್ತರಾಗಲಿ. ಆರೋಗ್ಯಕರ ಸಮಾಜ ನಿರ್ಮಾಣವಾಗಲಿ ಎಂದು ಆಶಿಸಿದರು.

ಲೈಫ್‌ಸ್ಟೈಲ್ ಮೆಡಿಷಿನ್: ಸರ್ಕಾರಿ ಪ್ರಕೃತಿ ಚಿಕಿತ್ಸಾ ಆಸ್ಪತ್ರೆ ವೈದ್ಯಾಧಿಕಾರಿ ಡಾ.ಎಂ.ಪಿ.ಅಮೃತಾ ಮಾತನಾಡಿ, 'ಆರೋಗ್ಯಕರ ವೃದ್ಧಾಪ್ಯಕ್ಕಾಗಿ' ಯೋಗ ಎಂಬ ಘೋಷಣೆಯನ್ನು ಸಾರ್ಥಕವಾಗಿಸಲು ಯೋಗ ಮಾಡಬೇಕು. ನಮ್ಮೆಲ್ಲರ ಎಮೋಷನಲ್ ಕಲ್ಚರ್‌ಗೆ ಯೋಗಬೇಕು. ಲೈಫ್‌ಸ್ಟೈಲ್ ಮೆಡಿಸಿನ್ ಯೋಗವಾಗಿದೆ ಎಂದರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ನಾಗರಾಜ ಸಿದ್ದಪ್ಪ ಅಂಕಸದೊಡ್ಡಿ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಜಂಟಿ ಕಾರ್ಯದರ್ಶಿ ಚರಣ್‌ರಾಜ್, ಡಿಎಲ್‌ಎಸ್‌ಎ ಅಬ್ದುಲ್ ನಜೀರ್ ಮತ್ತಿತರರು ಉಪಸ್ಥಿತರಿದ್ದರು.

ಯೋಗ ಭಾರತದ ಪ್ರಾಚೀನ ಸಂಸ್ಕೃತಿ, ಪರಂಪರೆ

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅಭಿಪ್ರಾಯ



ಮಂಡ್ಯದಲ್ಲಿ ನಡೆದ ಯೋಗ ದಿನಾಚರಣೆಯಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಪಾಲ್ಗೊಂಡಿದ್ದರು.

ಮಂಡ್ಯ, ಜೂ.21– ಯೋಗ ಭಾರತದ ಪ್ರಾಚೀನ ಸಂಸ್ಕೃತಿ ಮತ್ತು ಪರಂಪರೆಯ ಅಮೂಲ್ಯ ಕೊಡುಗೆಯಾಗಿದೆ. ಯೋಗವು ದೇಹ, ಮನಸ್ಸು ಮತ್ತು ಆತ್ಮದ ನಡುವೆ ಸಮತೋಲನ ಸಾಧಿಸುವ ಸಾಧನವಾಗಿದೆ. ಇಂದಿನ ವೇಗದ ಜೀವನ ಶೈಲಿಯಲ್ಲಿ ಮಾನಸಿಕ ಒತ್ತಡ, ಆತಂಕ ಮತ್ತು ವಿವಿಧ ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಯೋಗವು ಆರೋಗ್ಯಕರ ಜೀವನಕ್ಕೆ ಅತ್ಯುತ್ತಮ ಮಾರ್ಗವಾಗಿದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ತಿಳಿಸಿದರು.

ನಗರದ ಪಿಇಟಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಪಂ ಆಯುಷ್ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಶಾಲಾ ಶಿಕ್ಷಣ ಇಲಾಖೆ ಮೈ ಭಾರತ್ ಕೇಂದ್ರ, ರೆಡ್ ಕ್ರಾಸ್ ಸಂಸ್ಥೆ ಎಂಎಫ್ಐ ಮಂಡ್ಯ ಎಸ್‌ಪಿವೈಎಸ್‌ಎಸ್ ಹಾಗೂ ಜಿಲ್ಲಾ ವಿವಿಧ ಯೋಗನಿರತ ಸಂಘ ಸಂಸ್ಥೆಗಳ ವತಿಯಿಂದ ನಡೆದ 12ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ –2026 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ವಿಶ್ವ ಯೋಗ ದಿನವನ್ನು ವಿಶ್ವದ ಎಲ್ಲಾ ಭಾಗಗಳಲ್ಲೂ ಆಚರಿಸುತ್ತಿದ್ದು, 2,500 ಸ್ಥಳಗಳಲ್ಲಿ ಆಚರಣೆ ಮಾಡಲಾಗುತ್ತಿದೆ. ಯೋಗ ಮತ್ತು ಧ್ಯಾನ ಮಾಡುವುದರಿಂದ ಜೀವನದಲ್ಲಿ ಅತ್ಯಂತ ಉತ್ತಮ ಆರೋಗ್ಯವನ್ನು ಪಡೆಯಬಹುದಾಗಿದೆ. ಎಲ್ಲರೂ ಪ್ರತಿನಿತ್ಯ 15 ರಿಂದ 20 ನಿಮಿಷಗಳ ಕಾಲ ಯೋಗ ಮತ್ತು ಧ್ಯಾನ ಮಾಡುವುದರಿಂದ ಆರೋಗ್ಯ ವೃದ್ಧಿಯಾಗುತ್ತದೆ ಎಂದರು.

ಚಂದ್ರವನ ಮಠದ ಪೀಠಾಧ್ಯಕ್ಷ ಡಾ.ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿ, ಮಕ್ಕಳು ನಮ್ಮ ಸಂಸ್ಕೃತಿ ಮತ್ತು ಪರಂಪರೆ ಅಳವಡಿಸಿಕೊಳ್ಳಬೇಕು. ಯೋಗವು ಕೇವಲ ದೈಹಿಕ ವ್ಯಾಯಾಮವಲ್ಲ. ಇದು ಮನಸ್ಸಿನ ಏಕಾಗ್ರತೆ, ಆತ್ಮ ನಿಯಂತ್ರಣ ಮತ್ತು ಆಧ್ಯಾತ್ಮಿಕ ಬೆಳವಣಿಗೆ ಉತ್ತೇಜಿಸುವ ಸಮಗ್ರ ಜೀವನ ಪದ್ಧತಿಯಾಗಿದೆ. ನಿಯಮಿತವಾಗಿ ಯೋಗಾಭ್ಯಾಸ ಮಾಡುವುದರಿಂದ ದೇಹದ ನಮ್ಯತೆ ಹೆಚ್ಚುತ್ತದೆ. ರೋಗ ನಿರೋಧಕ ಶಕ್ತಿ ವೃದ್ಧಿಯಾಗುತ್ತದೆ ಮತ್ತು ಹೃದಯ, ಉಸಿರಾಟ ಹಾಗೂ ಜೀರ್ಣಕ್ರಿಯೆಯ ಆರೋಗ್ಯ ಸುಧಾರಿಸುತ್ತದೆ. ಜೊತೆಗೆ, ಒತ್ತಡ, ಖಿನ್ನತೆ ಮತ್ತು ಆತಂಕದಂತಹ ಮಾನಸಿಕ ಸಮಸ್ಯೆಗಳನ್ನು ಕಡಿಮೆ ಮಾಡಲು ಸಹ ಯೋಗವು ಸಹಾಯಕವಾಗಿದೆ ಎಂದರು.

ಶ್ರೀಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್(ರಿ) ಪ್ರಧಾನ ಕಾರ್ಯದರ್ಶಿ ಪುರುಷೋತ್ತಮಾನಂದನಾಥ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿದ್ದರು. ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ, ಎಸ್.ಬಿ.ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಹಾಗೂ ರೆಡ್‌ಕ್ರಾಸ್ ಸಂಸ್ಥೆ ಅಧ್ಯಕ್ಷೆ ಮೀರಾಶಿವಲಿಂಗಯ್ಯ, ಜಿಪಂ ಸಿಇಓ ಕೆ.ಆರ್.ನಂದಿನಿ, ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ, ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶೋಭರಾಣಿ ವಿ.ಜೆ. ಇನ್ನಿತರರಿದ್ದರು.

ಬೇವಿನಹಳ್ಳಿ ಸರ್ಕಾರಿ ಶಾಲೆಗೆ ಗ್ರಾಮಸ್ಥರಿಂದಲೇ ಕಾಯಕಲ್ಪ

65 ಲಕ್ಷ ವೆಚ್ಚದಲ್ಲಿ 6 ಕೊಠಡಿಗಳ ನೂತನ ಕಟ್ಟಡ ನಿರ್ಮಾಣ



ಬೇವಿನಹಳ್ಳಿಯಲ್ಲಿ ಗ್ರಾಮಸ್ಥರು, ಹಳೇ ವಿದ್ಯಾರ್ಥಿಗಳು ಶಾಲೆ ನಿರ್ಮಾಣಕ್ಕೆ ಮುಂದಾಗಿರುವುದು.

> ನಮ್ಮದು ಗ್ರಾಪಂ ಕೇಂದ್ರ ಸ್ಥಾನ. ಇಲ್ಲಿನ ಸರ್ಕಾರಿ ಶಾಲೆ ದುರಾವಸ್ಥೆ ಕಂಡು, ಇದನ್ನೊಂದು ಮಾದರಿ ಶಾಲೆಯನ್ನಾಗಿ ರೂಪಿಸಲು ಎಲ್ಲರ ಸಹಕಾರದಿಂದ ಕೆಲಸ ಶುರು ಮಾಡಿದ್ದೇವೆ. ಖಾಸಗಿ ಶಾಲೆ ವ್ಯಾಮೋಹ ಬಿಡಿಸಿ, ಸರ್ಕಾರಿ ಶಾಲೆಯಲ್ಲೇ ಗುಣಮಟ್ಟದ ಶಿಕ್ಷಣ ಕೊಡಿಸಬೇಕು ಎನ್ನುವ ಸಂಕಲ್ಪ ನಮ್ಮದು. ಸದ್ಯ ಗ್ರಾಮಸ್ಥರ ಆರ್ಥಿಕ ನೆರವಿನಿಂದಲೇ ಕೆಲಸ ನಡೆಯುತ್ತಿದ್ದು, ಸರ್ಕಾರವೂ ಇದಕ್ಕೆ ತಕ್ಕ ಅನುದಾನ ನೀಡಿ ಕೈಜೋಡಿಸಬೇಕು.
>
> –ಸೋಮಶಂಕರೇಗೌಡ, ಗ್ರಾಮಾಭಿವೃದ್ಧಿ ಸಮಿತಿ ಗೌರವಾಧ್ಯಕ್ಷ.

ಮಂಡ್ಯ, ಜೂ.21– ಶಿಥಿಲಾವಸ್ಥೆಯಲ್ಲಿದ್ದ ಸರ್ಕಾರಿ ಶಾಲೆಯನ್ನು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ತಾಲೂಕಿನ ಬೇವಿನಹಳ್ಳಿಯ ಗ್ರಾಮಸ್ಥರು ಹಾಗೂ ಶಾಲೆಯ ಹಳೆಯ ವಿದ್ಯಾರ್ಥಿಗಳು ಮಹತ್ವದ ಹೆಜ್ಜೆ ಇಟ್ಟಿದ್ದಾರೆ. ಸುಮಾರು 65 ಲಕ್ಷ ವೆಚ್ಚದಲ್ಲಿ 6 ಸುಸಜ್ಜಿತ ಕೊಠಡಿಗಳ ನೂತನ ಕಟ್ಟಡ ನಿರ್ಮಾಣ ಕಾರ್ಯ ಭರದಿಂದ ಸಾಗುತ್ತಿದ್ದು, ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡುವ 'ಮಾದರಿ ಶಾಲೆ' ಯನ್ನಾಗಿ ರೂಪಿಸಲು ಗ್ರಾಮಸ್ಥರು ಪಣತೊಟ್ಟಿದ್ದಾರೆ. ಗ್ರಾಮಸ್ಥರು, ಎಸ್‌ಡಿಎಂಸಿ ಹಾಗೂ ಹಳೇ ವಿದ್ಯಾರ್ಥಿಗಳ ದೇಣಿಗೆಯಿಂದಲೇ ಈ ಕಾರ್ಯ ನಡೆಯುತ್ತಿದ್ದು, ಮುಂದಿನ 5 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸಿ ಎಲ್‌ಕೆಜಿಯಿಂದಲೇ ಆಂಗ್ಲ ಮಾಧ್ಯಮ ಶಿಕ್ಷಣ ಆರಂಭಿಸುವ ಗುರಿ ಹೊಂದಲಾಗಿದೆ.

ಗ್ರಾಪಂ ಮಾಜಿ ಅಧ್ಯಕ್ಷ ಬಿ.ಎಂ.ಮಹೇಶ್ ಮಾತನಾಡಿ, ಶಾಲೆಯಲ್ಲಿ ಮಕ್ಕಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದ್ದರಿಂದ ಗ್ರಾಮದ ಮುಖಂಡರು, ಗ್ರಾಪಂ ಸದಸ್ಯರು ಹಾಗೂ ಎಸ್‌ಡಿಎಂಸಿ ವತಿಯಿಂದ ಸಭೆ ನಡೆಸಲಾಯಿತು. ಕೊಠಡಿಗಳ ವ್ಯವಸ್ಥೆ ಸರಿ ಇಲ್ಲದಿರುವುದೇ ಇದಕ್ಕೆ ಮುಖ್ಯ ಕಾರಣ ಎಂದು ತಿಳಿದು ಬಂತು. ಹೀಗಾಗಿ ಹಳೆ ಕಟ್ಟಡ ತೆರವುಗೊಳಿಸಿ, 6 ಕೊಠಡಿಗಳನ್ನು ನಿರ್ಮಿಸಲಾಗುತ್ತಿದೆ. ಬಡ ರೈತರ ಮಕ್ಕಳು ಖಾಸಗಿ ಶಾಲೆಗಳಿಗೆ ಲಕ್ಷಾಂತರ ರೂ. ಸುರಿಯುವುದನ್ನು ತಪ್ಪಿಸಿ, ನಮ್ಮ ಹಳ್ಳಿಯಲ್ಲೇ ಅತ್ಯುತ್ತಮ ಶಿಕ್ಷಣ ಒದಗಿಸುವುದು ನಮ್ಮ ಪ್ರಮುಖ ಗುರಿಯಾಗಿದೆ ಎಂದರು.

ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಶಿವಕುಮಾರ್ ಮಾತನಾಡಿ, ಶಾಲೆಯಲ್ಲಿ ಮೂಲ ಸೌಕರ್ಯ ಹಾಗೂ ಸುಸಜ್ಜಿತ ಕಟ್ಟಡ ಇಲ್ಲದ ಕಾರಣ ಪೋಷಕರು ಮಕ್ಕಳನ್ನು ಸೇರಿಸಲು ಹಿಂದೇಟು ಹಾಕುತ್ತಿದ್ದರು. ಇದನ್ನು ಮನಗಂಡು ಗ್ರಾಮದ ಮುಖಂಡರ ನೆರವಿನಿಂದ ಹಳೇ ಕಟ್ಟಡ ನೆಲಸಮ ಮಾಡಿ, ಹೊಸ ಕಟ್ಟಡ ನಿರ್ಮಾಣಕ್ಕೆ ಮುಂದಾಗಿದ್ದೇವೆ ಎಂದರು.

ಶಾಲಾಭಿವೃದ್ಧಿ ಸಮಿತಿ ಉಪಾಧ್ಯಕ್ಷೆ ರಮ್ಯಾ ಮಾತನಾಡಿ, ಸರ್ಕಾರದಿಂದ ಇನ್ನು ಯಾವುದೇ ಅನುದಾನ ಬಂದಿಲ್ಲ. ಆದರೂ ಗ್ರಾಮಸ್ಥರ ಆಸಕ್ತಿ ಮತ್ತು ಸ್ವಂತ ಖರ್ಚಿನಿಂದಲೇ ಕೆಲಸ ನಡೆಯುತ್ತಿದೆ. ನಮ್ಮ ಸರ್ಕಾರಿ ಶಾಲೆ ಆಂಗ್ಲ ಮಾಧ್ಯಮ ಶಾಲೆಗಿಂತ ಯಾವುದರಲ್ಲೂ ಕಮ್ಮಿ ಇಲ್ಲ ಎನ್ನುವುದನ್ನು ತೋರಿಸಬೇಕು. ಎಲ್‌ಕೆಜಿ, ಯುಕೆಜಿಯಿಂದ ಹಿಡಿದು 7ನೇ ತರಗತಿವರೆಗೆ ಇಂಗ್ಲಿಷ್ ಮಾಧ್ಯಮ ಆರಂಭಿಸಿ, ಉತ್ತಮ ಅತಿಥಿ ಶಿಕ್ಷಕರನ್ನು ತರುವ ಉದ್ದೇಶ ಹೊಂದಿದ್ದೇವೆ. ಇದಕ್ಕೆ ಸರ್ಕಾರದಿಂದಲೂ ನಮಗೆ ಪ್ರೋತ್ಸಾಹ ಸಿಗಬೇಕಿದೆ ಎಂದರು.

ಈ ವೇಳೆ ಹೊನ್ನಲಿಂಗೇಗೌಡ,ಕುಮಾರ್. ಎಂ, ನಾಗರಾಜು.ಕೆ, ಮಾದು,ಯೋಗೇಶ್, ಮನು, ಬಸವಲಿಂಗ, ಮಾಯಿಗೌಡ, ಮಂಜು, ಶಿವಕುಮಾರ್, ಮಾದೇಗೌಡ, ಲತಾ, ಸುನಿತಾ, ಸಂತೋಷ್ ಗೌಡ, ಚಂದ್ರಣ್ಣ, ಎಂ.ಸಂತೋಷ್, ಇನ್ನರ್‌ವ್ಹೀಲ್ ಸಂಸ್ಥೆಯ ಶಾಂತ, ಅರುಣ, ಸುನಿತಾ, ಡಾ.ಲಕ್ಷ್ಮೀಶ್, ಲತಾಮಣಿ ಹಾಗೂ ಇತರರಿದ್ದರು.

ಭಾರತೀಯ ಸಂಸ್ಕೃತಿಯ ಪ್ರತೀಕ ಯೋಗ

ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ



2 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿವಿಧ ಯೋಗಾಸನಗಳ ಪ್ರದರ್ಶನ ನೀಡಿದರು.

ಭಾರತೀನಗರ, ಜೂ.21– ಯೋಗ ಭಾರತೀಯ ಸಂಸ್ಕೃತಿಯ ಪ್ರತೀಕವಾಗಿದ್ದು, ಪುರಾತನ ಕಾಲದಿಂದಲೂ ನಮ್ಮ ಪೀಳಿಗೆಗೆ ಬಳುವಳಿಯಾಗಿ ಬಂದಿದೆ ಎಂದು ಬಿಇಟಿ ಅಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಮಧು ಜಿ. ಮಾದೇಗೌಡ ತಿಳಿಸಿದರು.

ಭಾರತೀನಗರದ ಭಾರತೀ ಎಜುಕೇಷನ್ ಟ್ರಸ್ಟ್‌ನ ಭಾರತೀ ನ್ಯಾಚುರೋಪತಿ ಅಂಡ್ ಯೋಗಿಕ್ ಸೈನ್ಸ್ ವತಿಯಿಂದ ಆಯೋಜಿಸಿದ್ದ 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಯೋಗಾಭ್ಯಾಸ ಮಾಡುವುದರಿಂದ ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಂಡು ಉತ್ತಮ ಆರೋಗ್ಯ ಕಾಪಾಡಿಕೊಳ್ಳಬಹುದು. ಯೋಗವು ಸುಪ್ತ ಮನಸ್ಸನ್ನು ಜಾಗೃತಗೊಳಿಸುವುದರ ಜೊತೆಗೆ ದೀರ್ಘಾಯುಷ್ಯವನ್ನು ನೀಡುತ್ತದೆ. ಸೋಮಾರಿತನವನ್ನೂ ದೂರ ಮಾಡುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಯೋಗ, ಅದರಲ್ಲೂ ಹಠಯೋಗವನ್ನು ಕಲಿತು ನಿರುತ ಅಭ್ಯಾಸದ ಮೂಲಕ ಆರೋಗ್ಯ ಮತ್ತು ಆಯುಷ್ಯ ವೃದ್ಧಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಯೋಗದಿಂದ ದೈಹಿಕ ಹಾಗೂ ಮಾನಸಿಕ ಸದೃಢತೆ, ಶಾಂತಿ, ಏಕಾಗ್ರತೆ ಸೇರಿದಂತೆ ಹಲವು ಪ್ರಯೋಜನ ದೊರೆಯುತ್ತವೆ. ಯೋಗವು ಇಂದು ವಿಶ್ವಾದ್ಯಂತ ವ್ಯಾಪಿಸಿದ್ದು, ಎಲ್ಲೆಡೆ ಬೃಹತ್ ಮಟ್ಟದಲ್ಲಿ ಯೋಗಾಭ್ಯಾಸ ನಡೆಯುತ್ತಿದೆ. ಯೋಗದ ಮೂಲಕ ಅನೇಕ ರೋಗಗಳನ್ನು ನಿಯಂತ್ರಿಸಲ್ಲಿಡಬಹುದು. ಆರಂಭಿಕ ಹಂತದಲ್ಲಿರುವ ಕೆಲವು ಕಾಯಿಲೆಗಳನ್ನು ತಡೆಗಟ್ಟಲೂ ಯೋಗ ಸಹಕಾರಿಯಾಗಿದೆ. ಆದ್ದರಿಂದ ಪ್ರತಿಯೊಬ್ಬರೂ ಯೋಗಾಭ್ಯಾಸದ ಮೂಲಕ ಆರೋಗ್ಯವಂತರಾಗಲು ಪ್ರಯತ್ನಿಸಬೇಕು ಎಂದು ಕಿವಿಮಾತು ಹೇಳಿದರು.

ಯುವ ಪೀಳಿಗೆ ಜಿಮ್‌ಗಳಿಗೆ ಹೋಗುವುದರಿಂದ ಮಾತ್ರ ಆರೋಗ್ಯ ಉತ್ತಮವಾಗುತ್ತದೆ ಎಂಬ ಭಾವನೆಯಲ್ಲಿ ಮುಳುಗಿದ್ದಾರೆ. ಜಿಮ್‌ನಲ್ಲಿ ದೇಹದಾರ್ಢ್ಯ ಬೆಳೆಸುವುದಕ್ಕಿಂತ ಮನೆಯಲ್ಲಿ ಸ್ವಲ್ಪ ಸಮಯ ಯೋಗಾಭ್ಯಾಸ ಮಾಡುವುದರಿಂದ ಆಯಾಸ ಕಡಿಮೆಯಾಗಿ ನೆಮ್ಮದಿ ದೊರೆಯುತ್ತದೆ. ಜೊತೆಗೆ ಜೀವನದ ಜಂಜಾಟಗಳಿಂದಲೂ ಮುಕ್ತಿ ಹೊಂದ ಬಹುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ 2 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಯೋಗಾಸನ ಮಾಡಿದರು. ಈ ವೇಳೆ ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಅವರು ಯೋಗ ಶಿಬಿರದಲ್ಲಿ ಪಾಲ್ಗೊಂಡು ಯೋಗಾಭ್ಯಾಸ ನಡೆಸಿದರು.

ವೇದಿಕೆಯಲ್ಲಿ ಭಾರತಿ ಅಂಗ ಸಂಸ್ಥೆಗಳ ಮುಖ್ಯಸ್ಥರಾದ ತಮಿಳ್‌ಮಣಿ, ಡಾ. ಚಂದನ್, ಎಸ್.ನಾಗರಾಜು, ಮಂಜು ಜೇಕಬ್, ಡಾ. ಎಂ.ಎಸ್. ಮಹದೇವಸ್ವಾಮಿ, ಮಲ್ಲಿಕಾರ್ಜುನ, ಪಲ್ಲವಿ, ಮಹೇಶ್ ಕುಮಾರ್ ಜಿಲಾನಿ, ಬಾಲಸುಬ್ರಹ್ಮಣ್ಯ, ಜಿ.ಕೃಷ್ಣ, ರಾಜೇಂದ್ರ ರಾಜೇ ಅರಸು, ಡಾ.ಎಸ್.ಎಲ್.ಸುರೇಶ್, ಪುಟ್ಟಸ್ವಾಮಿ, ರಮ್ಯಾ, ಜಗದೀಶ್ ನಂದಾ ಮತ್ತಿತರರಿದ್ದರು.

ಗ್ರಾಮದೇವತೆಪುರದಲ್ಲಿ ಚಿರತೆ ಪ್ರತ್ಯಕ್ಷ

ಚಿರತೆ ಸೆರೆಗೆ ಬೋನ್ ಇಟ್ಟ ಅರಣ್ಯ ಇಲಾಖೆ



ಚಿರತೆ ಸೆರೆಗೆ ಬೋನ್ ಅಳವಡಿಸಿರುವುದು

ಹಲಗೂರು, ಜೂ.21– ಇಲ್ಲಿಗೆ ಸಮೀಪದ ಗ್ರಾಮದೇವತೆಪುರ ಹೊರವಲಯದಲ್ಲಿ ಕೆಲ ದಿನಗಳಿಂದ ಚಿರತೆ ನಿರಂತರವಾಗಿ ಕಾಣಿಸಿ ಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಗ್ರಾಮಸ್ಥರಲ್ಲಿ ಆತಂಕ ಹೆಚ್ಚಾಗಿದ್ದು, ಚಿರತೆ ಸೆರೆ ಹಿಡಿಯಲು ಅರಣ್ಯ ಇಲಾಖೆ ಅಧಿಕಾರಿಗಳು ಬೋನ್ ಇಟ್ಟಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಗ್ರಾಮದಲ್ಲಿ ಚಿರತೆ ಹಾವಳಿ ಹೆಚ್ಚಾಗಿದ್ದು, ಸಾಕು ನಾಯಿಗಳನ್ನು ಬಲಿ ಪಡೆಯುತ್ತಿರುವುದು ಗ್ರಾಮಸ್ಥರ ಭೀತಿಗೆ ಕಾರಣವಾಗಿದೆ. ಶನಿವಾರ ಮುಂಜಾನೆ ಗ್ರಾಮದ ನಿವಾಸಿ ಬಸವರಾಜಮೂರ್ತಿ ಅವರಿಗೆ ಸೇರಿದ ಸಾಕು ನಾಯಿ ಮತ್ತು ಕರು ಮೇಲೆ ಚಿರತೆ ದಾಳಿ ನಡೆಸಿ ತಿಂದು ಪರಾರಿಯಾಗಿದೆ. ಅಲ್ಲದೇ ರಾತ್ರಿ ವೇಳೆ ಕೃಷಿ ಚಟುವಟಿಕೆಗೆ ತೆರಳಲು ರೈತರು ಹೆದರುವಂತಾಗಿದ್ದು, ಜಮೀನುಗಳಿಗೆ ತೆರಳಿ ನೀರು ಹಾಯಿಸಲು ಸಹ ಕಷ್ಟಪಡುತ್ತಿದ್ದಾರೆ. ಮಹಿಳೆಯರು ಮತ್ತು ಮಕ್ಕಳು ಕೂಡ ಸಂಜೆ ಬಳಿಕ ಮನೆಯಿಂದ ಹೊರಬರಲು ಆಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಹಿನ್ನೆಲೆಯಲ್ಲಿ ಗ್ರಾಮಸ್ಥರು ಚಿರತೆ ಸೆರೆ ಹಿಡಿಯುವಂತೆ ಅರಣ್ಯ ಇಲಾಖೆಗೆ ಸಲ್ಲಿಸಿದ್ದ ಮನವಿಗೆ ಸ್ಪಂದಿಸಿದ ಅಧಿಕಾರಿಗಳು, ಗ್ರಾಮದ ಬಸವರಾಜಮೂರ್ತಿ ಅವರ ಜಮೀನಿನಲ್ಲಿ ಬೋನ್ ಅಳವಡಿಸಿ ಚಿರತೆ ಸೆರೆಗೆ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಂಡಿದ್ದಾರೆ. ಹಲಗೂರು ವನ್ಯಜೀವಿ ವಲಯದ ವಲಯ ಅರಣ್ಯಾಧಿಕಾರಿ ಪ್ರಮೋದ್ ಕುಮಾರ್ ದೇವ್ ಮಾಹಿತಿ ನೀಡಿ, ಚಿರತೆ ಯನ್ನು ಸುರಕ್ಷಿತವಾಗಿ ಸೆರೆ ಹಿಡಿಯಲು ಎಲ್ಲಾ ಸಿದ್ಧತೆಗಳನ್ನು ಮಾಡಲಾಗಿದೆ. ಸ್ಥಳದಲ್ಲಿ ನಿಗಾ ವಹಿಸಲು ಸಿಬ್ಬಂದಿ ನಿಯೋಜಿಸಲಾಗಿದ್ದು, ಚಿರತೆಯ ಚಲನವಲನ ಗಳನ್ನು ಗಮನಿಸಲಾಗುತ್ತಿದೆ ಎಂದರು. ಈ ವೇಳೆ ಕಾವೇರಿ ವನ್ಯಜೀವಿ ವಲಯದ ಶಿಂಷಾ ಉಪ ವಲಯ ಅರಣ್ಯಾಧಿಕಾರಿ ಸಾಜು, ಸಿಬ್ಬಂದಿ ಪುನೀತ್ ಸೇರಿದಂತೆ ಇನ್ನಿತರರಿದ್ದರು.

ಒಂದನೇ ಪುಟದಿಂದ

ಜನರಿಂದ ಯೋಗ ಪ್ರದರ್ಶನ

ಸಂಸ್ಕೃತಿ, ಪರಂಪರೆಯೊಂದಿಗೆ ಸಮ್ಮಿಳಿತವಾಗಿದೆ. ಯೋಗ ಭಾರತದ ಸಂಸ್ಕೃತಿಯ ಪ್ರತೀಕವಾಗಿದೆ ಎಂದರು. ನಂತರ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ದೇಶದ ಪ್ರಮುಖ 380 ಸ್ಥಳಗಳಲ್ಲಿ ಇಂದು ಯೋಗ ದಿನವನ್ನು ಆಚರಿಸಲಾಗಿದ್ದು, 1,200 ಶಿಕ್ಷಕರು ಮಾರ್ಗದರ್ಶನ ನೀಡಿದ್ದಾರೆ. ಲಕ್ಷಾಂತರ ಜನ ಯೋಗ ದಿನಾಚರಣೆಯಲ್ಲಿ ಪಾಲ್ಗೊಳ್ಳುವ ಮೂಲಕ ಈ ದಿನವನ್ನು ಸಾರ್ಥಕಗೊಳಿಸಿದ್ದಾರೆ ಎಂದು ಅಭಿಪ್ರಾಯಿಸಿದರು.

45 ನಿಮಿಷ ಯೋಗ: ಇದೇ ವೇಳೆ ಗಿಡ ನೆಟ್ಟು ಪರಿಸರ ಸಂರಕ್ಷಣೆ ಬಗ್ಗೆ ಸಂಸದ ಯದುವೀರ್ ಅವರು ಪ್ರತಿಜ್ಞಾವಿಧಿ ಬೋಧಿಸಿದರು. ಯೋಗ ಗುರುಗಳ ಸಲಹೆಯಂತೆ ಗಣ್ಯರು ಸೇರಿದಂತೆ ಸಾವಿರಾರು ಮಂದಿ 45 ನಿಮಿಷಗಳ ಕಾಲ ಯೋಗ ಪ್ರದರ್ಶನ ನಡೆಸಿದರು.

ಸಂಸದ ಯದುವೀರ್, ಶಾಸಕ ಶ್ರೀವತ್ಸ, ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಪಿ ಸುಂದರ್ ರಾಜ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಅಪರ ಜಿಲ್ಲಾಧಿಕಾರಿ [illegible], ಉಪ ವಿಭಾಗಾಧಿಕಾರಿ ಅವರು ವೇದಿಕೆಯಲ್ಲಿ ಯೋಗದ ವಿವಿಧ ಆಸನಗಳನ್ನು ಪ್ರದರ್ಶಿಸಿದರು. ಪಾದ– ಹಸ್ತಾಸನ, ತ್ರಿಕೋಣಾಸನ, ಭದ್ರಾಸನ, ವಜ್ರಾಸನ, ಭುಜಂಗಾಸನ, ಶಲಭಾಸನ, ಸೇತುಬಂಧಾಸನ, ಶಶಕಾಸನ, ಅರ್ಧ ಹಲಾಸನ ಸೇರಿದಂತೆ ಹತ್ತಾರು ಆಸನಗಳನ್ನು ಪ್ರದರ್ಶಿಸಲಾಯಿತು. ತರುವಾಯ ಯೋಗ ದಿನದಲ್ಲಿ ಭಾಗಿಯಾದ ಎಲ್ಲರಿಗೂ ಉಪಹಾರದ ವ್ಯವಸ್ಥೆ ಮಾಡಲಾಗಿತ್ತು.

ಚೈತನ್ಯಭರಿತ ವೃದ್ಧಾಪ್ಯಕ್ಕೆ 'ಯೋಗ' ಮಂತ್ರ

ಹೆಚ್ಚು ಲವಲವಿಕೆ, 50ರ ವಯಸ್ಸಿನಲ್ಲಿ 30ರ ಹುಮ್ಮಸ್ಸಿಗಿಂತ ಹೆಚ್ಚು ಚೈತನ್ಯ ಹೊಂದಿರಬೇಕು. ಯೋಗವು ಈ ಗುರಿಗಳನ್ನು ಸಾಧಿಸಲು ನೆರವಾಗುವ ಶಕ್ತಿಶಾಲಿ ಸಾಧನವಾಗಿದೆ. ಹೀಗಾಗಿ ಯೋಗವನ್ನು ಜೀವನದ ಭಾಗವಾಗಿಸಿಕೊಳ್ಳಬೇಕು ಎಂದರು.

ಇದೇ ವೇಳೆ ಇತ್ತೀಚಿನ ವರ್ಷಗಳಲ್ಲಿ ಮಧುಮೇಹ, ರಕ್ತದೊತ್ತಡ, ಹೃದಯ ಸಂಬಂಧಿ ಸಮಸ್ಯೆಗಳು, ಸ್ಥೂಲಕಾಯತೆ ಹಾಗೂ ಒತ್ತಡದಿಂದ ಉಂಟಾಗುವ ಅನಾರೋಗ್ಯಗಳು ವೇಗವಾಗಿ ಹೆಚ್ಚುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ ಪ್ರಧಾನಿ, ಇಂತಹ ಜೀವನಶೈಲಿ ಕಾಯಿಲೆಗಳಿಂದ ದೂರವಿರಲು ಯೋಗ ಅತ್ಯಂತ ಪರಿಣಾಮಕಾರಿ ಮಾರ್ಗವಾಗಿದೆ. ನಿಯಮಿತ ಯೋಗಾಭ್ಯಾಸವು ದೇಹದ ಲವಲವಿಕೆ ಹೆಚ್ಚಿಸುವುದರ ಜೊತೆಗೆ ಮಾನಸಿಕ ಆರೋಗ್ಯವನ್ನೂ ಉತ್ತಮಗೊಳಿಸುತ್ತದೆ ಎಂದು ಅಭಿಪ್ರಾಯಪಟ್ಟರು. ಯೋಗವು ಕೇವಲ ದೈಹಿಕ ವ್ಯಾಯಾಮವಲ್ಲ, ಅದು ದೇಹ, ಮನಸ್ಸು ಮತ್ತು ಆತ್ಮದ ನಡುವೆ ಸಮತೋಲನ ಸಾಧಿಸುವ ಸಮಗ್ರ ಜೀವನ ಪದ್ಧತಿ. ಪ್ರತಿದಿನ ಕೆಲ ನಿಮಿಷಗಳ ಯೋಗಾಭ್ಯಾಸ ವ್ಯಕ್ತಿಯಲ್ಲಿ ಆತ್ಮವಿಶ್ವಾಸ ಹೆಚ್ಚಿಸುವುದರ ಜೊತೆಗೆ ಒತ್ತಡ ಮತ್ತು ಆತಂಕವನ್ನು ಕಡಿಮೆ ಮಾಡಲು ಸಹಕಾರಿಯಾಗುತ್ತದೆ. ಯೋಗವು ನಮಗೆ ಆರೋಗ್ಯ ಮಾತ್ರ ನೀಡುವುದಿಲ್ಲ ಅದು ಜೀವನವನ್ನು ನೋಡುವ ದೃಷ್ಟಿಕೋನವನ್ನೂ ಬದಲಿಸುತ್ತದೆ. ಯೋಗದ ಮೂಲಕ ನಾವು ದೈಹಿಕವಾಗಿ ಸದೃಢರಾಗುವುದರ ಜೊತೆಗೆ ಮಾನಸಿಕವಾಗಿ ಶಾಂತ ಮತ್ತು ಸಮತೋಲನ ವ್ಯಕ್ತಿಗಳಾಗುತ್ತೇವೆ. ಕುಟುಂಬದ ಸದಸ್ಯರು, ಮಕ್ಕಳು ಮತ್ತು ಯುವಜನರಲ್ಲಿ ಯೋಗದ ಬಗ್ಗೆ ಆಸಕ್ತಿ ಮೂಡಿಸಿ ಅದನ್ನು ಮುಂದಿನ ಪೀಳಿಗೆಗೆ ತಲುಪಿಸುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದು ಹೇಳಿದರು.

ಧರ್ಮಸ್ಥಳವನ್ನು ಎಳೆಯುವುದು ಬೇಡ

ಧರ್ಮಸ್ಥಳದ ಮಂಜುನಾಥ ಸ್ವಾಮಿ ಸನ್ನಿಧಾನದಲ್ಲಿ, ಒಂದೊಮ್ಮೆ ಅಡ್ಡ ಮತದಾನ ಮಾಡಿದ ವೀರರು ಆಣೆ– ಪ್ರಮಾಣ ಮಾಡಿ ತಾವು ಉಳಿದುಕೊಳ್ಳಲು ತಮ್ಮ ನೈತಿಕ ದಿವಾಳಿತನ ತೋರಿಸಿದರೆ, ಅದರಿಂದ ಅಪಹಾಸ್ಯದ ಪ್ರಮಾಣ ಹೆಚ್ಚಾಗುತ್ತದೆ. ದಯವಿಟ್ಟು ಸ್ವಾಮಿ ಮಂಜುನಾಥನ ಕ್ಷೇತ್ರವನ್ನು ಈ ರೀತಿ ಎಳೆ ಹೆಚ್ಚುವುದು ಯಾವುದೇ ಕಾರಣಕ್ಕೂ ಬೇಡ ಎಂದು ಸಾಮಾಜಿಕ ಮಾಧ್ಯಮದಲ್ಲಿ ಕೇಳಿಕೊಂಡಿದ್ದಾರೆ.

21 ಕೇಂದ್ರಗಳಲ್ಲಿ ನೀಟ್ ಮರುಪರೀಕ್ಷೆ

ಇತರೆ ದಾಖಲೆಗಳನ್ನು ಪರಿಶೀಲನೆ ಮಾಡಿ ವಿದ್ಯಾರ್ಥಿಗಳನ್ನು ಪರೀಕ್ಷಾ ಕೇಂದ್ರಕ್ಕೆ ಬಿಡಲಾಯಿತು. ಹಾಗೆಯೇ ವಿದ್ಯಾರ್ಥಿಗಳಿಗೆ ಮೈಕ್‌ನಲ್ಲಿ ಮಾಹಿತಿ ನೀಡಲಾಗುತ್ತಿತ್ತು. ಜೊತೆಗೆ ಅರೆಸೇನಾ ಪಡೆ ಬೆಂಗಾವಲಿನಲ್ಲಿ ಜಿಪಿಎಸ್ ಇರುವ ವಾಹನದಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಪರೀಕ್ಷಾ ಕೇಂದ್ರಕ್ಕೆ ತಲುಪಿಸಲಾಯಿತು. ನಂತರ ಮಧ್ಯಾಹ್ನ 2 ಗಂಟೆಯಿಂದ ಸಂಜೆ 5.15ರವರೆಗೆ ಯಾವುದೇ ಸಮಸ್ಯೆಯುಂಟಾಗದಂತೆ ನೀಟ್ ಪರೀಕ್ಷೆ ಸುಸೂತ್ರವಾಗಿ ನಡೆಯಿತು.

ಮರು ಪರೀಕ್ಷೆ ಯಶಸ್ವಿ: ಎನ್‌ಟಿಎ (ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ) ನಿಯಮಾವಳಿ ಅನುಸಾರವಾಗಿ ಮೈಸೂರಿನಲ್ಲಿ ನೀಟ್ ಮರು ಪರೀಕ್ಷೆ ಯಶಸ್ವಿಯಾಗಿ ನಡೆದಿದೆ. ಪರೀಕ್ಷಾ ಕೇಂದ್ರಗಳ ಸುತ್ತಲೂ ವ್ಯಾಪಕ ಭದ್ರತೆ ಮತ್ತು ತಪಾಸಣೆ ನಡೆಸಿ, ಯಾವುದೇ ಅಹಿತಕರ ಘಟನೆಗೆ ಅವಕಾಶ ನೀಡದಂತೆ ಪರೀಕ್ಷೆ ನಡೆಸಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಆರ್. ಐಶ್ವರ್ಯ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಧರ್ಮಸ್ಥಳದಲ್ಲಿ ಬಿಜೆಪಿ ಶಾಸಕಾಂಗ ಪಕ್ಷದ ಸಭೆ

ಪಕ್ಷದ ಗೌರವ ಉಳಿಸಬೇಕಿದೆ. ಕಾರ್ಯಕರ್ತರಿಗೆ ನೆಮ್ಮದಿ ನೀಡಬೇಕಿದೆ ಎಂದರು.

ಪಕ್ಷದ ರಾಜ್ಯಾಧ್ಯಕ್ಷನಾಗಿ ಈ ಬೆಳವಣಿಗೆ ನನಗೂ ಸಾಕಷ್ಟು ಬೇಸರ ತಂದಿದೆ. ಇದನ್ನು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗಬೇಕಿದೆ. ಪಕ್ಷದ್ರೋಹ ಮಾಡುವುದು ತಾಯಿಗೆ ದ್ರೋಹ ಮಾಡಿದಂತೆ. ನಾವೆಲ್ಲರೂ ದೇವರನ್ನು ನಂಬುವವರು. ಧರ್ಮಸ್ಥಳದಲ್ಲಿ ಸಭೆ ಕರೆದು ತಾಯಿಗೆ ದ್ರೋಹ ಮಾಡಿದ ಶಾಸಕರ ಬಗ್ಗೆ ತಿಳಿಯಬೇಕಿದೆ. ಶ್ರೀ ಕ್ಷೇತ್ರದಲ್ಲಿ ತೀರ್ಮಾನ ಆಗಬೇಕೆಂದು ನಿರ್ಧಾರ ಮಾಡಿದ್ದೇನೆ. ಮತ್ತೊಂದು ಕಡೆ ಸತ್ಯಶೋಧನಾ ಸಮಿತಿ ಕೂಡಾ ಮಾಡಿದ್ದೇವೆ. ಸಿ.ಟಿ.ರವಿ, ಮಹೇಶ್ ಟೆಂಗಿನಕಾಯಿ, ಮಾಜಿ ಸಚಿವ ಕೊಳ್ಳೇಗಾಲ ಮಹೇಶ್ ಈ ಸಮಿತಿಯಲ್ಲಿದ್ದಾರೆ ತಿಳಿಸಿದರು.

ಮಾಧ್ಯಮದವರ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿ, ನಮ್ಮದು ರಾಷ್ಟ್ರೀಯ ಪಕ್ಷ. ನಾವು ಶಾಸಕರಾಗಿ ಗೆಲ್ಲಲು ಪಕ್ಷದ ಆಶೀರ್ವಾದವಿದೆ. ಕಾರ್ಯಕರ್ತರ ಪರಿಶ್ರಮವೂ ಇದೆ. ಇದರಿಂದ ಕಾರ್ಯಕರ್ತರಿಗೆ ಆಘಾತ, ನೋವಾಗಿದೆ. ಮತದಾರರು ಇವತ್ತು ನರೇಂದ್ರ ಮೋದಿಯವರನ್ನು ನೋಡಿಕೊಂಡು ಮತ ಕೊಟ್ಟಿದ್ದಾರೆ. ನಮ್ಮ ಯೋಗ್ಯತೆ ಒಂದು ಕಡೆ ಬದಿಗಿಡಿ. ಶಾಸಕರು ಯಾರೆಷ್ಟೇ ದೊಡ್ಡವರಾಗಿದ್ದರೂ ಗೌಪ್ಯ ಮತದಾನ ನಡೆದ ಕಾರಣ ನನ್ನನ್ನೂ ಸೇರಿ 63 ಶಾಸಕರನ್ನೂ ಅನುಮಾನ ಪಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಪುಕ್ಕಟ್ಟೆ ಮತ ಹಾಕಿರಲು ಸಾಧ್ಯ ಇಲ್ಲ ಎಂದರು.

ಜಿಪಂ, ತಾಪಂ ಗೆದ್ದು ತೋರಿಸಲಿ: ಬಿಜೆಪಿಯಲ್ಲಿ ಆಮೂಲಾಗ್ರ ಬದಲಾವಣೆ ಆಗಬೇಕು, ವಿಪಕ್ಷ ನಾಯಕನ ಸ್ಥಾನವನ್ನು ಯತ್ನಾಳ್ ಅವರಿಗೆ ಕೊಡಬೇಕೆಂಬ ಮಾಜಿ ಶಾಸಕ ಕುಮಾರ್ ಬಂಗಾರಪ್ಪ ಅವರ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿ, ಯಾರಿಗೆ ಏನು ಉತ್ತರ ಕೊಡಬೇಕೋ ಕೊಡುತ್ತೇನೆ. ಪುಕ್ಕಟ್ಟೆ ಹೇಳಿಕೆ ಕೊಡುವವರು ತಮ್ಮ ಕ್ಷೇತ್ರದಲ್ಲಿ ಜಿಲ್ಲಾ ಪಂಚಾಯತ್ ಚುನಾವಣೆಗೆ ನಿಂತುಕೊಳ್ಳಲಿ. ವಿಧಾನಸಭಾ ಚುನಾವಣೆ ದೂರದ ಮಾತು. ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಚುನಾವಣೆಯಲ್ಲಿ ನಿಂತು ಗೆದ್ದು ತೋರಿಸಲಿ. ಆಮೇಲೆ ಅದರ ಬಗ್ಗೆ ಮಾತನಾಡುವೆ ಎಂದು ಸವಾಲೆಸೆದರು.

ಪರಿಷತ್ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್‌ನಿಂದ ಒಟ್ಟು 11 ಮತಗಳು ಅಡ್ಡ ಮತದಾನವಾಗಿದ್ದು, ಹೀಗಾಗಿ ಜೆಡಿಎಸ್ ಅಭ್ಯರ್ಥಿ ಸೋಲುಂಡಿದ್ದರೆ, ಬಿಜೆಪಿಯ ಎರಡು ಅಭ್ಯರ್ಥಿಗಳ ಪೈಕಿ ಓರ್ವ ಅಭ್ಯರ್ಥಿ ಪ್ರಯಾಸದಲ್ಲಿ ಗೆಲುವು ಪಡೆದಿದ್ದರು.

ಅಡ್ಡಮತದಾನ ಮಾಡಿದವರು ಈ ಜನ್ಮದಲ್ಲಿ ಮತ್ತೆ ಚುನಾವಣೆಯಲ್ಲಿ ಸ್ಪರ್ಧಿಸಲಾರರು

ಬೆಂಗಳೂರು: ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡಮತದಾನ ಮಾಡಿದ ಶಾಸಕರು ಯಾರು ಎಂಬುದನ್ನು ಪತ್ತೆ ಹಚ್ಚಲು ಬಿಜೆಪಿ ಈಗಾಗಲೇ ಸತ್ಯಶೋಧನಾ ಸಮಿತಿ ರಚನೆ ಮಾಡಿದೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಡ್ಡಮತದಾನ ಮಾಡಿದವರನ್ನು ಸುಮ್ಮನೇ ಬಿಡುವುದಿಲ್ಲ. ಬಿಜೆಪಿ ಹಾಗೂ ಜೆಡಿಎಸ್‌ನ 11 ಶಾಸಕರು ಅಡ್ಡಮತದಾನ ಮಾಡಿದ್ದಾರೆ. ಅವರು ಯಾರು ಎಂಬುದನ್ನು ಪತ್ತೆ ಹಚ್ಚುವುದೇ ಒಂದು ಸವಾಲಾಗಿದೆ. ಯಾರನ್ನೇ ಕೇಳಿದರೂ ಧರ್ಮಸ್ಥಳದಲ್ಲಿ ಬಂದು ನಾವು–ಆಣೆ– ಪ್ರಮಾಣ ಮಾಡುತ್ತೇವೆ ಎನ್ನುತ್ತಿದ್ದಾರೆ. ಅದೇ ನಮಗೂ ಆಶ್ಚರ್ಯವೆನಿಸಿದೆ ಎಂದಿದ್ದಾರೆ. ಧರ್ಮಸ್ಥಳದಲ್ಲಿ ಪಕ್ಷದ ವೇದಿಕೆಯಲ್ಲಿಯೇ ಅಡ್ಡಮತದಾನ ಮಾಡಿದವರು ಯಾರೆಂಬುದನ್ನು ಪತ್ತೆ ಹಚ್ಚುತ್ತೇವೆ. ಅವರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ಸರಿಯಾಗಿ ಬುದ್ಧಿ ಕಲಿಸುತ್ತೇವೆ. ಅಡ್ಡಮತದಾನ ಮಾಡಿದವರನ್ನು ಮೊದಲು ಪತ್ತೆಹಚ್ಚಿ ಈ ಬಗ್ಗೆ ಕೇಂದ್ರದ ನಾಯಕರೊಂದಿಗೆ ಚರ್ಚಿಸುತ್ತೇವೆ. ಮುಂದೆ ಯಾರೂ ಯಾವತ್ತೂ ಇಂತಹ ತಪ್ಪು ಮಾಡಬಾರದು. ಈ ಜನ್ಮದಲ್ಲಿ ಆ ಶಾಸಕರು ಚುನಾವಣೆಯಲ್ಲಿ ಸ್ಪರ್ಧಿಸದಂತೆ ಮಾಡುತ್ತೇವೆ ಎಂದು ಗುಡುಗಿದ್ದಾರೆ.

7 ಸಾವು, 46 ಮಂದಿ ಅಸ್ವಸ್ಥ



ಕವಾಟದಿಂದ ಅನಿಲ ಸೋರಿಕೆ ಸಂಭವಿಸಿದೆ ಎಂದು ವರದಿಯಾಗಿದ್ದು, ದುರಂತಕ್ಕೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಮುಖ್ಯಮಂತ್ರಿ ವಿಜಯ್ ಆದೇಶಿಸಿದ್ದಾರೆ ಎಂದು ರಾಜ್ಯ ಐಟಿ ಸಚಿವ ಆರ್.ಕುಮಾರ್ ಹೇಳಿದ್ದಾರೆ.

ಮುಖ್ಯಮಂತ್ರಿಯವರ ನಿರ್ದೇಶನದ ಮೇರೆಗೆ, ಅನಿಲ ಸೋರಿಕೆಯ ತನಿಖೆಗಾಗಿ ಮೂವರು ಸದಸ್ಯರ ಸಮಿತಿಯನ್ನು ರಚಿಸಲಾಗಿದೆ. ಇದು ಕೈಗಾರಿಕಾ ಸುರಕ್ಷತೆ ಮತ್ತು ಆರೋಗ್ಯ ನಿರ್ದೇಶಕರು, ಮಾಲಿನ್ಯ ನಿಯಂತ್ರಣ ಮಂಡಳಿಯ ಸದಸ್ಯ ಕಾರ್ಯದರ್ಶಿ ಮತ್ತು ಸಾರ್ವಜನಿಕ ಆರೋಗ್ಯದ ಹೆಚ್ಚುವರಿ ನಿರ್ದೇಶಕರನ್ನು ಒಳಗೊಂಡಿದೆ. ಸಮಿತಿಯು 24 ಗಂಟೆಗಳ ಒಳಗೆ ಮಧ್ಯಂತರ ವರದಿಯನ್ನು ಮತ್ತು ಮೂರು ದಿನಗಳಲ್ಲಿ ಅಂತಿಮ ವರದಿಯನ್ನು ಸಲ್ಲಿಸಬೇಕೆಂದು ಸೂಚಿಸಲಾಗಿದೆ. ಘಟನೆ ಸಂಬಂಧ ಎಫ್‌ಐಆರ್ ದಾಖಲಿಸಿ, ಸಮುದ್ರಾಹಾರ ಘಟಕದ ಮಾಲೀಕರನ್ನು ಬಂಧಿಸಲಾಗಿದೆ. ರಾಜ್ಯಪಾಲ ರಾಜೇಂದ್ರ ಅರ್ಲೇಕರ್ ಸಂತಾಪ ಸೂಚಿಸಿದ್ದಾರೆ.

ಅಂತೂ ಇಂತೂ 'ನೀಟ್' ಮುಗೀತು

ತಡೆಗಟ್ಟಲು 51,311 ಜ್ಯಾಮರ್‌ಗಳನ್ನು ಹಾಕಲಾಗಿತ್ತು. ಪ್ರತಿ ಪರೀಕ್ಷಾ ಕೇಂದ್ರದಲ್ಲಿ 40 ರಿಂದ 50 ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಪರೀಕ್ಷೆಯನ್ನು ಯಶಸ್ವಿಯಾಗಿ ಮತ್ತು ಪಾರದರ್ಶಕವಾಗಿ ನಡೆಸಲು ಜಿಲ್ಲಾಡಳಿತ, ಪೊಲೀಸ್, ಅರೆಸೇನಾ ಪಡೆ, ಭಾರತೀಯ ವಾಯುಪಡೆ ಹಾಗೂ ಅಂಚೆ ಇಲಾಖೆಯ ಸಹಯೋಗವನ್ನು ಪಡೆಯಲಾಗಿತ್ತು ಎಂದು ಎನ್‌ಟಿಎ ತಿಳಿಸಿದೆ.

ಕಳೆದ ಮೇ 3ರಂದು ನಡೆದಿದ್ದ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯಾದ ಹಿನ್ನೆಲೆಯಲ್ಲಿ ದೇಶದಾದ್ಯಂತ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು. ವಿದ್ಯಾರ್ಥಿ ಸಂಘಟನೆಗಳ ಪ್ರತಿಭಟನೆ ತೀವ್ರಗೊಂಡು, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೂ ಒತ್ತಾಯ ಕೇಳಿಬಂದಿತ್ತು. ತದನಂತರ ಎನ್‌ಟಿಎ ಪರೀಕ್ಷೆಯನ್ನು ರದ್ದುಗೊಳಿಸಿತ್ತು. ಈ ಘಟನೆಗೆ ವಿಷಾದ ವ್ಯಕ್ತಪಡಿಸಿದ್ದ ಕೇಂದ್ರ ಸರ್ಕಾರ, ಪರೀಕ್ಷಾ ವ್ಯವಸ್ಥೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಮತ್ತು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪರೀಕ್ಷೆ ರದ್ದುಗೊಳಿಸಿ, ಮರುಪರೀಕ್ಷೆ ನಡೆಸುವ ನಿರ್ಧಾರ ಕೈಗೊಂಡಿತ್ತು.

ಪರೀಕ್ಷೆ ಹಿಂದಿನ ದಿನ ನೀಟ್ ಆಕಾಂಕ್ಷಿ ಆತ್ಮಹತ್ಯೆ

ಹೈದರಾಬಾದ್: ನೀಟ್–ಯುಜಿ ಮರು ಪರೀಕ್ಷೆ ಬರೆಯಬೇಕಿದ್ದ 19 ವರ್ಷದ ವಿದ್ಯಾರ್ಥಿನಿ ಹೈದರಾಬಾದ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ. ಮಿಯಾಪುರದ ಅಪಾರ್ಟ್‌ಮೆಂಟ್‌ನಲ್ಲಿ ತನ್ನ ಸಹೋದರಿಯರೊಂದಿಗೆ ವಾಸಿಸುತ್ತಿದ್ದ ಯುವತಿ, ಶನಿವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪ್ರಾಥಮಿಕ ತನಿಖೆಯ ಆಧಾರದ ಮೇಲೆ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೃತರು ಬರೆದಿದ್ದಾರೆಂದು ಹೇಳಲಾದ ಡೆತ್ ನೋಟ್ ಅನ್ನು ಪೊಲೀಸರು ವಶಪಡಿಸಿಕೊಂಡಿದ್ದು, ಅದರಲ್ಲಿ 'ತನ್ನ ಸಾವಿಗೆ ಯಾರೂ ಕಾರಣರಲ್ಲ' ಎಂದು ಅವರು ಬರೆದಿದ್ದಾರೆ ಎನ್ನಲಾಗಿದೆ. ನೀಟ್ ಮರು ಪರೀಕ್ಷೆಯ ಒತ್ತಡ ಸಹಿಸಲಾಗದೆ ಅವರು ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ತಡವಾಗಿ ಬಂದು ಪರೀಕ್ಷೆ ಮಿಸ್ ಮಾಡಿಕೊಂಡರು!

ಬೆಂಗಳೂರು: ಬೆಂಗಳೂರಿನಲ್ಲಿ ಮೂವರು ಸೇರಿದಂತೆ ರಾಜ್ಯದ ಅನೇಕ ವಿದ್ಯಾರ್ಥಿಗಳು ನೀಟ್ ಪರೀಕ್ಷೆಯಿಂದ ವಂಚಿತರಾಗಿದ್ದಾರೆ. ಆರ್‌ಸಿ ಕಾಲೇಜು ಪರೀಕ್ಷಾ ಕೇಂದ್ರಕ್ಕೆ ತಡವಾಗಿ ಬಂದ ಓರ್ವ ವಿದ್ಯಾರ್ಥಿನಿ, ಬಂದ್ ಮಾಡಿದ್ದ ಗೇಟ್ ಹಾರಿ ಒಳಹೋಗಲು ಹೋಗಲು ಯತ್ನಿಸಿದರು. ಆದರೆ, ಸಿಬ್ಬಂದಿ ಪರೀಕ್ಷೆ ಬರೆಯಲು ಪ್ರವೇಶ ನಿರಾಕರಿಸಿದ್ದಕ್ಕೆ ಪೋಷಕರು ಗೇಟ್ ಎದುರು ಕಿರುಚಾಡಿ, ಗೇಟ್ ಚೈನ್ ಬಡಿದು ಆಕ್ರೋಶ ಹೊರಹಾಕಿದರು. ಬಸ್ ಮಿಸ್ ಆದ ಕಾರಣಕ್ಕೆ ಮತ್ತೊರ್ವ ವಿದ್ಯಾರ್ಥಿ ಪರೀಕ್ಷಾ ಕೇಂದ್ರಕ್ಕೆ ತಡವಾಗಿ ಬಂದಿದ್ದರು. ಮತ್ತೊಬ್ಬರು ಕಳೆದ ಬಾರಿ ಪರೀಕ್ಷೆಯ ಹಾಲ್ ಟಿಕೆಟ್ ತಂದು ಯಡವಟ್ಟು ಮಾಡಿಕೊಂಡು ಪರೀಕ್ಷೆಯಿಂದ ವಂಚಿತರಾಗಿದ್ದಾರೆ.

ನಮ್ಮ ಡ್ಯಾಂಗಳು ತಮಿಳುನಾಡಿಗೆ ನೀರು ಬಿಡುವ ಅಣೆಕಟ್ಟೆಗಳಾಗಿವೆ

ಕುಮಾರಸ್ವಾಮಿ ಅವರು ಅಭಿಪ್ರಾಯಪಟ್ಟರು. ಕರ್ನಾಟಕಕ್ಕೆ ಎಲ್ಲಾ ಕಡೆಗಳಿಂದಲೂ ನಿರಂತರವಾಗಿ ಅನ್ಯಾಯ ಆಗುತ್ತಿದೆ. ನಮ್ಮ ರಾಜ್ಯದ ಜನರ ಹಣದಲ್ಲಿ ಕೃಷ್ಣರಾಜಸಾಗರ, ಕಬಿನಿ, ಹಾರಂಗಿ, ಹೇಮಾವತಿ ಸೇರಿದಂತೆ ಎಲ್ಲಾ ಅಣೆಕಟ್ಟುಗಳನ್ನು ನಿರ್ಮಾಣ ಮಾಡಿದ್ದೇವೆ. ನಮ್ಮ ಹಣದಲ್ಲಿ ಕಷ್ಟಪಟ್ಟು ಅಣೆಕಟ್ಟೆ ಕಟ್ಟಿಕೊಂಡರೆ ಅವುಗಳನ್ನು ಪಕ್ಕದ ರಾಜ್ಯಗಳಿಗೆ ನೀರು ಬಿಡುವ ಯಂತ್ರಗಳನ್ನಾಗಿ ಮಾಡಿಕೊಂಡಿದ್ದೇವೆ. ಅಂತಹ ಪರಿಸ್ಥಿತಿ ಸೃಷ್ಟಿಯಾಗಲು ರಾಜ್ಯದ ವೈಫಲ್ಯವು ಇದೆ ಎಂದು ಸಚಿವರು ಬೇಸರ ವ್ಯಕ್ತಪಡಿಸಿದರು.

ದೇವೇಗೌಡರು ಈ ದೇಶದ ಪ್ರಧಾನಿ ಆಗುವವರೆಗೂ ನೀರಾವರಿ ವಿಷಯದಲ್ಲಿ ಆಗಿದ್ದ ಅನ್ಯಾಯ ಸರಿಪಡಿಸುವ ಕೆಲಸಗಳು ಆಗಿರಲಿಲ್ಲ. ಈ ರಾಜ್ಯದ ವಿಧಾನಸಭೆಯ ಸದಸ್ಯರಾಗಿದ್ದಾಗಲೇ ಅವರು ಸದನದ ಒಳಗೆ ಮತ್ತು ಹೊರಗೆ ನಿರಂತರ ಹೋರಾಟ ಮಾಡಿ ಕಬಿನಿ, ಹಾರಂಗಿ ಮತ್ತು ಹೇಮಾವತಿ ಅಣೆಕಟ್ಟುಗಳ ನಿರ್ಮಾಣಕ್ಕೆ ಕಾರಣೀಭೂತರಾದರು. ಕೆಲವರು ಇದೇ ವಿಷಯವನ್ನು ರಾಜಕೀಯಕ್ಕಾಗಿ ಬಳಕೆ ಮಾಡಿಕೊಳ್ಳುತ್ತಿರುವುದು ಜನರಿಗೆ ಮಾಡುತ್ತಿರುವ ಅನ್ಯಾಯವಾಗಿದೆ. ನಮ್ಮ ಡ್ಯಾಂಗಳು ಪಕ್ಕದ ತಮಿಳುನಾಡಿಗೆ ನೀರು ಬಿಡುವ ಡ್ಯಾಂಗಳಾಗಿ ಬದಲಾಗಿವೆ ಎಂದು ಅವರು ದೂರಿದರು.

ಮೇಕೆದಾಟು ಯೋಜನೆಗೆ ತಮಿಳುನಾಡು ಅಡ್ಡಗಾಲು ಹಾಕುವ ನಡೆಯನ್ನು ಒಪ್ಪಲು ಸಾಧ್ಯವೇ ಇಲ್ಲ. ನಮ್ಮ ರಾಜ್ಯದ ಪಾಲಿನ ನೀರನ್ನು ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಈ ಯೋಜನೆಯನ್ನು ಅನುಷ್ಠಾನಕ್ಕೆ ತರಬೇಕಿದೆ. ಅತಿ ಮುಖ್ಯವಾಗಿ ಬೆಂಗಳೂರಿನ ಕುಡಿಯುವ ನೀರಿನ ಅಗತ್ಯಕ್ಕೆ ಈ ಅಣೆಕಟ್ಟೆ ನಿರ್ಮಾಣ ಅತ್ಯಂತ ಅಗತ್ಯವಾಗಿದೆ. ಈಗಾಗಲೇ ರಾಜ್ಯವು ಕೇಂದ್ರ ಸರ್ಕಾರಕ್ಕೆ ಯೋಜನಾ ಸಮಗ್ರ ವರದಿ ಸಲ್ಲಿಸಿದೆ. ತಮಿಳುನಾಡು ರಾಜ್ಯದ ಸಹಮತ ಅಗತ್ಯವಿದೆ ಎಂದು ಕೇಂದ್ರ ಸಚಿವರಾದ ಕುಮಾರಸ್ವಾಮಿ ಅವರು ಹೇಳಿದರು.

ಮೇಕೆದಾಟು ಅನುಷ್ಠಾನಕ್ಕೆ ಬಂದರೆ ಎರಡು ರಾಜ್ಯಗಳಿಗೆ ಲಾಭವಾಗಲಿದೆ. ಅಣೆಕಟ್ಟುಗಳಲ್ಲಿ ನೀರು ತುಂಬಿದ ಮೇಲೆ ಹೆಚ್ಚುವರಿ ನೀರು ಆ ರಾಜ್ಯಕ್ಕೆ ಹರಿದು ಹೋಗುತ್ತದೆ. ಅದನ್ನು ತಡೆಯಲು ಆಗುವುದಿಲ್ಲ. ಈ ಸರಳ ವಿಚಾರವನ್ನು ತಮಿಳುನಾಡು ಕಗ್ಗಂಟನ್ನಾಗಿ ಮಾಡುತ್ತಿದೆ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಕುಡಿಯುವ ನೀರಿಗೆ ಮೇಕೆದಾಟು ಯೋಜನೆಯನ್ನು ಅನುಷ್ಠಾನ ಮಾಡುತ್ತಿದ್ದೇವೆ ಎಂದು ನಾವು ಪದೇ ಪದೇ ಹೇಳುತ್ತಿದ್ದೇವೆ. ಅಷ್ಟೇ ಏಕೆ ಡಿಪಿಆರ್ ನಲ್ಲಿಯೂ ನಮೂದಿಸಿದ್ದೇವೆ. ವಸ್ತುಸ್ಥಿತಿ ಹೀಗಿದ್ದ ಮೇಲೆ ನೆರೆರಾಜ್ಯ ತಕರಾರು ಮಾಡುತ್ತಿರುವುದು ಸರಿಯಲ್ಲ. ತಮಿಳುನಾಡಿನ ರಾಜಕೀಯ ಪಕ್ಷಗಳು ಕರ್ನಾಟಕದ ಮೇಲೆ ದಬ್ಬಾಳಿಕೆ ನಡೆಸುವುದನ್ನು ನಿಲ್ಲಿಸಬೇಕು ಎಂದು ಅವರು ತೀಕ್ಷ್ಣವಾಗಿ ಪ್ರಶ್ನೆ ಒಂದಕ್ಕೆ ಉತ್ತರಿಸಿದರು.

ನೀಟ್ ಪರೀಕ್ಷಾರ್ಥಿಗಳಿಗೆ ಶುಭಕೋರಿದ ಕೇಂದ್ರ ಸಚಿವರು: ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ ನೀಡುವ ನೀಟ್ ಪರೀಕ್ಷೆ ಬರೆದ ವಿದ್ಯಾರ್ಥಿಗಳಿಗೆ ಶುಭ ಕೋರಿದ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು, ಪರೀಕ್ಷೆಯನ್ನು ಸುಸೂತ್ರವಾಗಿ ಯಾವುದೇ ಸಮಸ್ಯೆ ಇಲ್ಲದಂತೆ ನಡೆಸಲು ಕೇಂದ್ರ ಸರ್ಕಾರ ಕಠಿಣ ಕ್ರಮಗಳನ್ನು ಕೈಗೊಂಡಿದೆ ಎಂದರು.

ಕಳೆದ ಎರಡು ವರ್ಷದಲ್ಲಿ ನೀಟ್ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿದೆ. ಕೆಲವು ದಿನಗಳ ಹಿಂದೆ ನಡೆದ ಘಟನೆಯಿಂದ ಪರೀಕ್ಷಾರ್ಥಿಗಳು ಆತಂಕಕ್ಕೆ ಒಳಗಾಗಿದ್ದಾರೆ. ಅವರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಸಾಕಷ್ಟು ಮುನ್ನೆಚ್ಚರಿಕೆ ವಹಿಸಿದೆ. ವಿಶೇಷವೆಂದರೆ ಪ್ರಧಾನಮಂತ್ರಿಗಳ ಕಾರ್ಯಾಲಯವೇ ಈ ಬಗ್ಗೆ ನಿಗಾ ವಹಿಸಿದೆ. ಯಾವುದೇ ಗೊಂದಲಕ್ಕೆ ಅವಕಾಶ ಕೊಡದಂತೆ ಪರೀಕ್ಷೆ ನಡೆಸಲಾಗುತ್ತಿದೆ ಎಂದು ಸಚಿವರು ಹೇಳಿದರು.

ಪರೀಕ್ಷೆಗಳು ನಡೆಸುವ ಸಂದರ್ಭದಲ್ಲಿ ಹಲವಾರು ಬಾರಿ ಗೊಂದಲಗಳು ಆಗಿವೆ. ಹಿಂದಿನ ಅನುಭವಗಳನ್ನು ಗಮನದಲ್ಲಿ ಇಟ್ಟುಕೊಂಡು ಈ ಬಾರಿ ಸಾಕಷ್ಟು ಮುಂಜಾಗ್ರತೆ ವಹಿಸಲಾಗಿದೆ. ವೈದ್ಯಕೀಯ ಕೋರ್ಸ್‌ಗಳನ್ನು ಪಡೆಯಲು ಪರೀಕ್ಷೆ ಬರೆದಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಒಳ್ಳೆಯದಾಗಲಿ ಎಂದು ಸಚಿವರು ಹಾರೈಸಿದರು.

ಮೈ.ಚ.ಜಯದೇವ್ ಮಾದರಿ ಸ್ವಯಂಸೇವಕರು

ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಆರ್‌ಎಸ್‌ಎಸ್ ಜೇಷ್ಠ ಪ್ರಚಾರಕ ಸು.ರಾಮಣ್ಣ ಅಭಿಮತ



ಮೈ.ಚ.ಜಯದೇವ್ ಬದುಕು–ನೆನಪು ಕುರಿತಾದ 'ಅವಿಶ್ರಾಂತ ಧ್ಯೇಯಜೀವಿ' ಪುಸ್ತಕವನ್ನು ಆರ್‌ಎಸ್‌ಎಸ್ ಜೇಷ್ಠ ಪ್ರಚಾರಕ ಸು.ರಾಮಣ್ಣ, ಉದ್ಯಮಿ ಜಗ್ನನಾಥ್ ಶೆಣೈ ಬಿಡುಗಡೆಗೊಳಿಸಿದರು.

> ಆರ್‌ಎಸ್‌ಎಸ್‌ನಲ್ಲಿ ಎಲ್ಲರೂ ಸಮಾನರು. ಇಲ್ಲಿ ಯಾವುದೇ ಧರ್ಮ, ಜಾತಿಯ ಸೋಂಕಿಲ್ಲದೆ ಶಾಖೆಗಳಲ್ಲಿ ಭಾಗವಹಿಸಬಹುದು. ನನ್ನ ಮತ್ತು ಮೈ.ಚ. ಜಯದೇವ ಅವರ ಮನೆ ಮೈಸೂರಿನ ರಾಮಾನುಜಂ ರಸ್ತೆಯ ಅಕ್ಕ–ಪಕ್ಕದಲ್ಲೇ. ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗಿಯಾಗುತ್ತಿದ್ದ ಮೈ.ಚ.ಜಯದೇವರಿಂದ ಆಕರ್ಷಿತನಾಗಿ ಅಂದಿನಿಂದ ಆರ್‌ಎಸ್‌ಎಸ್ ಸಕ್ರಿಯ ಕಾರ್ಯಕರ್ತನಾಗಿ ವಿವಿಧ ವಿಭಾಗದಲ್ಲಿ ಕಾರ್ಯ ನಿರ್ವಹಿಸಿದ್ದೇನೆ.
> –ಸು.ರಾಮಣ್ಣ, ಜೇಷ್ಠ ಪ್ರಚಾರಕರು, ಆರ್‌ಎಸ್‌ಎಸ್

ಮೈಸೂರು, ಜೂ.21(ಎಸ್‌ಪಿಎನ್)– ರಾಷ್ಟ್ರೀಯ ಸ್ವಯಂ ಸೇವಕ ಸಂಘ(ಆರ್‌ಎಸ್‌ಎಸ್) ಅನಿವಾರ್ಯ ಎಂಬ ಸತ್ಯಕ್ಕೆ ಅಂಟಿಕೊಂಡು ಬಾಳಿ–ಬದುಕಿದ ಮೈ.ಚ.ಜಯದೇವ್ ಅವರು, ಓರ್ವ ಮಾದರಿ ಸ್ವಯಂ ಸೇವಕರಾಗಿದ್ದರು ಎಂದು ಆರ್‌ಎಸ್‌ಎಸ್ ಜೇಷ್ಠ ಪ್ರಚಾರಕ ಸು.ರಾಮಣ್ಣ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯ ಮಾಧವ ಕೃಪಾ ಆವರಣದಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಮೈಸೂರು ಘಟಕ ಹಾಗೂ ರಾಷ್ಟ್ರೋತ್ಥಾನ ಸಾಹಿತ್ಯ, ವನವಾಸಿ, ಕಲ್ಯಾಣ, ಮಂಥನ ಮೈಸೂರು ಸಹಯೋಗದೊಂದಿಗೆ ಏರ್ಪಡಿಸಿದ್ದ ಮೈ.ಚ. ಜಯದೇವ ಬದುಕು–ನೆನಪು ಕುರಿತಾದ 'ಅವಿಶ್ರಾಂತ ಧ್ಯೇಯಜೀವಿ' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಮೈ.ಚ.ಜಯದೇವ್ ಅವರು, ಸದಾ ಸಂಘಂ ಶರಣಂ ಗಚ್ಛಾಮಿ', 'ಧರ್ಮಂ ಶರಣಂ ಗಚ್ಛಾಮಿ' ಇದು ಅವರ ಬಾಳಸೂತ್ರ ಸಮರ್ಪಣೆಯಲ್ಲಿ ಜೀವನದ ಸಾರ್ಥಕತೆಯನ್ನು ಕಂಡುಕೊಂಡ ಒಬ್ಬ ಸಾಧಕ, ಧ್ಯೇಯಜೀವಿ. ಸಣ್ಣ ಚೌಕಟ್ಟನ್ನು ದಾಟಿ ದೇಶಕ್ಕಾಗಿ, ಸಮಾಜಕ್ಕಾಗಿ ಏನಾದರೂ ಮಾಡಬೇಕೆಂಬ ಸಂವೇದನ ಶೀಲರೆಲ್ಲರಿಗೂ ಈ ಪುಸ್ತಕ ಸರಿದಾರಿಯನ್ನು ತೋರುತ್ತದೆ ಎಂದರು.

ಒಮ್ಮೆ ಓದಿ ಗೂಡಿಗೆ ಸೇರುವ ಪುಸ್ತಕ ಇದಲ್ಲ. ಸಾಧಕನ ಜೀವನದಲ್ಲಿ ಬರಬಹುದಾದ ಅನುಮಾನ, ಸಂದೇಹ, ಭ್ರಮೆ, ನಿರಾಸೆ ಇತ್ಯಾದಿ ನಕಾರಾತ್ಮಕ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ಪುಸ್ತಕ ಇದಾಗಿದೆ. ಸಂಘದೊಳಗೆ ಬಂದು ನೋಡಿದವರಿಗೆ ಸಂಘದ ವೈಶಿಷ್ಟ್ಯ ಗೋಚರವಾಗುತ್ತದೆ. ಇಲ್ಲಿ ವ್ಯಕ್ತಿಪೂಜೆಗೆ ಅವಕಾಶ ಇಲ್ಲ. ಜೊತೆಗೆ ತನ್ನನ್ನು ಬಣ್ಣಿಸಿಕೊಳ್ಳುವಂತಹ ಆತ್ಮಸ್ತುತಿ ಸೆಳೆತಕ್ಕೆ ಸ್ವಯಂಸೇವಕರು ಬಲಿಯಾಗುವುದಿಲ್ಲ. ಇಲ್ಲಿ ಎಷ್ಟೇ ದೊಡ್ಡ ವ್ಯಕ್ತಿಯಾದರೂ ಇಂದ್ರ–ಚಂದ್ರ ಎಂಬುದಾಗಿ ಹೊಗಳುವುದಿಲ್ಲ. ಜೊತೆಗೆ ತನ್ನನ್ನು ಬಣ್ಣಿಸಿಕೊಳ್ಳುವಂತಹ ಆತ್ಮಸ್ತುತಿಯ ಸೆಳೆತಕ್ಕೂ ಸ್ವಯಂಸೇವಕ ಬಲಿಯಾಗುವುದಿಲ್ಲ. ಹಾಗಾಗಿ ಈ ಪುಸ್ತಕದಲ್ಲಿ ಹೊಗಳಿಕೆ–ತೆಗಳಿಕೆಗೂ ಜಾಗವಿಲ್ಲ. ಈ ಪುಸ್ತಕದಲ್ಲಿರುವುದು ಮೈ.ಚ.ಜಯದೇವರ ಸಂಘ ಸಮರ್ಪಿತ ವ್ಯಕ್ತಿತ್ವ ಎಂದರು.

ಅವಿವಾಹಿತರಾಗಿದ್ದ ಮೈ.ಚ.ಜಯದೇವರು, 4 ದಶಕಗಳ ಕಾಲ ಸಾಮಾಜಿಕ ಜೀವನದಲ್ಲಿ ಸಕ್ರಿಯರಾಗಿದ್ದರು. 1995ರಲ್ಲಿ ಸಂಘದ ಪ್ರಚಾರಕರಾಗಿದ್ದರು. ಬಳಿಕ ಕೇಶವಕೃಪಾವನ್ನು ಕೇಂದ್ರವಾಗಿಸಿಕೊಂಡು ಸ್ವಯಂ ಸೇವಕರಿಗೆ ಮಾರ್ಗದರ್ಶನ ನೀಡುತ್ತಿದ್ದರು. 2002ರಲ್ಲಿ ಸಹ ಕ್ಷೇತ್ರಿಯ ಪ್ರಚಾರಕ, 2004ರಲ್ಲಿ ಕ್ಷೇತ್ರಿಯ ಪ್ರಚಾರಕರಾಗಿ, 2015ರಿಂದ ಹಿರಿಯ ಪ್ರಚಾರಕರಾಗಿ ಸಂಘಟನೆ ಮಾರ್ಗದರ್ಶನ ಮಾಡಿದ್ದ ಸಂದರ್ಭವನ್ನು ನೆನೆದರು.

1965ರಲ್ಲಿ ರಾಷ್ಟ್ರೋತ್ಥಾನ ಪರಿಷತ್ ಸ್ಥಾಪನೆ ವೇಳೆ ಪ್ರಮುಖ ಪಾತ್ರವಹಿಸಿದ್ದ ಅವರು, ಪರಿಷತ್‌ನ ಸಮಗ್ರ ವಿಕಾಸದ ಎಲ್ಲಾ ಹಂತಗಳಲ್ಲಿಯೂ ಮಾರ್ಗದರ್ಶಕರಾಗಿ ಕೆಲಸ ಮಾಡಿದ್ದರು. 1965ರಿಂದ 3 ದಶಕಗಳ ಕಾಲ ಪರಿಷತ್‌ನ ಪ್ರಧಾನ ವ್ಯವಸ್ಥಾಪಕರಾಗಿ ಶಿಕ್ಷಣ, ಆರೋಗ್ಯ, ಸಾಹಿತ್ಯ ಸೇವೆ ಮೂಲಕ ಪರಿಷತ್ ಬೆಳವಣಿಗೆಯಲ್ಲಿ ಇವರ ಕೊಡುಗೆ ಅಪಾರ. ಅಲ್ಲದೆ, ವನವಾಸಿ ಕಲ್ಯಾಣ ಆಶ್ರಮ'ವು ರಾಜ್ಯದಲ್ಲಿ ಸ್ಥಾಪನೆಗೊಂಡ ದಿನದಿಂದಲೂ ಅದರ ಸಂಘಟನಾತ್ಮಕ ಬೆಳವಣಿಗೆಯಲ್ಲಿ ಅವರ ಸೇವೆ ಗಣನೀಯ ಕೊಡುಗೆ ಇದೆ. ತುರ್ತು ಪರಿಸ್ಥಿತಿ ವೇಳೆ ಬೆಂಗಳೂರಿನ ಬಸವನಗುಡಿಯ ಮೊದಲ ತಂಡದಲ್ಲಿ ಸತ್ಯಾಗ್ರಹ ನಡೆಸಿ 1975ರ ನವೆಂಬರ್‌ನಲ್ಲಿ ಬಂಧಿತರಾಗಿ ಜೈಲುವಾಸ ಅನುಭವಿಸಿದರು. ಉದ್ಯಮಿ ಜಗ್ನನಾಥ್ ಶೆಣೈ ಅವರು, ಮೈ.ಚ.ಜಯದೇವ ಬದುಕು–ನೆನಪು ಕುರಿತಾದ 'ಅವಿಶ್ರಾಂತ ಧ್ಯೇಯಜೀವಿ' ಪುಸ್ತಕ ಬಿಡುಗಡೆಗೊಳಿಸಿದರು. ಹಿರಿಯ ಬರಹಗಾರ ಡಾ.ರಂಗನಾಥ್ ನಿರೂಪಿಸಿದರು.

ಒಗ್ಗಟ್ಟಿನ ಕೊರತೆಯಿಂದ ರಾಜಕೀಯವಾಗಿ ಸಫಲರಾಗದ ದಲಿತ ಸಮುದಾಯ

ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ಮಾಜಿ ಸಚಿವ ಬಿ.ಸೋಮಶೇಖರ್ ವಿಷಾದ



ಮೈಸೂರಿನಲ್ಲಿ ರಂಗಾಯಣದ ಬಿ.ವಿ.ಕಾರಂತ ರಂಗ ಚಾವಡಿಯಲ್ಲಿ ಚಾರ್ವಾಕ ಸಂಸ್ಥೆಯ ವತಿಯಿಂದ 'ಡಾ ಬಾಬಾ ಸಾಹೇಬ ಅಂಬೇಡ್ಕರ್ ಅವರ 'ಅಸ್ಪೃಶ್ಯರು ಆಳುವ ವರ್ಗವಾಗಬೇಕು' ಎಂಬ ಕನಸನ್ನು ನನಸು ಮಾಡಲು ಎಡ–ಬಲ ಸಮುದಾಯಗಳ ಜವಾಬ್ದಾರಿ' ವಿಷಯ ಕುರಿತು ಆಯೋಜಿಸಿದ್ದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಮಾಜಿ ಸಚಿವ ಬಿ.ಸೋಮಶೇಖರ್ ಉದ್ಘಾಟಿಸಿದರು.

ಮೈಸೂರು,ಜೂ.21(ಜಿಎ)–ಡಾ. ಬಿ.ಆರ್. ಅಂಬೇಡ್ಕರ್ ಅವರು ದಲಿತರು ಹಾಗೂ ಶೋಷಿತ ಸಮುದಾಯಗಳು, ರಾಜಕೀಯ ಅಧಿಕಾರವನ್ನು ಪಡೆದು ಆಳುವ ವರ್ಗವಾಗಿ ಬೆಳೆಯಬೇಕು ಎಂಬ ಕನಸು ಕಂಡಿದ್ದರು. ಆದರೆ ಒಗ್ಗಟ್ಟಿನ ಕೊರತೆಯಿಂದ ಸ್ವಾತಂತ್ರ್ಯ ಬಂದ ಬಳಿಕವೂ ದಲಿತ ಸಮುದಾಯ ರಾಜಕೀಯವಾಗಿ ನಿರೀಕ್ಷಿತ ಮಟ್ಟದಲ್ಲಿ ಸಬಲವಾಗಿಲ್ಲ ಎಂದು ಮಾಜಿ ಸಚಿವ ಬಿ.ಸೋಮಶೇಖರ್ ವಿಷಾದ ವ್ಯಕ್ತಪಡಿಸಿದರು.

ಮೈಸೂರಿನಲ್ಲಿ ರಂಗಾಯಣದ ಬಿ.ವಿ. ಕಾರಂತ ರಂಗ ಚಾವಡಿಯಲ್ಲಿ ಚಾರ್ವಾಕ ಸಂಸ್ಥೆ ವತಿಯಿಂದ 'ಡಾ.ಬಾಬಾ ಸಾಹೇಬ ಅಂಬೇಡ್ಕರ್ ಅವರ 'ಅಸ್ಪೃಶ್ಯರು ಆಳುವ ವರ್ಗವಾಗಬೇಕು' ಎಂಬ ಕನಸನ್ನು ನನಸು ಮಾಡಲು ಎಡ–ಬಲ ಸಮುದಾಯಗಳ ಜವಾಬ್ದಾರಿ' ವಿಷಯ ಕುರಿತು ಆಯೋಜಿಸಿದ್ದ ರಾಜ್ಯಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಅಂಬೇಡ್ಕರ್ ಅವರು ತಮ್ಮ ವೈಯಕ್ತಿಕ ಹಿತಾಸಕ್ತಿಗಾಗಿ ಶಿಕ್ಷಣ ಪಡೆದವರಲ್ಲ. ಶೋಷಿತ ಸಮಾಜವನ್ನು ಮೇಲಕ್ಕೆತ್ತುವ ಉದ್ದೇಶದಿಂದ ವಿಶ್ವದ ವಿವಿಧ ರಾಷ್ಟ್ರಗಳ ಸಂವಿಧಾನಗಳನ್ನು ಅಧ್ಯಯನ ಮಾಡಿ ಭಾರತೀಯ ಸಂವಿಧಾನವನ್ನು ರಚಿಸಿದರು ಎಂದು ಹೇಳಿದರು.

ಸಂವಿಧಾನದಲ್ಲಿ ಸಮಾನತೆ, ಸ್ವಾತಂತ್ರ್ಯ, ಸಹೋದರತ್ವ ಹಾಗೂ ಮೂಲಭೂತ ಹಕ್ಕುಗಳಂತಹ ಮೌಲ್ಯಗಳನ್ನು ಅಳವಡಿಸಿರುವ ಅಂಬೇಡ್ಕರ್, ದಲಿತ ಸಮುದಾಯಕ್ಕೆ ಸಂವಿಧಾನವನ್ನೇ ಶಕ್ತಿಯುತ ಆಯುಧವಾಗಿ ನೀಡಿದ್ದಾರೆ ಎಂದು ಅವರು ಅಭಿಪ್ರಾಯಪಟ್ಟರು.

ಸ್ವಾತಂತ್ರ್ಯ ನಂತರ ನಡೆದ ಅನೇಕ ಲೋಕಸಭೆ ಹಾಗೂ ವಿಧಾನಸಭೆ ಚುನಾವಣೆಗಳಲ್ಲಿಯೂ ದಲಿತ ಸಮುದಾಯ ತನ್ನ ಮತದ ಶಕ್ತಿಯನ್ನು ಸಮರ್ಪಕವಾಗಿ ಬಳಸಿಕೊಂಡಿಲ್ಲ. ಪರಿಣಾಮವಾಗಿ ರಾಜಕೀಯವಾಗಿ ಇನ್ನೂ ಇತರರ ಮೇಲೆ ಅವಲಂಬಿತವಾಗಿರುವ ಸ್ಥಿತಿ ಮುಂದುವರಿದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಇಂದು ದಲಿತ ಸಮುದಾಯದಲ್ಲಿ ಸಾವಿರಾರು ವೈದ್ಯರು, ಇಂಜಿನಿಯರ್‌ಗಳು, ಪ್ರಾಧ್ಯಾಪಕರು, ಐಎಎಸ್, ಐಪಿಎಸ್ ಅಧಿಕಾರಿಗಳು, ಸಾಹಿತಿಗಳು ಹಾಗೂ ಬುದ್ಧಿಜೀವಿಗಳು ಇದ್ದರೂ ರಾಜಕೀಯ ನಾಯಕತ್ವದ ವಿಚಾರದಲ್ಲಿ ಒಗ್ಗಟ್ಟು ಕಾಣುತ್ತಿಲ್ಲ. ಇದರಿಂದ ಸಮುದಾಯದ ರಾಜಕೀಯ ಪ್ರಭಾವ ಕುಂಠಿತವಾಗಿದೆ ಎಂದು ಹೇಳಿದರು.

ಆರ್‌ಎಸ್‌ಎಸ್ ಹಾಗೂ ಬಿಜೆಪಿ ಸಂಘಟನಾ ಶಕ್ತಿಯನ್ನು ಉದಾಹರಣೆಯಾಗಿ ಉಲ್ಲೇಖಿಸಿದ ಅವರು, ವೈಯಕ್ತಿಕ ಭಿನ್ನಾಭಿಪ್ರಾಯಗಳಿದ್ದರೂ ಸಿದ್ಧಾಂತದ ಆಧಾರದ ಮೇಲೆ ಅವರು ಒಗ್ಗಟ್ಟಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ ದಲಿತ ಸಂಘಟನೆಗಳು ವಿಭಜನೆಯ ದಾರಿಯಲ್ಲಿ ಸಾಗುತ್ತಿರುವುದು ಸಮುದಾಯದ ಹಿತಾಸಕ್ತಿಗೆ ಧಕ್ಕೆ ತರುತ್ತಿದೆ ಎಂದು ಹೇಳಿದರು.

ತಮ್ಮ ರಾಜಕೀಯ ಜೀವನದ ಅನುಭವ ಹಂಚಿಕೊಂಡ ಅವರು, ಸಚಿವರಾಗಿದ್ದ ಅವಧಿಯಲ್ಲಿ ಯಾವುದೇ ಭ್ರಷ್ಟಾಚಾರಕ್ಕೆ ಅವಕಾಶ ನೀಡದೆ ಸಂವಿಧಾನದ ಆಶಯಗಳಂತೆ ಆಡಳಿತ ನಡೆಸಿದ್ದೇನೆ. ಆದರೆ ಸಮುದಾಯದೊಳಗಿನ ಮಾನಸಿಕ ದೌರ್ಬಲ್ಯ ಹಾಗೂ ಪರಸ್ಪರ ಬೆಂಬಲದ ಕೊರತೆಯಿಂದ ದಲಿತ ನಾಯಕತ್ವ ಬೆಳೆಯಲು ಅಡ್ಡಿಯಾಗುತ್ತಿದೆ ಎಂದರು.

ಸಮುದಾಯದ ಎಲ್ಲಾ ವರ್ಗದ ವಿದ್ಯಾವಂತರು, ಯುವಕರು ಹಾಗೂ ಸಂಘಟನೆಗಳು ಅಂಬೇಡ್ಕರ್ ಅವರ ಆಶಯಗಳನ್ನು ಅರ್ಥಮಾಡಿಕೊಂಡು ರಾಜಕೀಯ ಸಬಲೀಕರಣದತ್ತ ಹೆಜ್ಜೆ ಇಡಬೇಕು. ಮತದ ಶಕ್ತಿಯನ್ನು ಅರಿತು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಿದರೆ ಮಾತ್ರ ದಲಿತರು ಆಳುವ ವರ್ಗವಾಗಿ ಹೊರಹೊಮ್ಮಲು ಸಾಧ್ಯ ಎಂದು ಬಿ.ಸೋಮಶೇಖರ್ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಡಿಎಸ್‌ಎಸ್ ಹಿರಿಯ ಮುಖಂಡ ಹರಿಹರ ಆನಂದಸ್ವಾಮಿ, ರಾಜ್ಯ ಸಂಚಾಲಕ ದೇವಗಳ್ಳಿ ಸೋಮಶೇಖರ್, ದೇವರತ್ನ ಫೌಂಡೇಶನ್ ಅಧ್ಯಕ್ಷ ಶಿವಪ್ರಸಾದ್ ಎಂ.ಸಿ.ಹುಂಡಿ, ಸಂಘಟಕ ನಾಗರಾಜ್ ಅಂಬೇಡ್ಕರ್, ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

ಡಾ.ಲಕ್ಷ್ಮೀನಾರಾಯಣ್, ಡಾ.ಸೂರಜ್ ಅವರ 'ಮಧುಮೇಹ ಮನುಕುಲದ ಅಗೋಚರ ಶತ್ರು' ಕೃತಿ 9ನೇ ಆವೃತ್ತಿ ಬಿಡುಗಡೆ

ತಪ್ಪಾದ ಜೀವನ ಶೈಲಿಯಿಂದ ಖಾಯಿಲೆಗಳು ಭಾದಿಸುತ್ತಿವೆ: ಸಂಸದ ಯದುವೀರ್ ಒಡೆಯರ್



ಗಾನಭಾರತಿ ಸಭಾಂಗಣದಲ್ಲಿ ಮಧುಮೇಹ ತಜ್ಞ ಡಾ.ವಿ.ಲಕ್ಷ್ಮೀನಾರಾಯಣ, ಡಾ.ಸೂರಜ್ ತೇಜಸ್ವಿ ರಚಿಸಿರುವ 'ಮಧುಮೇಹ ಮನುಕುಲದ ಅಗೋಚರ ಶತ್ರು' ಕೃತಿಯ 9ನೇ ಮುದ್ರಣವನ್ನು ಭಾನುವಾರ ಸಂಸದ ಯದುವೀರ್ ಲೋಕಾರ್ಪಣೆಗೊಳಿಸಿದರು.

ಮೈಸೂರು, ಜೂ.21(ಜಿಎ)–ಮೈಸೂರಿನ ಕುವೆಂಪುನಗರದ ಗಾನಭಾರತಿ ಸಭಾಂಗಣದಲ್ಲಿ ಭಾನುವಾರ ಮಧುಮೇಹ ತಜ್ಞ ಡಾ.ವಿ. ಲಕ್ಷ್ಮೀನಾರಾಯಣ ಹಾಗೂ ಡಾ.ಸೂರಜ್ ತೇಜಸ್ವಿ ರಚಿಸಿರುವ 'ಮಧುಮೇಹ ಮನುಕುಲದ ಅಗೋಚರ ಶತ್ರು' ಕೃತಿಯ 9ನೇ ಮುದ್ರಣವನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಲೋಕಾರ್ಪಣೆಗೊಳಿಸಿದರು.

ನಂತರ ಮಾತನಾಡಿದ ಅವರು, ಸಾಂಸ್ಕೃತಿಕ ಕ್ಷೇತ್ರದಲ್ಲಿ, ಪಾರಂಪರಿಕ ವೈದ್ಯ ಪದ್ಧತಿಯಲ್ಲಿ ನಾವು ಹಿಂದಿನಿಂದಲೂ ಭಾರತ ಅತ್ಯಂತ ಪ್ರಾತಿಯ ದೇಶ. ಆದರೆ, ಆಧುನಿಕ ಕಾಲದಲ್ಲಿ ಅನುಸರಿಸುತ್ತಿರುವ ತಪ್ಪಾದ ಜೀವನಶೈಲಿಯಿಂದ ಅನೇಕ ಕಾಯಿಲೆಗಳು ಬಾಧಿಸುತ್ತಿವೆ. ಆರೋಗ್ಯಕರ ಜೀವನಕ್ಕೆ ಪೌಷ್ಟಿಕ ಆಹಾರ, ವ್ಯಾಯಾಮ ಮತ್ತು ಅಗತ್ಯವಿದ್ದಾಗ ಔಷಧ ಎಂಬ ತತ್ವ ಅನುಸರಿಸುವುದು ಉತ್ತಮ ಎಂದು ಹೇಳಿದರು.

ವೈದ್ಯಕೀಯ ಕ್ಷೇತ್ರ ಸಾಕಷ್ಟು ಅಭಿವೃದ್ಧಿ ಹೊಂದುತ್ತಿದೆ. ಈ ಅಭಿವೃದ್ಧಿಯ ಫಲವನ್ನು ಸಮಸ್ಯೆ ಬಂದಾಗ ಬಳಸಬೇಕೇ ಹೊರತು, ಚೆನ್ನಾಗಿರುವಾಗಲೇ ಕ್ಷುಲ್ಲಕ ಕಾರಣಗಳಿಗೆ ಔಷಧಗಳನ್ನು ಅವಲಂಬಿಸಬಾರದು. ಡಾ.ಲಕ್ಷ್ಮೀನಾರಾಯಣ ಅವರ ಕೃತಿಯು ಮಧುಮೇಹ ಸಮಸ್ಯೆ ಅರಿಯುವಲ್ಲಿ, ನಿಯಂತ್ರಿಸುವಲ್ಲಿ ಸಹಕಾರಿಯಾಗಿದೆ ಎಂದರು.

ಆರೋಗ್ಯವಂತ ಸಮಾಜ ನಿರ್ಮಾಣವು ನಮ್ಮ ಕೈಯಲ್ಲಿಯೇ ಇದೆ. ದಿನನಿತ್ಯ ಜೀವನದಲ್ಲಿ ಸಣ್ಣಪುಟ್ಟ ಬದಲಾವಣೆಗಳಿಂದ ಇದು ಸಾಧ್ಯ. ದೇಶದ ಸಮಗ್ರ ಆರ್ಥಿಕ ಅಭಿವೃದ್ಧಿಯು ಕೇಂದ್ರ ಸರ್ಕಾರ ಹಾಗೂ ಪ್ರಧಾನಿ ನರೇಂದ್ರ ಮೋದಿ ಗುರಿಯಾಗಿದ್ದು, ಉತ್ತಮ ಆರೋಗ್ಯ ಹೊಂದುವುದೇ ನಾವು ದೇಶಕ್ಕೆ ನೀಡುವ ದೊಡ್ಡ ಕೊಡುಗೆ ಎಂದರು.

ಈ ವೇಳೆ ಕಾರ್ಯಕ್ರಮದಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪೂರ್ವಾಧ್ಯಕ್ಷ ಪ್ರಧಾನ ಗುರುದತ್ತ ಕೃತಿ ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ಕುವೆಂಪು ವಿಶ್ವವಿದ್ಯಾ ಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಚಿದಾನಂದಗೌಡ, ಶಾಸಕ ಟಿ.ಎಸ್. ಶ್ರೀವತ್ಸ, ವಿಧಾನಪರಿಷತ್ ಸದಸ್ಯ ರಘು ಆರ್. ಕೌಟಿಲ್ಯ, ಹಿರಿಯ ಪತ್ರಕರ್ತ ರವೀಂದ್ರ ಭಟ್ಟ, ಚುಟುಕು ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಎಂಜಿಆರ್ ಅರಸ್, ಕೃತಿಯ ಕರ್ತೃಗಳಾದ ಮಧುಮೇಹ ತಜ್ಞ ಡಾ.ವಿ. ಲಕ್ಷ್ಮೀನಾರಾಯಣ್ ಉಪಸ್ಥಿತರಿದ್ದರು.

ಮೈಸೂರು ಜೈಲಿನಲ್ಲಿ ಯೋಗಾಭ್ಯಾಸ



ಮೈಸೂರಿನ ಕೇಂದ್ರ ಕಾರಾಗೃಹದಲ್ಲಿ ಭಾನುವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಬಂಧಿಗಳು, ಕಾರಾಗೃಹದ ಅಧಿಕಾರಿಗಳು ಸಾಮೂಹಿಕ ಯೋಗ ಪ್ರದರ್ಶನ ನೀಡಿದರು.

ಮೈಸೂರು, ಜೂ.21(ಎಂಟಿವೈ)– ಮೈಸೂರಿನ ಕೇಂದ್ರ ಕಾರಾಗೃಹದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಕೈದಿಗಳು ಪಾಲ್ಗೊಂಡು ಯೋಗಾಭ್ಯಾಸ ಮಾಡಿದರು.

ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆ, ಆಯುಷ್ ಇಲಾಖೆ, ಆರ್ಟ್ ಆಫ್ ಲಿವಿಂಗ್ ಸಹಯೋಗದಲ್ಲಿ ಮೈಸೂರು ಕೇಂದ್ರ ಕಾರಾಗೃಹದ ಆವರಣದಲ್ಲಿ ಭಾನುವಾರ ಆಯೋಜಿಸಿದ್ದ ಯೋಗ ದಿನದ ಕಾರ್ಯಕ್ರಮಕ್ಕೆ ಕಾರಾಗೃಹದ ಮುಖ್ಯ ಅಧೀಕ್ಷಕ ವಿ.ಶೇಷುಮೂರ್ತಿ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಯೋಗಾಭ್ಯಾಸ ಮಾಡುವುದರಿಂದ ಮಾನಸಿಕ ಹಾಗೂ ದೈಹಿಕ ಆರೋಗ್ಯ ಕಾಪಾಡಿಕೊಳ್ಳಬಹುದಾಗಿದೆ. ಯೋಗದಿಂದ ಮಾನಸಿಕ ನೆಮ್ಮದಿ, ಆತ್ಮವಿಶ್ವಾಸದೊಂದಿಗೆ ಸಕಾರಾತ್ಮಕ ಚಿಂತನೆ ಬೆಳೆಸಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಪ್ರತಿದಿನ ನಿಯಮಿತವಾಗಿ ಯೋಗಾಭ್ಯಾಸ ಮಾಡುವ ಹವ್ಯಾಸ ರೂಡಿಸಿಕೊಳ್ಳಬೇಕು. ಬಂಧಿಗಳು ಯೋಗ ಮಾಡುವುದರಿಂದ ಮಾನಸಿಕ ಆರೋಗ್ಯ ಉತ್ತಮವಾಗುತ್ತದೆ. ಒತ್ತಡ ನಿವಾರಣೆಯಾಗಿ ಪುನರ್ವಸತಿ ಪ್ರಕ್ರಿಯೆಗೆ ಸಹಕಾರಿಯಾಗುತ್ತದೆ. ಸನ್ನಡತೆ ಮೈಗೂಡಿಸಿಕೊಳ್ಳಲು ಸಹಕಾರಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ಕಾರಾಗೃಹದಲ್ಲಿ ನಿರಂತರವಾಗಿ ಯೋಗ ಚಟುವಟಿಕೆ ನಡೆಸಲು ನಿರ್ಧರಿಸಲಾಗಿದೆ ಎಂದರು.

ಇದೇ ವೇಳೆ ಯೋಗ ತರಬೇತುದಾರರಾದ ದಿನಕರ್ ಅವರ ಮಾರ್ಗದರ್ಶನದಲ್ಲಿ ನಡೆದ ಯೋಗ ಪ್ರದರ್ಶನದಲ್ಲಿ ಬಂಧಿಗಳು, ಕಾರಾಗೃಹದ ಅಧಿಕಾರಿಗಳು, ಭದ್ರತಾ ಸಿಬ್ಬಂದಿ ಪಾಲ್ಗೊಂಡು ಯೋಗದ ವಿವಿಧ ಆಸನ, ಪ್ರಾಣಾಯಾಮ, ಧ್ಯಾನದಲ್ಲಿ ಪಾಲ್ಗೊಂಡರು.

ಬೆಳೆಗಳ ಉತ್ಪಾದನೆ ಹೆಚ್ಚಳವಾಗುವಲ್ಲಿ ಜೇನು ಕೃಷಿ ಸಹಕಾರಿ



ಜೇನು ಕೃಷಿ ಕುರಿತು ಏರ್ಪಡಿಸಿದ್ದ ತರಬೇತಿ ಕಾರ್ಯಕ್ರಮವನ್ನು ಜಂಟಿ ಕೃಷಿ ನಿರ್ದೇಶಕ ರವಿ ಉದ್ಘಾಟಿಸಿದರು.

ಮೈಸೂರು: ಕೃಷಿಯೊಂದಿಗೆ ಪೂರಕ ಚಟುವಟಿಕೆಯಾಗಿ ಜೇನುಕೃಷಿಯನ್ನು ಅಳವಡಿಸಿಕೊಳ್ಳುವುದರಿಂದ ರೈತರು ಹೆಚ್ಚುವರಿ ಆದಾಯಗಳಿಸಬಹುದು. ಬೆಳೆಗಳ ಪರಾಗಸ್ಪರ್ಶದಲ್ಲಿ ಜೇನುನೊಣಗಳ ಪಾತ್ರ ಮಹತ್ತರವಾಗಿದ್ದು, ಬೆಳೆಗಳ ಉತ್ಪಾದನೆ ಹೆಚ್ಚಳವಾಗುವಲ್ಲಿ ಜೇನು ಕೃಷಿ ಸಹಕಾರಿಯಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕ ರವಿ ಕೆ.ಹೆಚ್. ಕರೆ ನೀಡಿದರು.

ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಮೈಸೂರು ಜಿಲ್ಲೆಯ ರೈತರಿಗೆ ಜೇನು ಸಾಕಾಣಿಕೆ ತಂತ್ರಜ್ಞಾನ, ಕೃಷಿಯಲ್ಲಿ ಪ್ರಾಮುಖ್ಯತೆ, ಜೇನು ಉತ್ಪಾದನೆ, ಸಂಸ್ಕರಣೆ ಮತ್ತು ಮಾರುಕಟ್ಟೆ ಅವಕಾಶಗಳು ಕುರಿತು ಏರ್ಪಡಿಸಿದ್ದ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕೃಷಿಯಲ್ಲಿ ಅತಿಯಾದ ರಾಸಾಯನಿಕಗಳ ಬಳಕೆಯಿಂದ ಜೇನುನೊಣಗಳ ನೈಸರ್ಗಿಕ ವಾಸಸ್ಥಾನಕ್ಕೆ ಧಕ್ಕೆ ಉಂಟಾಗುವುದರಿಂದ ಸ್ವಾಭಾವಿಕ ಜೇನುನೊಣಗಳ ಸಂತತಿ, ಕಡಿಮೆಯಾಗುತ್ತಿದೆ. ಆದ್ದರಿಂದ ರೈತರು ಸಾವಯವ ಕೃಷಿಗೆ ಹೆಚ್ಚು ಪ್ರಾಮುಖ್ಯತೆ ನೀಡುವಂತೆ ತಿಳಿಸಿದರು.

ಉಪ ಕೃಷಿ ನಿರ್ದೇಶಕ ನಾಗರಾಜು ಮಾತನಾಡಿ, ಕೃಷಿಯಲ್ಲಿ ಮಿತ್ರ ಕೀಟಗಳ ಮಹತ್ವ ಮತ್ತು ಸಸ್ಯ ಸಂರಕ್ಷಣೆಯಲ್ಲಿ ಮಿತ್ರ ಕೀಟಗಳ ಪಾತ್ರ ಬಗ್ಗೆ ಮಾಹಿತಿ ನೀಡಿದರು.

ವಿಸ್ತರಣಾ ಶಿಕ್ಷಣ ಘಟಕದ ಸಹಾಯಕ ಪ್ರಾಧ್ಯಾಪಕಿ ಡಾ.ಮೌಲ್ಯ, ಜೇನು ಹುಳುವಿನ ಪ್ರಭೇದಗಳ ಕಿರು ಪರಿಚಯ ಹಾಗೂ ಕೀಟನಾಶಕಗಳ ಬಳಕೆಯಿಂದ ಜೇನು ಹುಳುವಿನ ಮೇಲಾಗುವ ಪರಿಣಾಮಗಳ ಬಗ್ಗೆ ಮಾಹಿತಿ ನೀಡಿದರು.

ಜೇನು ಕೃಷಿಕರಾದ ನಂದಿನಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಪ್ರೊ.ಎಂ. ಶಂಕರರೆಡ್ಡಿ, ಸಹಾಯಕ ಕೃಷಿ ನಿರ್ದೇಶಕರಾದ ಮಧುಲತಾ, ನಿವೃತ್ತ ಬ್ಯಾಂಕ್ ವ್ಯವಸ್ಥಾಪಕ ಡಿ.ಟಿ.ವೆಂಕಟೇಶ್, ನಿವೃತ್ತ ಬ್ಯಾಂಕ್ ಅಧಿಕಾರಿ ಕೃಷ್ಣಮೂರ್ತಿ ಹಾಗೂ ರೈತರು ಉಪಸ್ಥಿತರಿದ್ದರು.

ಉದ್ಘಾಟನೆ



ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ವೈಕುಂಠರಾಜ್ ಸಿಲ್ಕ್ಸ್ ಮತ್ತು ಮಂಜು ಸ್ಯಾರಿ ಸಂಭ್ರಮ ಪ್ರದರ್ಶನವನ್ನು ಡಾ. ಹೇಮಾಮಾಲಿನಿ ಲಕ್ಷ್ಮಣ್ ಉದ್ಘಾಟಿಸಿದರು. ಈ ವೇಳೆ ಸಂಯೋಜಕರಾದ ಗೀತಾ ವೈ. ರಾಜು ಮತ್ತು ಮಂಜುಳಾ ಜೈನ್, ಮಾನ್ಸಿ ಜೈನ್ ಮತ್ತಿತರರು ಹಾಜರಿದ್ದರು.

ಮೈಸೂರಿಗೆ ರೈಲಿನಲ್ಲಿ ಬಂದರೆ ಅಕ್ರಮ ಬಾಂಗ್ಲಾ ವಲಸಿಗರು?

ವಲಸಿಗರನ್ನು ಹಿಡಿದು ಪೋಲೀಸರಿಗೊಪ್ಪಿಸಿದ ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು

ಮೈಸೂರು,ಜೂ.21(ಎಂಟಿವೈ)– ಮೈಸೂರಿನ ಕೇಂದ್ರ ರೈಲ್ವೆ ನಿಲ್ದಾಣಕ್ಕೆ ಭಾನುವಾರ ಉತ್ತರ ಭಾರತದಿಂದ 50ಕ್ಕೂ ಹೆಚ್ಚು ಮಂದಿ ಆಗಮಿಸಿದ್ದು, ಅಕ್ರಮವಾಗಿ ಬಾಂಗ್ಲಾದೇಶಿಯರು ಮೈಸೂರಿಗೆ ಬರುತ್ತಿದ್ದಾರೆಂದು ಆರೋಪಿಸಿ ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ಕೆಲವರನ್ನು ರೈಲ್ವೆ ಪೊಲೀಸರ ವಶಕ್ಕೆ ಒಪ್ಪಿಸಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅಲ್ಲಿ ಅಕ್ರಮವಾಗಿ ನೆಲೆಸಿದ್ದ ಬಾಂಗ್ಲಾದೇಶಿಯರು ಕರ್ನಾಟಕ ಸೇರಿದಂತೆ ವಿವಿಧೆಡೆ ಚದುರುತ್ತಿದ್ದಾರೆ ಎಂಬ ವದಂತಿ ಹರಡಿದ್ದು, ಭಾನುವಾರ ಬೆಳಗ್ಗೆ ಮೈಸೂರಿನ ಕೇಂದ್ರ ರೈಲ್ವೆ ನಿಲ್ದಾಣಕ್ಕೆ ಔರಾ ಎಕ್ಸ್‌ಪ್ರೆಸ್‌ನಲ್ಲಿ ಆಗಮಿಸಿದ್ದ 50ಕ್ಕೂ ಹೆಚ್ಚು ವಲಸಿಗರನ್ನು ಹಿಂದು ಜಾಗರಣ ವೇದಿಕೆ ಕಾರ್ಯಕರ್ತರು ತಡೆದು ದಾಖಲೆ ಪರಿಶೀಲಿಸಲಾರಂಭಿಸಿದರು.

ಇದರಿಂದ ಕೆಲವರು ತಪ್ಪಿಸಿಕೊಳ್ಳಲು ಓಡಲಾರಂಭಿಸಿದ್ದಾರೆ. ಆದರೆ, ಅವರನ್ನು ಬೆನ್ನಟ್ಟಿ 36 ಮಂದಿಯನ್ನು ಹಿಡಿದ ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ರೈಲ್ವೆ ಪೊಲೀಸರಿಗೆ ಒಪ್ಪಿಸಿ ದಾಖಲೆ ಪರಿಶೀಲಿಸುವಂತೆ ಮನವಿ ಮಾಡಿದ್ದಾರೆ.

ಕಾರ್ಯಕರ್ತರ ವಿರುದ್ಧ ಪ್ರಕರಣ ದಾಖಲು

ಅಕ್ರಮ ಬಾಂಗ್ಲಾದೇಶಿಗರು ಎಂದು 36 ಮಂದಿಯನ್ನು ಹಿಡಿದಿದ್ದ ಹಿಂದೂ ಜಾಗರಣ ವೇದಿಕೆ ವಿರುದ್ಧ ರೈಲ್ವೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ಹಿಡಿದು ಕೊಟ್ಟಿದ್ದ ಎಲ್ಲಾ 36 ವಲಸೆ ಕಾರ್ಮಿಕರು ವಿಚಾರಣೆ ವೇಳೆ ಹಾಜರು ಪಡಿಸಿದ ದಾಖಲೆ ನೈಜ ದಾಖಲೆಯಾಗಿದ್ದು, ಅವರೆಲ್ಲಾ ಪಶ್ಚಿಮ ಬಂಗಾಳದಿಂದ ಬಂದವರಾಗಿದ್ದಾರೆ ಎಂದು ದೃಢಪಟ್ಟಿದೆ. ಈ ಹಿನ್ನೆಲೆಯಲ್ಲಿ ರೈಲ್ವೆ ನಿಲ್ದಾಣದ ಆವರಣದಲ್ಲಿ ಪ್ರಯಾಣಿಕರೊಂದಿಗೆ ಅನುಚಿತವಾಗಿ ವರ್ತಿಸಿ ಕಿರಿ ಕಿರಿ ಉಂಟು ಮಾಡಿ, ಗಲಾಟೆ ಮಾಡಿದ ಆರೋಪದ ಮೇರೆಗೆ ಆರು ಮಂದಿಯ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಅಕ್ರಮ ವಲಸಿಗರನ್ನು ಪತ್ತೆ ಹಚ್ಚಿ ಪೊಲೀಸರಿಗೆ ನೆರವಾಗಲು ಬಂದ ನಮ್ಮ ವಿರುದ್ಧವೇ ಪ್ರಕರಣ ದಾಖಲಿಸಿರುವುದಕ್ಕೆ ಹಿಂದೂ ಜಾಗರಣ ವೇದಿಕೆಯ ಮುಖಂಡ ವಸಂತ ಕುಮಾರ್ ಆಕ್ಷೇಪ ವ್ಯಕ್ತಪಡಿಸಿ ಎಲ್ಲರ ದಾಖಲಾತಿಗಳನ್ನು ಮತ್ತೊಮ್ಮೆ ಪರಿಶೀಲನೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ಬಾಂಗ್ಲಾ ದೇಶಿಯರ ಆಗಮನವಾಗಿದೆ ಎಂಬ ಮಾಹಿತಿ ಮೇರೆಗೆ ಸ್ಥಳಕ್ಕೆ ಮಾಜಿ ಶಾಸಕ ಎಲ್.ನಾಗೇಂದ್ರ ಆಗಮಿಸಿ, ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ಹಿಡಿದಿದ್ದ ವಲಸಿಗರನ್ನು ಪ್ರಶ್ನಿಸಿದರು. ಅಲ್ಲದೆ, ವಲಸಿಗರು ತೋರಿಸಿದ ದಾಖಲೆಗಳಲ್ಲಿ ಅಸ್ಸಾಂ, ಪಶ್ಚಿಮ ಬಂಗಾಳದ ವಿಳಾಸವಿದ್ದು, ಅವುಗಳು ನಖಲಿ ದಾಖಲೆ ಇರಬೇಕೆಂದು ಅನುಮಾನ ವ್ಯಕ್ತಪಡಿಸಿದರು. ಅಲ್ಲದೆ, ಸ್ಥಳಕ್ಕೆ ಮಂಡಿ ಠಾಣೆಯ ಪೊಲೀಸರನ್ನು ಕರೆಸಿ, ರೈಲ್ವೆ ಪೊಲೀಸರೊಂದಿಗೆ ಸೇರಿ ತಪಾಸಣೆ ಮಾಡುವಂತೆ ಕೋರಿದರು.

ಉತ್ತರ ಭಾರತೀಯರೇ: ಪೊಲೀಸರು ವಲಸಿಗರನ್ನು ತಪಾಸಣೆ ನಡೆಸಿದಾಗ ಎಲ್ಲರೂ ಪಶ್ಚಿಮ ಬಂಗಾಳ ಹಾಗೂ ಅಸ್ಸಾಂ ನಿವಾಸಿಗಳೆಂದು ದೃಢಪಟ್ಟಿದೆ. ಎಲ್ಲರ ದಾಖಲೆ ಪರಿಶೀಲಿಸಿದ ನಂತರ ಅವರ ಮಾಹಿತಿ ಪಡೆದು, ಎಲ್ಲಿಗೆ ಬಂದಿರುವುದಾಗಿ ವಿಚಾರಣೆ ನಡೆಸಿ ಬಿಡುಗಡೆ ಮಾಡಿದ್ದಾರೆ.

ಆರ್‌ಎಸ್‌ಎಸ್ ಪ್ರಶ್ನಿಸುವ ಖರ್ಗೆ ಅವರೇ ವಲಸಿಗರ ತಡೆಗೆ ಗಮನ ನೀಡಿ.

ರೈಲ್ವೆ ನಿಲ್ದಾಣದ ಬಳಿ ಪತ್ರಕರ್ತರೊಂದಿಗೆ ಮಾಜಿ ಶಾಸಕ, ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ಪಶ್ಚಿಮ ಬಂಗಾಳದಲ್ಲಿ ನಡೆದ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಿದ ಬಳಿಕ ಅಲ್ಲಿದ್ದ ಅಕ್ರಮ ಬಾಂಗ್ಲಾದೇಶಿಗರಿಗೆ ನಡುಕ ಉಂಟಾಗಿದೆ. ಅಲ್ಲಿಂದ ಜಾಗ ಖಾಲಿ ಮಾಡುತ್ತಿರುವ ಬಾಂಗ್ಲಾದೇಶಿಯರು ಕಾಂಗ್ರೆಸ್ ಸರ್ಕಾರ ಇರುವ ರಾಜ್ಯಗಳಿಗೆ ವಲಸೆ ಹೋಗುತ್ತಿದ್ದಾರೆ ಎಂದರು.



ಮೈಸೂರಿಗೆ ಪ್ರತಿ ಶನಿವಾರ, ಭಾನುವಾರ ನೂರಾರು ಮಂದಿ ಬಾಂಗ್ಲಾ ವಲಸಿಗರು ಬರುತ್ತಿದ್ದಾರೆ. ವಲಸಿಗರನ್ನು ತಪಾಸಣೆ ಮಾಡುವವರು ಯಾರು ಇಲ್ಲ. ಮೈಸೂರಿಗೆ ಬರುತ್ತಿರುವ ವಲಸಿಗರಲ್ಲಿ ಕೆಲವರು ಮಡಿಕೇರಿ ಕಡೆಗೂ ಮತ್ತಷ್ಟು ಮಂದಿ ಕೇರಳಕ್ಕೆ ಹೋಗುತ್ತಿದ್ದಾರೆ. ಇವರನ್ನೆಲ್ಲಾ ಯಾರು ನಿರ್ವಹಣೆ ಮಾಡುತ್ತಿದ್ದಾರೆ. ಯಾರು ವಲಸಿಗರ ಮೇಲೆ ನಿಗಾ ಇಟ್ಟಿದ್ದಾರೆ ಎಂದು ತಿಳಿದಿಲ್ಲ ಎಂದು ಕಿಡಿಕಾರಿದರು.

ವಲಸಿಗರು ತೋರಿಸಿದ ಗುರುತಿನ ಚೀಟಿ ನಕಲಿಯಾಗಿದೆ. ಅವುಗಳನ್ನು ಪರಿಶೀಲಿಸಬೇಕು. ರಾಜ್ಯ ಗೃಹ ಸಚಿವ ಪ್ರಿಯಾಂಕ ಖರ್ಗೆ ಆರ್‌ಎಸ್‌ಎಸ್ ಬಗ್ಗೆ ಇಲ್ಲ ಸಲ್ಲದ ಹೇಳಿಕೆ ನೀಡಿ, ಲೆಕ್ಕದ ಬಗ್ಗೆ ಪ್ರಶ್ನೆ ಮಾಡುತ್ತಾರೆ. ಆದರೆ, ವಲಸಿಗರನ್ನು ತಡೆಯಲು ಏನು ಕ್ರಮ ಕೈಗೊಂಡಿಲ್ಲ. ಇದರಿಂದ ಮುಂದಿನ ದಿನಗಳಲ್ಲಿ ವಲಸಿಗರಿಂದ ರಾಜ್ಯಕ್ಕೆ ಗಂಡಾಂತರ ಎದುರಾಗುವುದು ನಿಶ್ಚಿತ. ಈ ಹಿನ್ನೆಲೆಯಲ್ಲಿ ವಲಸಿಗರನ್ನು ಪತ್ತೆ ಮಾಡಲು ಸ್ಕ್ವಾಡ್ ರಚಿಸಬೇಕು. ಎಲ್ಲರನ್ನೂ ಕೂಲಂಕುಶವಾಗಿ ತಪಾಸಣೆ ಮಾಡಬೇಕು. ಪ್ರಮುಖವಾಗಿ ವಲಸೆ ಬರುವುದನ್ನೇ ತಡೆಗಟ್ಟಬೇಕು ಎಂದು ಆಗ್ರಹಿಸಿದರು.

ಸಂಸದ ಯದುವೀರ್ ಸಮಾಲೋಚನೆ; ಪೊಲೀಸ್ ವಶದಲ್ಲಿದ್ದವರ ಬಿಡುಗಡೆ



ಸಂಸದ ಯದುವೀರ್ ಪೊಲೀಸ್ ಠಾಣೆಗೆ ಭೇಟಿ ನೀಡಿ ಸಮಾಲೋಚಿಸಿದರು.

ಮೈಸೂರು, ಜೂ.21– ಬಾಂಗ್ಲಾ ವಲಸಿಗರೆಂದು ವಶಕ್ಕೆ ಹಲವರನ್ನು ಪಡೆಯಲಾಗಿದ್ದ ಹಿನ್ನೆಲೆಯಲ್ಲಿ ಸಂಸದ ಯದುವೀರ್ ಅವರು, ಪೊಲೀಸ್ ಠಾಣೆಗೆ ಭೇಟಿ ನೀಡಿ ಸಮಾಲೋಚಿಸಿದರು.

ತನಿಖೆಗೆ ಯಾವುದೇ ಆಕ್ಷೇಪಣೆಯಿಲ್ಲ. ಆದರೆ ತನಿಖೆ ನ್ಯಾಯಸಮ್ಮತವಾಗಿ ಮತ್ತು ಸರಿಯಾದ ರೀತಿಯಲ್ಲಿ ನಡೆಯಬೇಕು. ವಲಸಿಗರನ್ನು ಮುಕ್ತವಾಗಿ ಬಿಡಲಾಗಿದ್ದು, ನಮ್ಮ ಹಿಂದೂ ಕಾರ್ಯಕರ್ತರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಇದು ಸರಿಯಲ್ಲ. ಕಾನೂನು ಎಲ್ಲರಿಗೂ ಸಮಾನವಾಗಿರಬೇಕು ಎಂದು ಹೇಳಿದರು. ನಂತರ ಎಲ್ಲಾ ಕಾರ್ಯಕರ್ತರನ್ನು ಬಿಡುಗಡೆ ಮಾಡಲಾಯಿತು.

ಈ ಸಂದರ್ಭದಲ್ಲಿ ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿ ರುದ್ರಮೂರ್ತಿ, ಚಾಮರಾಜ ಮಂಡಲ ಅಧ್ಯಕ್ಷ ದಿನೇಶ್ ಗೌಡ, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಮಂಡಲ ಅಧ್ಯಕ್ಷ ಪೈಲ್ವಾನ್ ರವಿ, ಬಿಜೆಪಿ ಮುಖಂಡ ಗಿರಿಧರ್ ಹಾಗೂ ಇತರ ಹಿಂದೂ ಸಂಘಟನೆಗಳ ಮತ್ತು ಬಿಜೆಪಿ ಮುಖಂಡರು ಉಪಸ್ಥಿತರಿದ್ದರು.

ಜಿಲ್ಲೆಯಾದ್ಯಂತ ಸಂಭ್ರಮದ ಅಂತರರಾಷ್ಟ್ರೀಯ ಯೋಗ ದಿನಾಚರಣೆ


ನಗರದ ಕಾವೇರಿ ಹಾಲ್‌ನಲ್ಲಿ ನಡೆದ ಯೋಗಪ್ರದರ್ಶನದಲ್ಲಿ ಭಾಗವಹಿಸಿರುವ ಯೋಗಪಟುಗಳು,


ವಿರಾಜಪೇಟೆ ಕಾವೇರಿ ಯೋಗ ಕೇಂದ್ರದಲ್ಲಿ ಯೋಗದಲ್ಲಿ ನಿರತರಾಗಿರುವುದು.


ನಾಪೋಕ್ಲು ಮೂರ್ನಾಡು ಜ್ಞಾನ ಜ್ಯೋತಿ ವಿದ್ಯಾಸಂಸ್ಥೆಯಲ್ಲಿ ಯೋಗ ದಿನಾಚರಣೆ.

ಮಡಿಕೇರಿ, ಜೂ.21–ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ 'ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗಘೋಷ ವಾಕ್ಯದಡಿ ಜಿಲ್ಲಾಡಳಿತ, ಆಯುಷ್, ವಿವಿಧ ಸಂಘಟನೆಗಳು ಆಯೋಜಿಸಿದ್ದ ಯೋಗಪ್ರದರ್ಶನದಲ್ಲಿ ಜನಪ್ರತಿನಿಧಿಗಳು, ಅಧಿಕಾರಿ, ಸಂಘ ಸಂಸ್ಥೆಯ ಕಾರ್ಯಕರ್ತರು, ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಂಡಿದ್ದು, ವಿವಿಧ ಆಸನಗಳ ಯೋಗಪ್ರದರ್ಶನ ಮಾಡಿದರು.

ಮಡಿಕೇರಿ: ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಯೋಗ ಸಹಕಾರಿಯಾಗಿದೆ ಎಂದು ನಗರಸಭೆ ಅಧ್ಯಕ್ಷೆ ಪಿ.ಕಲಾವತಿ ಹೇಳಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಆಯುಷ್ ಇಲಾಖೆ ಸಹಯೋಗದೊಂದಿಗೆ 'ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ' ಎಂಬ ವಿಷಯದಡಿ ನಗರದ ಕಾವೇರಿ ಹಾಲ್‌ನಲ್ಲಿ ನಡೆದ ಅಂತರರಾಷ್ಟ್ರೀಯ 12ನೇ ಯೋಗ ದಿನಾಚರಣೆಯಲ್ಲಿ ಮಾತನಾಡಿ ಯೋಗ ದಿನಾಚರಣೆ ಒಂದು ದಿನಕ್ಕೆ ಸೀಮಿತಗೊಳಿಸದೆ ಪ್ರತಿನಿತ್ಯ ಜೀವನದಲ್ಲಿ ಯೋಗ ಅಭ್ಯಾಸ ಮಾಡುವ ಮೂಲಕ ಯೋಗ ದಿನಾಚರಣೆ ಆಚರಿಸಬೇಕು. ಪ್ರಸ್ತುತ ದಿನದಲ್ಲಿ ದೈಹಿಕ ಆರೋಗ್ಯ ಶಕ್ತಿ ಮತ್ತು ಫಿಟ್ನೆಸ್ ಹೆಚ್ಚಿಸಿಕೊಳ್ಳಲು ವ್ಯಾಯಾಮ ಶಾಲೆಗಳಿಗೆ ತೆರಳದೆ ಮನೆಯಲ್ಲಿಯೇ ನಿಯಮಿತವಾಗಿ ಯೋಗಾಭ್ಯಾಸ ಮಾಡುವುದರಿಂದ ರಕ್ತದೊತ್ತಡ, ಮಧುಮೇಹ ನಿಯಂತ್ರಣಕ್ಕೆ ಹಾಗೂ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ಅವರು ಹೇಳಿದರು.

ಜಿಲ್ಲಾ ಆಯುಷ್ ಅಧಿಕಾರಿ ಡಾ.ಶೈಲಜಾ ಮಾತನಾಡಿ, ತಾಲೂಕು ಆರೋಗ್ಯಾಧಿಕಾರಿ ಡಾ.ಸನತ್ ಕುಮಾರ್ ಮಾತನಾಡಿದರು. ಯೋಗ ಶಿಕ್ಷಕರು ಸೂರ್ಯ ನಮಸ್ಕಾರ, ವೃಕ್ಷಾಸನ, ಪಾದಹಸ್ತಾಸನ, ಉರ್ಧ್ವಾಸನ, ತಾಡಾಸನ, ಅರ್ಧ ಮತ್ಸೇಂದ್ರಾಸನ, ಭುಜಂಗಾಸನ, ಪವನ ಮುಕ್ತಾಸನ, ಭದ್ರಾಸನ, ತ್ರಿಕೋನಾಸನ, ಉಷ್ಟ್ರಾಸನ, ವಜ್ರಾಸನ, ಶಲಭಾಸನ, ಶಶಾಂಕಾಸನ, ಮಂಡೂಕಾಸನ, ವಕ್ರಾಸನ, ಮಕರಾಸನ, ಸೇತುಬಂಧಾಸನ, ಉತ್ಥಾನ ಪಾದಾಸನ, ಅರ್ಧಹಲಾಸನ, ಶವಾಸನ, ಕಪಾಲಭಾತಿ, ಶೀತಲಿ ಪ್ರಾಣಾಯಾಮ, ಭ್ರಾಮರಿ ಪ್ರಾಣಾಯಾಮ, ಧ್ಯಾನ, ನಾಡಿಶೋಧ ಪ್ರಾಣಾಯಾಮ ಹೀಗೆ ಹಲವು ರೀತಿಯ ಯೋಗ ಮಾಡಲಾಯಿತು.

ಜಿಲ್ಲಾ ಹೆಚ್ಚುವರಿ ಜಿಲ್ಲಾಧಿಕಾರಿ ಸಹನಾ. ಎಸ್.ಹಾದಿಮನಿ, ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ, ಯೋಗ ತರಬೇತುದಾರ ಮಹೇಶ್ ಕುಮಾರ್, ಕೌಶಿಕ್ ಆಯುಷ್, ನೀಮಾ ಸಂಸ್ಥೆಯ ಡಾ.ರಾಜಾರಾಮ್, ಸಹಾಯಕ ಆಡಳಿತ ಅಧಿಕಾರಿ ಕೆ.ಟಿ.ಕಾವೇರಪ್ಪ, ಶಾಲಾ ಶಿಕ್ಷಣ ಇಲಾಖೆಯ ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಬಾಲಚಂದ್ರ, ಪತಂಜಲಿ ಯೋಗ ಶಿಕ್ಷಣ ಸಮಿತಿಯ ಲಿಂಗಪ್ಪ, ಮಾರ್ನಿಂಗ್ ಸ್ಟಾರ್ ಯೋಗ ಸಂಸ್ಥೆಯ ಕವನ್, ಸ್ಕೌಟ್ ಗೈಡ್ ಶಿಕ್ಷಕಿ ದಮಯಂತಿ, ವೈದ್ಯಾಧಿಕಾರಿ ಡಾ. ಪಿ.ಜಿ.ಅರುಣ್, ಡಾ. ಪಲ್ಲವಿ, ಡಾ.ಸರಸ್ವತಿ ಉಪಸ್ಥಿತರಿದ್ದರು.

ವಿರಾಜಪೇಟೆ: ಆರೋಗ್ಯವನ್ನು ಕಾಪಾಡಿಕೊಳ್ಳಲು ಯೋಗಾಭ್ಯಾಸ ಮುಖ್ಯವಾಗಿದ್ದು, ಯಾವ ವಯಸ್ಸಿನವರಾದರು ಯೋಗಾಭ್ಯಾಸವನ್ನು ಕಲಿತುಕೊಳ್ಳಬಹುದು ಎಂದು ಸರಕಾರಿ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ. ವಿಶ್ವನಾಥ್ ಸಿಂಪಿ ಹೇಳಿದರು.

ಅಂತರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಪಟ್ಟಣದ ಅಪ್ಪಯ್ಯ ಸ್ವಾಮಿ ರಸ್ತೆಯಲ್ಲಿರುವ ಕಾವೇರಿ ಆಶ್ರಮದಲ್ಲಿ ಆಯೋಜಿಸಲಾಗಿದ್ದ ಕಾವೇರಿ ಯೋಗ ಕೇಂದ್ರದ 27ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ಯೋಗ ಧ್ಯಾನದಿಂದ ಮನುಷ್ಯ ಉಸಿರಾಟವನ್ನು ಸರಾಗವಾಗಿ ಮಾಡಬಹುದು, ಹಿರಿಯರು ಕಿರಿಯರು ಎನ್ನದೆ ಪ್ರತಿಯೊಬ್ಬರು ವಯಸ್ಸಿನ ಮಿತಿಯಿಲ್ಲದೆ ನಿತ್ಯವು ಮುಂಜಾನೆ ಎದ್ದು ಯೋಗಾಭ್ಯಾಸ ಮಾಡುವುದರಿಂದ ಆರೋಗ್ಯಕ್ಕೆ ಉತ್ತಮ ಔಷಧಿ, ರೋಗಗಳು ದೂರವಾಗಲಿವೆ ಶುಗರ್, ಬಿಪಿ ಇತ್ಯಾದಿ ಖಾಯಿಲೆಗಳನ್ನು ತಡೆಯಲು ಯೋಗಾಭ್ಯಾಸದಿಂದ ಸಾಧ್ಯವಾಗಲಿದೆ ಎಂದು,

ಕಾವೇರಿ ಆಶ್ರಮದ ಆತ್ಮಾನಂದ ಪ್ರಕಾಶಾನಂದ ಪುರಿ ಸ್ವಾಮೀಜಿ ಉದ್ಘಾಟಿಸಿ, ಯೋಗ ಧ್ಯಾನಕ್ಕೆ ಓಂಕಾರದ ಶಕ್ತಿ ಇದ್ದು ಮನುಷ್ಯ ನಿತ್ಯ ಜಂಜಾಟದ ಬದುಕಿನಲ್ಲಿ ಯೋಗಾಭ್ಯಾಸ ಅತಿ ಮುಖ್ಯವಾಗಿದೆ ವ್ಯಾಯಾಮದಿಂದ ಉತ್ತಮ ಆರೋಗ್ಯವನ್ನು ಗಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಎಂದರು.


ಮೂರ್ನಾಡು ರಸ್ತೆಯಲ್ಲಿರುವ ಆಶೀರ್ವಾದ್ ಮೆಡಿಕಲ್ ಸೆಂಟರ್ ವೈದ್ಯ ಡಾ. ಬೋಪಣ್ಣ ಮಾತನಾಡಿದರು. ಶ್ರೀ ಕಾವೇರಿ ಯೋಗ ಕೇಂದ್ರದ ಯೋಗ ಗುರು ಸೀತಾರಾಮ ರೈ ಅಧ್ಯಕ್ಷತೆ ವಹಿಸಿದ್ದರು.

ನಾಪೋಕ್ಲು: ಮೂರ್ನಾಡುವಿನ ಜ್ಞಾನ ಜ್ಯೋತಿ ವಿದ್ಯಾಸಂಸ್ಥೆಯಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಒಟ್ಟಾಗಿ ಯೋಗದ ಮಹತ್ವದ ಬಗ್ಗೆ ಅರಿವು ಮೂಡಿಸುವ ಪ್ರತಿಜ್ಞೆ ಸ್ವೀಕರಿಸಿದರು. ಬಳಿಕ ಯೋಗ ಶಿಕ್ಷಕಿ ಎ.ಎಸ್. ಶೋಭಾ ಯೋಗದ ಮಹತ್ವ, ಅದರ ಆರೋಗ್ಯಕರ ಪ್ರಯೋಜನಗಳು ಹಾಗೂ ದೈಹಿಕ ಮತ್ತು ಮಾನಸಿಕ ಆರೋಗ್ಯದಲ್ಲಿ ಯೋಗದ ಪಾತ್ರವನ್ನು ವಿವರಿಸಿದರು.

ಶಾಲೆಯ ವಿದ್ಯಾರ್ಥಿಗಳು ಶಿಸ್ತು, ಏಕಾಗ್ರತೆ ಆತ್ಮವಿಶ್ವಾಸದಿಂದ ಯೋಗ ಪ್ರದರ್ಶನ ನೀಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಶಿಕ್ಷಕ ವೃಂದವೂ ವಿದ್ಯಾರ್ಥಿಗಳೊಂದಿಗೆ ಸೇರಿ ಯೋಗಭ್ಯಾಸದಲ್ಲಿ ಪಾಲ್ಗೊಂಡು "ಯೋಗವೇ ಆರೋಗ್ಯಕರ ಬದುಕಿನ ದಾರಿ" ಎಂಬ ಸಂದೇಶವನ್ನು ಸಾರಿತು.

7ನೇ ತರಗತಿ ವಿದ್ಯಾರ್ಥಿನಿಯ ಯೋಗಸಾಧನೆ

ಅಂತರಾಷ್ಟ್ರೀಯ ಯೋಗ ದಿನದಲ್ಲಿ ಮದೆನಾಡು ಬಿಜಿಎಸ್ ಶಾಲೆಯ 7ನೇ ತರಗತಿ ವಿದ್ಯಾರ್ಥಿನಿ ಡಿ.ಕೆ.ಸಿಂಚನ 33 ನಿಮಿಷದಲ್ಲಿ 310 ಆಸನಗಳು ಮಾಡುವ



ಮೂಲಕ ಹೊಸ ದಾಖಲೆ ಬರೆದಿದ್ದಾಳೆ.

ಇಂಡಿಯನ್ ಬುಕ್ ಆಫ್ ರೆಕಾರ್ಡ್ ಮತ್ತು ಏಷ್ಯನ್ ಬುಕ್ ಆಫ್ ರೆಕಾರ್ಡ್ ಆನ್‌ಲೈನ್ ಮೂಲಕ ಆಯೋಜಿಸಿದ್ದ ಯೋಗ ಪ್ರದರ್ಶನದಲ್ಲಿ ಒಂದು ಗಂಟೆಯೊಳಗೆ 300 ಆಸನಗಳನ್ನು ಮಾಡಬೇಕಾಗಿತ್ತು. ಆದರೆ ಸಿಂಚನ ಕೇವಲ 33 ನಿಮಿಷಗಳಲ್ಲಿ 310 ಆಸನಗಳು ಮಾಡಿ ಪ್ರಶಸ್ತಿಗೆ ಭಾಜನರಾದರು. ಮುಂದಿನ ವಾರ ಡಿ.ಕೆ. ಸಿಂಚನಗೆ ಪದಕ ಮತ್ತು ಪ್ರಶಸ್ತಿ ಪತ್ರ ಸಿಗಲಿದೆ. ಈಕೆ ಬಿ.ಸಿ.ಕೀರ್ತಿಕುಮಾರ್ ಹಾಗೂ ಬಿ.ಎಸ್.ರೇಣುಕಾ ದಂಪತಿಯ ಪುತ್ರಿ, ಮದೆ ಕೃಷಿ ಪತ್ತಿನ ಸಹಕಾರ ಸಂಘದ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಅಗೋಳಿಕಜೆ ಧನಂಜಯ, ನಿವೃತ್ತ ಶಿಕ್ಷಕರಾದ ಬಾರಿಯಂಡ ಜೋಯಪ್ಪ, ಎಂ.ಎಸ್.ಶಿವರಾಂ, ದೇವರಕೊಲ್ಲಿಯ ಶ್ರೀ ಚಾಮುಂಡೇಶ್ವರಿ ದೇವಾಲಯದ ಅಧ್ಯಕ್ಷ ಯಶೋಧರ, ಹಿರಿಯ ಬಿ.ಸಿ.ಚೆನ್ನಪ್ಪ, ಯೋಧ ಹಾಗೂ ಕ್ರೀಡಾಪಟು ಬಿ.ಸಿ.ತಿಲಕ್, ಸಹಕಾರ ಸಂಘದ ಕಾರ್ಯದರ್ಶಿ ಮೋಹಿನಿ ಮತ್ತಿತರ ಪ್ರಮುಖರು ಉಪಸ್ಥಿತರಿದ್ದರು.

ಕಾಡಿಗೆ ಅಟ್ಟಲಾಗಿದ್ದ ಕಾಡಾನೆಗಳ ಹಿಂಡು ಮತ್ತೆ ಕಾಫಿ ತೋಟಕ್ಕೆ ಲಗ್ಗೆ


ತೋಟಕ್ಕೆ ಲಗ್ಗೆ ಇಟ್ಟಿರುವ ಕಾಡಾನೆಗಳ ಹಿಂಡು

ಸಿದ್ದಾಪುರ, ಜೂ.21–ಕಾಡಿಗೆ ಅಟ್ಟಲಾಗಿದ್ದ ಕಾಡಾನೆಗಳ ಹಿಂಡು ಮತ್ತೆ ಕಾಫಿ ತೋಟಗಳಿಗೆ ಲಗ್ಗೆ ಇಟ್ಟಿದ್ದು, ಗ್ರಾಮಸ್ಥರಲ್ಲಿ ಭೀತಿ ಮೂಡಿಸಿದೆ.

ಇಲ್ಲಿಗೆ ಸಮೀಪದ ಪಳ್ಳಕೆರೆ ಸೇರಿದಂತೆ ಸುತ್ತಮುತ್ತಲ ಕಾಫಿ ತೋಟದಲ್ಲಿ ಬೀಡುಬಿಟ್ಟಿದ ಸುಮಾರು 20ಕ್ಕೂ ಹೆಚ್ಚು ಕಾಡಾನೆಗಳನ್ನು ಅರಣ್ಯಕ್ಕಟ್ಟುವ ಕಾರ್ಯಾಚರಣೆಯನ್ನು ಇತ್ತೀಚೆಗೆ ಇಲಾಖೆ ವತಿಯಿಂದ ನಡೆಸಲಾಗಿತ್ತು. ಆದರೆ ಇದೀಗ ಮತ್ತೆ ಅರೆಕಾಡು ವ್ಯಾಪ್ತಿಯಿಂದ ಕಾವೇರಿ ನದಿ ದಾಟಿ ಪಳ್ಳಕೆರೆ ಸೇರಿದಂತೆ ಸುತ್ತಮುತ್ತಲ ಕಾಫಿ ತೋಟಗಳಿಗೆ ಬಂದಿರುವ ಸುಮಾರು 17ಕ್ಕೂ ಅಧಿಕ ಕಾಡಾನೆಗಳು ಕಾಫಿ, ಅಡಕೆ, ತೆಂಗು ಸೇರಿದಂತೆ ವಿವಿಧ ಕೃಷಿ ಫಸಲನ್ನು ನಾಶಪಡಿಸಿದ್ದು, ಸಾರ್ವಜನಿಕರ ಭೀತಿಗೆ ಕಾರಣವಾಗಿದೆ.

ಆನೆ ಓಡಿಸುವ ಕಾರ್ಯಾಚರಣೆ ಅರಣ್ಯ ಇಲಾಖೆಯಿಂದ ಯಾವುದೇ ಪ್ರಯೋಜನ ಕಾಣದಾಗಿದೆ. ಬೇರೊಂದು ತೋಟದಲ್ಲಿ ಬೀಡುಬಿಟ್ಟಿದ ಆನೆಗಳು ಮತ್ತೆ ಅದೇ ಕಡೆ ವಾಪಸ್ಸಾಗುತ್ತಿದ್ದು, ಆನೆ ಹಾವಳಿ ನಿಯಂತ್ರಣಕ್ಕೆ ಶಾಶ್ವತವಾದ ಪರಿಹಾರ ಕಂಡುಕೊಳ್ಳುವಲ್ಲಿ ಇಲಾಖೆ ವಿಫಲವಾಗುತ್ತಿದೆ ಎಂದು ಸ್ಥಳೀಯರು ದೂರಿದ್ದಾರೆ. ಕ್ಷೇತ್ರದ ಶಾಸಕರು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಸಾರ್ವಜನಿಕರಿಗೆ ತೊಂದರೆಯಾಗುವ ಮುನ್ನವೇ ಸೂಕ್ತ ಕ್ರಮ ಕೈಗೊಳ್ಳಲು ಮುಂದಾಗಬೇಕೆಂದು ಒತ್ತಾಯಿಸಿದ್ದಾರೆ.

ಶ್ರೀ ಮುತ್ತಪ್ಪ ಸ್ವಾಮಿ ದೇವಾಲಯ ಬಳಿ ಸಮುದಾಯ ಭವನಕ್ಕೆ ಭೂಮಿಪೂಜೆ

ಕುಶಾಲನಗರ: ಪಟ್ಟಣದ ಬೈಚನಹಳ್ಳಿಯ ಶ್ರೀ ಮುತ್ತಪ್ಪ ಸ್ವಾಮಿ ದೇವಾಲಯದ ಆವರಣದಲ್ಲಿ ಶ್ರೀ ಮುತ್ತಪ್ಪ ಸ್ವಾಮಿ ಸೇವಾಟ್ರಸ್ಟ್ ವತಿಯಿಂದ 50 ಲಕ್ಷ ವೆಚ್ಚದ ಸಮುದಾಯ ಭವನಕ್ಕೆ ಭಾನುವಾರ ಭೂಮಿಪೂಜೆ ನೆರವೇರಿಸಲಾಯಿತು.

ಸಂಸದ ಯದುವೀರ್ ಒಡೆಯರ್ ಸಮುದಾಯ ಭವನಕ್ಕೆ ರೂ.5 ಲಕ್ಷ ಅನುದಾನ ಬಿಡುಗಡೆ ಮಾಡಿದ್ದು, ಈ ಅನುದಾನದಲ್ಲಿ ಪ್ರಥಮ ಹಂತದ ಕಾಮಗಾರಿಗೆ ಮುತ್ತಪ್ಪ ಸ್ವಾಮಿ ಸೇವಾಟ್ರಸ್ಟ್ ಅಧ್ಯಕ್ಷ ಕೆ.ವರದ ಭೂಮಿ ಪೂಜೆ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಿ, ಈ ಜಾಗದಲ್ಲಿ ದೇವಾಲಯ ಟ್ರಸ್ಟ್ ವತಿಯಿಂದ ಅಂದಾಜು ರೂ.50 ಲಕ್ಷ ವೆಚ್ಚದಲ್ಲಿ ಸಮುದಾಯ ಭವನ ನಿರ್ಮಿಸಲು ಉದ್ದೇಶಿಸಲಾಗಿದೆ. ಶಾಸಕ ಡಾ. ಮಂತರ್ ಗೌಡ ಅನುದಾನ ಒದಗಿಸಿಕೊಡುವ ಭರವಸೆ ನೀಡಿದ್ದಾರೆ.


ಶ್ರೀ ಮುತ್ತಪ್ಪ ಸ್ವಾಮಿ ಸೇವಾಟ್ರಸ್ಟ್ ಸಮುದಾಯ ಭವನಕ್ಕೆ ಭೂಮಿಪೂಜೆ ನೆರವೇರಿಸಿತು

ಟ್ರಸ್ಟ್ ಉಪಾಧ್ಯಕ್ಷ ಬೋಬಿ,ಸದಸ್ಯ ಹರೀಂದ್ರನ್, ಆಡಳಿತ ಮಂಡಳಿ ಅಧ್ಯಕ್ಷ ರಂಜೀತ್ ಕುಮಾರ್, ಸಂಚಾಲಕ ಎಂ.ಎಸ್ ಮಣಿಕಂಠ, ಉಪಾಧ್ಯಕ್ಷ ವಿಮಲ್ ನಾಯರ್, ಕಾರ್ಯದರ್ಶಿ ವಿನು ಕಮಲ್, ಸಹ ಕಾರ್ಯದರ್ಶಿ ಸಂದೀಪ್, ಸದಸ್ಯರಾದ ಎಂ.ಕೆ ರವಿ, ವಿನೋದ್ ಕುಮಾರ್, ಜಿತೇಶ್, ರಾಕೇಶ್, ದೇವಾಲಯದ ಅರ್ಚಕ ರಾಜೀವ್ ಮಡೆಯನ್ ಹಾಗೂ ಭಕ್ತಾದಿಗಳು ಭಾಗವಹಿಸಿದ್ದರು.

ಜಿಲ್ಲೆಯಲ್ಲಿ ಸುಗಮವಾಗಿ ನಡೆದ ನೀಟ್ ಮರು ಪರೀಕ್ಷೆ

ಮಡಿಕೇರಿ: ಜಿಲ್ಲೆಯ ಏಕೈಕ ನೀಟ್ ಮರು ಪರೀಕ್ಷೆ ನಗರದ ಜೂನಿಯರ್ ಕಾಲೇಜಿನಲ್ಲಿ ಸುಗಮವಾಗಿ ನಡೆಯಿತು. ಜಿಲ್ಲೆಯ ವಿವಿಧೆಡೆಗಳಿಂದ 516 ಮಂದಿ ನೋಂದಣಿ ಮಾಡಿದ್ದರು. ಇವರಲ್ಲಿ 353 ಮಂದಿ ಪರೀಕ್ಷೆ ಬರೆದಿದ್ದು, 163 ಮಂದಿ ಗೈರಾಗಿದ್ದರು. ವಿದ್ಯಾರ್ಥಿಗಳ ತಪಾಸಣೆ ನಡೆಸಿ ಪರೀಕ್ಷಾ ಕೇಂದ್ರಕ್ಕೆ ಪ್ರವೇಶಿಸಲು ಅವಕಾಶ ನೀಡಲಾಯಿತು.

ಪ್ರತಿಯೊಬ್ಬರು ಯೋಗವನ್ನು ಜೀವನದ ಅವಿಭಾಜ್ಯ ಅಂಗವಾಗಿ ಅಳವಡಿಸಿಕೊಳ್ಳಿ




ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಯೋಗಪ್ರದರ್ಶನ ಮಾಡುತ್ತಿರುವ ಜಿಲ್ಲಾಧಿಕಾರಿ, ಮತ್ತಿತರೆ ಅಧಿಕಾರಿಗಳು. ಯೋಗಪ್ರದರ್ಶನದಲ್ಲಿ ನಿರತರಾಗಿರುವ ಜೆಎಸ್‌ಎಸ್ ವಿದ್ಯಾರ್ಥಿಗಳು. ಹರವೆ ಗ್ರಾಮದ ಚನ್ನಬಸವೇಶ್ವರ ಆಂಗ್ಲಮಾಧ್ಯಮ ಶಾಲೆಯಲ್ಲಿ 12 ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ.

ಚಾಮರಾಜನಗರ, ಜೂ.21–ಪ್ರತಿನಿತ್ಯ 5ರಿಂದ 10 ನಿಮಿಷ ಯೋಗ, ಧ್ಯಾನ 'ಮೂಲಕ ಪ್ರತಿಯೊಬ್ಬರು ಯೋಗವನ್ನು ದೈನಂದಿನ ಜೀವನದ ಅವಿಭಾಜ್ಯ ಅಂಗವಾಗಿ ಅಳವಡಿಸಿಕೊಳ್ಳುವಂತೆ ಜಿಲ್ಲಾಧಿಕಾರಿ ಶ್ರೀರೂಪ ಸಲಹೆ ನೀಡಿದರು.

ನಗರದ ಪೊಲೀಸ್ ಕವಾಯತು ಮೈದಾನದಲ್ಲಿಂದು ಆಯೋಜಿಸಲಾಗಿದ್ದ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಉದ್ಘಾಟಿಸಿ, ಯೋಗ ದಿನದಂದು ಮಾತ್ರ ಯೋಗ ಮಾಡುವುದಲ್ಲ, ಮಕ್ಕಳು, ವಿದ್ಯಾರ್ಥಿಗಳು, ಸಾರ್ವಜನಿಕರು ಸೇರಿದಂತೆ ಎಲ್ಲರನ್ನು ಯೋಗಭ್ಯಾಸಕ್ಕೆ ಪ್ರೋತ್ಸಾಹಿಸಲು ಹಾಗೂ ಚಿಕ್ಕವರಿಂದ ವೃದ್ಧರವರೆಗೂ ಜಾಗೃತಿ ಮೂಡಿಸಲು ಈ ಬಾರಿ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಘೋಷವಾಕ್ಯ ರೂಪಿಸಲಾಗಿದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜ್ ಮಾತನಾಡಿ, ಯೋಗಕ್ಕೆ ಸಾಕಷ್ಟು ಬಗೆಯ ಪರಿಕಲ್ಪನೆಗಳಿವೆ. ಪೂಜೆ ಮಾಡಿದರೆ ಅದು ಭಕ್ತಿ ಯೋಗ, ಭೌತಿಕವಾಗಿ ದೇಹ ದಂಡಿಸಿದರೆ ಅದು ಹಠಯೋಗ, ನಿಷ್ಠೆಯಿಂದ ಕಾಯಕ ಮಾಡಿದರೆ ಅದು ಕರ್ಮಯೋಗ, ಹೀಗೆ ದೈನಂದಿನ ಜೀವನದಲ್ಲಿ ನಾವು ಯೋಗಕ್ಕೆ ಶರಣಾಗಿದ್ದೇವೆ ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್, ನಗರಸಭೆ ಪೌರಾಯುಕ್ತ ಪರಶುರಾಮ್ ಛಲವಾದಿ, ಜಿಲ್ಲಾ ಆಯುಷ್ ಅಧಿಕಾರಿ ಡಾ. ಬಿ.ಪಿ. ಸತೀಶ್‌ಕುಮಾರ್, ಆಯುಷ್ ವೈದ್ಯಾಧಿಕಾರಿ ಪುನೀತ್ ಬಾಬು, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಚಂದ್ರ ಪಾಟೀಲ್, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ವೇದಿಕೆ ಕಾರ್ಯಕ್ರಮದ ಬಳಿಕ ನಡೆದ ಸಾಮೂಹಿಕ ಯೋಗ ಪ್ರದರ್ಶನದಲ್ಲಿ ಮೈಸೂರಿನ ಆಯುಷ್ ಪ್ರಕೃತಿ ಚಿಕಿತ್ಸಾ ಲಯದ ವೈದ್ಯ ಡಾ. ಮನೋಜ್, ವಿದ್ಯಾರ್ಥಿಗಳಾದ ಗಗನ್, ರಜತ್ ವಿವಿಧ ಆಯಾಮದ ಯೋಗಭಂಗಿಗಳನ್ನು ಪ್ರದರ್ಶಿಸಿ ಪ್ರಸ್ತುತಪಡಿಸಿದರು.

ಜೆ.ಎಸ್.ಎಸ್ ಮಹಿಳಾ ಕಾಲೇಜು: ನಗರದ ಜೆ.ಎಸ್.ಎಸ್ ಮಹಿಳಾ ಕಾಲೇಜು ಆವರಣದಲ್ಲಿ ಶ್ರೀಪತಂಜಲಿ ಯೋಗ ಶಿಕ್ಷಣ ಸೇವಾ ಸಮಿತಿಯ ಯೋಗಬಂಧುಗಳು ಹಾಗೂ 650ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸಾಮೂಹಿಕ ಯೋಗಾಭ್ಯಾಸ ಕಾರ್ಯಕ್ರಮ ಬಹಳ ಯಶಸ್ವಿಯಾಗಿ ನಡೆಯಿತು. ಪ್ರಾಂಶುಪಾಲ ಉಮೇಶ್ ಉದ್ಘಾಟಿಸಿದರು. ಶ್ರೀಪತಂಜಲಿ ಯೋಗ ಶಿಕ್ಷಣಾ ಸೇವಾ ಸಮಿತಿಯ ಉಪಾಧ್ಯಕ್ಷ ಯೋಗ ದೊರೆಸ್ವಾಮಿ ಮಾತನಾಡಿದರು. ಯೋಗ ಬಂಧು ರವಿ, ದೈಹಿಕ ಶಿಕ್ಷಕ ಮಂಜು, ಉಮೇಶ್, ಶಿಕ್ಷಕ ಕುಮಾರ ಸ್ವಾಮಿ, ಸುಮ ರಾಣಿ, ಚೈತ್ರ, ಆಯುಷ್ಯ, ಮಂಜುನಾಥ, ದೇವಕಿ, ವಿಮಲ, ವಿನೂತ, ಅಮೂಲ್ಯ, ಆಶಾರಾಣಿ, ಹಜೀರ, ಭಾನುಮತಿ ಭಾಗವಹಿಸಿದ್ದರು.

ಹರವೆ : ತಾಲೂಕಿನ ಹರವೆ ಗ್ರಾಮದ ಚನ್ನಬಸವೇಶ್ವರ ಆಂಗ್ಲಮಾಧ್ಯಮ ಶಾಲೆಯಲ್ಲಿ ಯೋಗದಿನಾಚರಣೆಗೆ ಚಾಲನೆ ನೀಡಿ ಹರವೆ ವಿರಕ್ತಮಠದ ಸರ್ಪ ಭೂಷಣ ಸ್ವಾಮೀಜಿ ಮಾತನಾಡಿ, ಯೋಗ ಪ್ರಾಚೀನಕಲೆಯಾಗಿದ್ದು, ಇದು ನಮ್ಮಗಳ ಮಾನಸಿಕ ಹಾಗೂ ದೈಹಿಕ ಸದೃಢತೆಗೆ ಸಹಕಾರಿಯಾಗಲಿದೆ. ಏಕಾಗ್ರತೆ ಜತೆಗೆ ವ್ಯಕ್ತಿಯ ವ್ಯಕ್ತಿತ್ವ ವಿಕಸನವಾಗಲು ಯೋಗಾಭ್ಯಾಸ ನೆರವಾಗಲಿದೆ ಎಂದರು.

ಮೈಸೂರು ಮಹಾರಾಜ ಆಯುರ್ವೇದ ಕಾಲೇಜಿನ ಯೋಗ ಶಿಕ್ಷಕ ಡಾ. ಸುಪ್ರಿಯಾ, ವಿದ್ಯಾರ್ಥಿಗಳ ಜತೆ ಯೋಗದ ವಿವಿಧ ಭಂಗಿಗಳನ್ನು ಪ್ರದರ್ಶಿಸಿ, ನೆರೆದಿದ್ದವರ ಗಮನಸೆಳೆದರು. ಚನ್ನಬಸವೇಶ್ವರ ಪ್ರತಿಷ್ಠಾನದ ಕಾರ್ಯದರ್ಶಿ ಎಚ್.ಎಸ್.ಗಿರೀಶ್, ಪ್ರೌಢಶಾಲಾ ಮುಖ್ಯ ಶಿಕ್ಷಕ ರಾಜು, ಪೋಷಕ ಮೂಡ್ನಾ ಕೂಡು ಮಹೇಶ್, ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರು ಸಿಬ್ಬಂದಿ ಹಾಜರಿದ್ದರು.

ಗುಂಡ್ಲುಪೇಟೆ : ಇಲ್ಲಿನ ಶ್ರೀ ಮದ್ವಾನೇಶ್ವರ ಮಹಾಮನೆ ಯೋಗ ಕೇಂದ್ರದಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.

ಯೋಗ ಗುರುಗಳಾದ ನಾಗೇಶ್, ಬಸವಣ್ಣ, ರಾಜಪ್ಪನವರ ಸಮ್ಮುಖದಲ್ಲಿ ಮಹಾಮನೆಯಾ ವಿದ್ಯಾರ್ಥಿಗಳು ಬೇಗೂರು ಶಾಲೆಯ ಮಕ್ಕಳು ಭಾಗವಹಿಸಿದ್ದರು ಕಾರ್ಯಕ್ರಮದಲ್ಲಿ ಅಧ್ಯಕ್ಷ ಶ್ರೀನಿವಾಸ್ ಕಾರ್ಯದರ್ಶಿ ಗಿರೀಶ್, ಬಿಜೆಪಿ ಮಂಡಲ ಅಧ್ಯಕ್ಷ ಮಹಾದೇವ ಪ್ರಸಾದ್ ಹಾಗೂ ಎಲ್ಲ ಯೋಗ ಬಂಧುಗಳು ಹಾಜರಿದ್ದರು.

ಬೇಗೂರಿನಲ್ಲಿ ರಕ್ತದಾನ ಶಿಬಿರ



ಬೇಗೂರು, ಜೂ.21–ಗ್ರಾಮದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಭಾರತೀಯ ರೆಡ್ ಕ್ರಾಸ್ ಸೊಸೈಟಿ ಚಾನಗರ ಸಹಯೋಗದಲ್ಲಿ ರಕ್ತದಾನದ ಬಗ್ಗೆ ಅರಿವು, ರಕ್ತದ ಗುಂಪಿನ ತಪಾಸಣೆ ಮತ್ತು ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು.

ಚಾಮರಾಜನಗರ ಬಸವರಾಜೇಂದ್ರ ಆಸ್ಪತ್ರೆ ಆಡಳಿತ ಅಧಿಕಾರಿ ಮತ್ತು ಸಿಬ್ಬಂದಿಗಳು ಪ್ರಾಚಾರ್ಯರು ಸುಚಿತ್ರ ಸಿಆರ್ ಆಡಳಿತ ಅಧಿಕಾರಿ ರಜನಿ, ತರಬೇತಿ ಅಧಿಕಾರಿ ಪ್ರಸಾದ್, ಮತ್ತು ಡಾಕ್ಟರ್ ಮಂಜುನಾಯಕ್ ಮತ್ತು ಸಿಬ್ಬಂದಿಗಳು ಹಾಜರಿದ್ದು ಒಟ್ಟು 35 ಯೂನಿಟ್ ರಕ್ತದಾನ ಮಾಡಿದರು

ವೀರನಪುರ ಪಡ್ಲಹಟ್ಟಿ ಗುರುಸ್ವಾಮಪ್ಪ ನಿಧನ



ಚಾಮರಾಜನಗರ, ಜೂ.21– ತಾಲೂಕಿನ ವೀರನಪುರ ಗ್ರಾಮದ ಪಡ್ಲಹಟ್ಟಿ ಗುರುಸ್ವಾಮಪ್ಪ (90) ಭಾನುವಾರ ನಿಧನರಾದರು. ಮೃತರಿಗೆ ಪತ್ನಿ ಪುತ್ರ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ಮೃತರು ಪತ್ರಕರ್ತ ಲಿಂಗಪ್ಪನವರ ಮಾವ, ಸಾಯಂಕಾಲ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನೆರ ವೇರಿತು ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ಆಡಂಬರ ಮುಕ್ತ ಸರಳ ವಿವಾಹ ಅಗತ್ಯ

ಚಾಮರಾಜನಗರ, ಜೂ.21–ಇಂದಿನ ಕಾಲದಲ್ಲಿ ಸರಳತೆಯನ್ನು ಅಳವಡಿಸಿಕೊಂಡು ಸರಳ ವಿವಾಹವಾಗುವುದು ತುರ್ತು ಅಗತ್ಯವಾಗಿದೆ ಎಂದು ದೀನಬಂಧು ಸಂಸ್ಥೆ ಗೌರವ ಕಾರ್ಯದರ್ಶಿ ಜಿ.ಎಸ್. ಜಯದೇವ ಅಭಿಪ್ರಾಯಪಟ್ಟಿದ್ದಾರೆ.

ನಗರದ ದೀನಬಂಧು ಸಂಸ್ಥೆಯ ಮೀನಾಕ್ಷಿ ಭವನದಲ್ಲಿ ಭಾನುವಾರ ನಡೆದ ಚಿತ್ರ ಕಲಾವಿದ ಮಧುಸೂದನ್ ಹೊಸೂರು ಹಾಗೂ ರೂಪಾ ಅವರ 'ಮಂತ್ರಮಾಂಗಲ್ಯ' ಸರಳ ವಿವಾಹ ಸಮಾರಂಭದಲ್ಲಿ ಮಾತನಾಡಿದ ಅವರು, ಮದುವೆಯಂತಹ ಸಂಭ್ರಮಗಳಿಗೆ ದೊಡ್ಡ ದೊಡ್ಡ ಬ್ಯಾನರ್‌ಗಳು, ಅತಿಯಾದ ವೆಚ್ಚ ಹಾಗೂ ಆಡಂಬರದ ಮೆರವಣಿಗೆಗಳ ಅಗತ್ಯವಿಲ್ಲ. ಸರಳವಾಗಿಯೂ ಅತ್ಯಂತ ಸಂತೋಷದಿಂದ ಕಾರ್ಯಕ್ರಮ ನಡೆಸಬಹುದು ಎಂಬುದಕ್ಕೆ ಈ ವಿವಾಹವೇ ಸಾಕ್ಷಿ. ಇಂತಹ ಮಾದರಿಯನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು, ಎಂದರು.

ಚಿಂತಕ ಪ್ರೊ. ಕಾಳೇಗೌಡ ನಾಗವಾರ ನೂತನ ವಧು–ವರರಿಗೆ ಮಂತ್ರಮಾಂಗಲ್ಯದ ಪ್ರಮಾಣ ವಚನ ಬೋಧಿಸಿದರು.

ಮತ್ತೊಬ್ಬ ಪ್ರಮುಖ ಧನಂಜಯ ಎಲಿಯೂರು ಅವರು ಮಂತ್ರಮಾಂಗಲ್ಯ ವಿವಾಹ ಪದ್ಧತಿಯ ಉದ್ದೇಶ ವಿವರಿಸಿ, ವಿವಾಹ ಕಾರ್ಯಕ್ರಮ ನಡೆಸಿಕೊಟ್ಟರು. ಈ ಅರ್ಥಪೂರ್ಣ ಸರಳ ವಿವಾಹ ಕಾರ್ಯಕ್ರಮದಲ್ಲಿ ಸಾಹಿತಿ ಮಂಜು ಕೋಡಿಉಗನೆ, ವೆಂಕಟರಮಣಸ್ವಾಮಿ ಪಾಪು, ಸೋಮಶೇಖರ ಬಿಸಲವಾಡಿ, ಸಿ.ಎಂ. ನರಸಿಂಹಮೂರ್ತಿ, ಎಚ್. ಮಹದೇವ, ಮುಡಿಗುಂಡ ಮೂರ್ತಿ, ಕಿರಣ್ ಗಿರ್ಗಿ, ರಾಜೇಂದ್ರ ಪ್ರಸಾದ್, ಸಿ. ಮಾದೇಗೌಡ, ಗುರುರಾಜು, ರಿದಂ ರಾಮಣ್ಣ, ಶಿವಶಂಕರ ಚಟ್ಟು ಹಾಗೂ ವಧು–ವರರ ತಂದೆ–ತಾಯಿ ಮತ್ತು ಪ್ರಮುಖರು ಉಪಸ್ಥಿತರಿದ್ದು ನೂತನ ದಂಪತಿಗಳಿಗೆ ಹರಸಿದರು.


ಚಿತ್ರ ಕಲಾವಿದ ಮಧುಸೂದನ್ ಹೊಸೂರು ಮತ್ತು ರೂಪಾ ವಚನ ಮಾಂಗಲ್ಯದ ಸರಳ ವಿವಾಹವಾದರು.

ನಾಳೆ ಫೋನ್ ಇನ್ ಕಾರ್ಯಕ್ರಮ

ಚಾಮರಾಜನಗರ: ಜಿಲ್ಲೆಯ ಸಾರ್ವಜನಿಕರ ಕುಂದು ಕೊರತೆಗಳನ್ನು ಆಲಿಸಿ ಪರಿಹರಿಸುವ ಸಲುವಾಗಿ ನೇರ ಫೋನ್ ಇನ್ ಕಾರ್ಯಕ್ರಮವನ್ನು ಜೂ.23ರಂದು ಬೆಳಿಗ್ಗೆ 11 ರಿಂದ 12 ಗಂಟೆಯವರೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಜಿಲ್ಲಾಧಿಕಾರಿಗಳು, ಜಿಪಂ ಸಿಇಓ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಹಾಗೂ ಇತರೆ ಎಲ್ಲಾ ಜಿಲ್ಲಾಮಟ್ಟದ ಅಧಿಕಾರಿಗಳು ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಉಪಸ್ಥಿತರಿರುತ್ತಾರೆ.

ಸಾರ್ವಜನಿಕರು ಜೂನ್ 23ರಂದು ಬೆಳಿಗ್ಗೆ 11 ರಿಂದ 12 ಗಂಟೆಯವರೆಗೆ ದೂ.ಸಂಖ್ಯೆ 08226–223163 ಗೆ ಕರೆ ಮಾಡಿ ತಮ್ಮ ಕುಂದು ಕೊರತೆಗಳನ್ನು ತಿಳಿಸಿ ಪರಿಹರಿಸಿಕೊಳ್ಳುವಂತೆ ಜಿಲ್ಲಾಧಿಕಾರಿಯವರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಬೇಗೂರಲ್ಲಿ ವಿಜೃಂಭಣೆಯ ಹನುಮ ಜಯಂತಿ



ಬೇಗೂರು:ಗ್ರಾಮದಲ್ಲಿ ಹನುಮ ಸೇವಾ ಸಮಿತಿ ಯುವಕ ಸಂಘದಿಂದ ಹನುಮ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು ಗ್ರಾಮದ ಶ್ರೀ ಬಂಡಿಗೆರೆ ಮಹದೇಶ್ವರ ಸ್ವಾಮಿ ದೇವಾಲಯದ ಆವರಣದಲ್ಲಿ ಸಮಾವೇಶಗೊಂಡ ಶ್ರೀ ಹನುಮ ಸೇವಾ ಸಮಿತಿಯ ಪದಾಧಿಕಾರಿಗಳು ಮತ್ತು ಗ್ರಾಮಸ್ಥರು ಹಾಗೂ ಸಾರ್ವಜನಿಕರು ಶ್ರೀ ಬಂಡಿಗೆರೆ ಮಹದೇಶ್ವರ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದರು.

ನಂತರ ಟ್ರ್ಯಾಕ್ಟರ್‌ನಲ್ಲಿ ಹನುಮನ ವಿಗ್ರಹ ಹಾಗೂ ಶ್ರೀರಾಮನ ವಿಗ್ರಹಕ್ಕೆ ವಿವಿಧ ಹೂಗಳಿಂದ ಅಲಂಕರಿಸಿ, ಹನುಮ ಸೇವಾ ಸಮಿತಿಯ ಸದಸ್ಯರು ಮತ್ತು ಗ್ರಾಮಸ್ಥರು ಪೂಜೆ ಸಲ್ಲಿಸಿ ಹನುಮ ಜಯಂತಿಯ ಮೆರವಣಿಗೆಗೆ ಚಾಲನೆ ನೀಡಿದರು.

ಮೆರವಣಿಗೆಯಲ್ಲಿ ಹನುಮ ಶ್ರೀರಾಮನ ವಿಗ್ರಹಗಳು ಹಾಗೂ ವೀರಗಾಸೆ, ಡೋಲು ಕುಣಿತ, ನಗರಿ ವಾದ್ಯ ಮೇಳಗಳ ನಡುವೆ ಗ್ರಾಮದ ರಾಷ್ಟ್ರೀಯ ಹೆದ್ದಾರಿ 766 ರಲ್ಲಿ ಅಂಚೆ ಕಚೇರಿಗೆ ಸಾಗಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಾಲಯದ ಬಳಿಯವರೆಗೆ ಮೆರವಣಿಗೆ ವಿಜೃಂಭಣೆಯಿಂದ ನಡೆಯಿತು ಬೇಗೂರು ಮತ್ತು ಸುತ್ತ ಮುತ್ತಲ ಗ್ರಾಮಗಳ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು.

ಹೂಟಗಳ್ಳಿಯ ಓವೆಲ್ ಪಾರ್ಕ್‌ನಲ್ಲಿ ಯೋಗ ದಿನಾಚರಣೆ, ಆರೋಗ್ಯ ತಪಾಸಣಾ ಶಿಬಿರ



ಮೈಸೂರು, ಜೂ.21(ಎಂಕೆ)– ಮೈಸೂರು ಹೂಟಗಳ್ಳಿಯ ಓವೆಲ್ ಪಾರ್ಕ್‌ನಲ್ಲಿ ನಾರಾಯಣ ಹೃದಯಾಲಯ, ಕ್ಲಿಯರ್ ಮೆಡಿ ರೇಡಿಯಂಟ್, ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ಹಾಗೂ ಸಿಪ್ಲಿ ಆಯುಷ್ ವತಿಯಿಂದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಯಿತು.

ಉದ್ಯಾನವನಕ್ಕೆ ತಂಡೋಪತಂಡವಾಗಿ ಆಗಮಿಸಿದ 2 ಸಾವಿರಕ್ಕೂ ಹೆಚ್ಚು ಮಂದಿ ಸಾಮೂಹಿಕವಾಗಿ ವಿವಿಧ ಯೋಗಾಸನಗಳನ್ನು ಮಾಡುವ ಮೂಲಕ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಿದರು. ನಂತರ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲೂ ಭಾಗವಹಿಸಿ, ಆರೋಗ್ಯ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ವೈದ್ಯರಿಂದ ಸಲಹೆಗಳನ್ನು ಪಡೆದುಕೊಂಡರು.

ಶ್ರೀ ಯೋಗನರಸಿಂಹಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿ ಡಾ.ಶ್ರೀನಿವಾಸನ್ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಉದ್ಘಾಟಿಸಿದರು. ಮೈಸೂರು ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಅಲೆಯನ್ಸ್ ಕ್ಲಬ್‌ನ ಮಹಾಬಲೇಶ್ವರ ಭೈರಿ, ಸಿರಿಬಾಲು, ಸಿರಿ ವಿದ್ಯಾಲಯದ ಶೋಭಾ ಸಿರಿಬಾಲು, ಸುದರ್ಶನ ವಿದ್ಯಾಸಂಸ್ಥೆಯ ಪ್ರಾಂಶುಪಾಲ ಸುರೇಶ್, ಅನಂತರಾವ್, ಶ್ರೀದೇವಿ, ಡಿ.ಮಹದೇವ್, ಮೈಸೂರು ಜಿಲ್ಲಾ ಯೋಗ ಒಕ್ಕೂಟದ ಜಿಲ್ಲಾಧ್ಯಕ್ಷ ಡಾ.ರಾಜು. ಪ್ರಧಾನ ಕಾರ್ಯದರ್ಶಿ ಯೋಗ ಕುಮಾರ್ ಮತ್ತಿತರರಿದ್ದರು.

ಸಿಗ್ಮಾ ಆಸ್ಪತ್ರೆಯಲ್ಲಿ ಯೋಗ ದಿನಾಚರಣೆ



ಮೈಸೂರು, ಜೂ.21– ಮೈಸೂರಿನ ಸಿಗ್ಮಾ ಆಸ್ಪತ್ರೆ, ಸಿಗ್ಮಾ ನರ್ಸಿಂಗ್ ಕಾಲೇಜು, ವಿಶ್ವಶಾಂತಿ ಸಂಸ್ಥೆ ವತಿಯಿಂದ ಆಸ್ಪತ್ರೆಯ ಆವರಣದಲ್ಲಿ ಅಂತರ ರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಸಿಗ್ಮಾ ಆಸ್ಪತ್ರೆಯ ಡಾ. ಸಿದ್ದಲಿಂಗೇಶ್ವರ ಮಾತನಾಡಿ, ಯೋಗವು ಯುಗಯುಗಾಂತರದಿಂದ ಋಷಿಗಳಿಂದ, ಹರಪ್ಪ ಮೊಹೆಂಜದಾರೋ, ಸಿಂಧೂ ನಾಗರಿಕತೆಯಿಂದ, ಸನಾತನ ಹಿಂದೂ ದೇಶದಿಂದ, ಚರಕ ಮಹರ್ಷಿಗಳಿಂದ ಮಹತ್ವವನ್ನು ಪಡೆದಿದೆ. ಅರವಿಂದ ಮಹರ್ಷಿ, ಪತಂಜಲಿ ಮಹರ್ಷಿ, ಮೈಸೂರಿನ ಜಗ್ಗಿ ವಾಸುದೇವ್, ಈಶಾ ಫೌಂಡೇಶನ್, ರವಿ ಶಂಕರ್ ಅವರ ಆರ್ಟ್ ಆಫ್ ಲಿವಿಂಗ್ ಫೌಂಡೇಶನ್‌ಗಳು ಯೋಗಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿವೆ ಎಂದರು.

ಸಿಗ್ಮಾ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಎಸ್. ಜ್ಞಾನ ಶಂಕರ್ ಮಾತನಾಡಿ, ನಮ್ಮ ಆಸ್ಪತ್ರೆಯು ಪ್ರತಿವರ್ಷ ಮೈಸೂರಿನ ನಾಗರಿಕರ ಆರೋಗ್ಯ ಮತ್ತು ದೀರ್ಘಾಯುಷ್ಯಕ್ಕಾಗಿ ಯೋಗ ದಿನ ಆಚರಿಸುತ್ತಾ ಬಂದಿದೆ ಎಂದರು.

ಡಾ.ಕೃಷ್ಣ ಮಾತನಾಡಿ, ಯೋಗ ಎಂದರೆ ಕೇವಲ ಆಸನಗಳಲ್ಲ ಉಸಿರಾಟದ ನಿಯಂತ್ರಣ, ಧ್ಯಾನ, ಮನಸ್ಸಿನ ಏಕಾಗ್ರತೆ ಮತ್ತು ದೇಹ ಮನಸ್ಸಿನ ಸಮತೋಲನಕ್ಕೆ ಸಹಕಾರಿಯಾಗಿದೆ. ಜೀರ್ಣಾಂಗ, ಹೊಟ್ಟೆ ಉಬ್ಬರ, ದೇಹದಲ್ಲಿ ವಾಯು ಪ್ರಕೋಪ, ನಿದ್ರೆ ಮತ್ತು ಉದರ ಸಮಸ್ಯೆಗಳ ನಿವಾರಣೆಗೆ ಯೋಗ ಫಲಕಾರಿಯಾಗಿದೆ ಎಂದರು.

ಆಸ್ಪತ್ರೆಯ ತಜ್ಞ ವೈದ್ಯ ಡಾ.ರಾಕೇಶ್ ರಾಜೇ ಅರಸ್ ಮಾತನಾಡಿದರು.

ಈ ವೇಳೆ ಕಾರ್ಯಕ್ರಮದಲ್ಲಿ ಸಿಗ್ಮಾ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಮಂಜುನಾಥ್, ಡಾ.ರಾಕೇಶ್ ಅರಸ್, ಡಾ.ಸಿದ್ದಲಿಂಗೇಶ್, ಯೋಗ ಪ್ರವೀಣ, ಸಿಗ್ಮಾ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಎಸ್.ಜ್ಞಾನಶಂಕರ್, ಡಾ.ಕೃಷ್ಣ, ಯೋಗ ಗುರು ರಮಣೀಕರ್ ಮತ್ತು ಆಸ್ಪತ್ರೆಯ ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಶಿಕ್ಷಕರಿಗೆ ಅರ್ಹತಾ ಪರೀಕ್ಷೆಯಿಂದ ವಿನಾಯ್ತಿ ನೀಡುವಂತೆ ಎಡಿಸಿಗೆ ಮನವಿ



ಶಿಕ್ಷಕರಿಗೆ ಕಡ್ಡಾಯವಾಗಿ ಶಿಕ್ಷಕರ ಅರ್ಹತಾ ಪರೀಕ್ಷೆಯಿಂದ ವಿನಾಯ್ತಿ ನೀಡಬೇಕೆಂದು ಎಡಿಸಿ ಐಶ್ವರ್ಯ ಅವರಿಗೆ ಮನವಿ ಸಲ್ಲಿಸಲಾಯಿತು.

ಮೈಸೂರು: ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘ, ಮೈಸೂರು ಜಿಲ್ಲಾ ಘಟಕವು 2026 ಮೇ 29ರಂದು ಸುಪ್ರೀಂ ಕೋರ್ಟ್ ನ್ಯಾಯಾಲಯವು ನೀಡಿರುವ ತೀರ್ಪನ್ನು ಗೌರವಿಸುತ್ತಾ, ಈಗಾಗಲೇ ಶಿಕ್ಷಕರ ವೃತ್ತಿಯಲ್ಲಿ ಅನೇಕ ವರ್ಷಗಳಿಂದ ಸುದೀರ್ಘವಾಗಿ ಸೇವೆ ಸಲ್ಲಿಸುತ್ತಿರುವ 17 ಲಕ್ಷ ಶಿಕ್ಷಕರಿಗೆ ಅಂದರೆ 2010ರೊಳಗೆ ನೇಮಕಗೊಂಡಿರುವ ಶಿಕ್ಷಕರಿಗೆ ಕಡ್ಡಾಯವಾಗಿ ಶಿಕ್ಷಕ ಅರ್ಹತಾ ಪರೀಕ್ಷೆ (ಟಿಇಟಿ)ಯಿಂದ ವಿನಾಯ್ತಿ ನೀಡಬೇಕೆಂದು ಜಿಲ್ಲಾ ಅಪರ ಜಿಲ್ಲಾಧಿಕಾರಿ ಐಶ್ವರ್ಯ ಅವರ ಮೂಲಕ ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಲಾಯಿತು. ರಾಜ್ಯ ಮಾಧ್ಯಮಿಕ ಸಂಘದ ಅಧ್ಯಕ್ಷ ಕೆಂಪಯ್ಯ, ಪ್ರಧಾನ ಕಾರ್ಯದರ್ಶಿ ವಿಜಯ್‌ಕುಮಾರ್, ಸಂಘಟನಾ ಕಾರ್ಯದರ್ಶಿ ಅರುಣ್ ಕುಮಾರ್ ಇತರರು ಉಪಸ್ಥಿತರಿದ್ದರು.

ನಟ ಪ್ರಕಾಶ್ ರಾಜ್ ವಿರುದ್ಧ ಅರೆಸ್ಟ್ ವಾರೆಂಟ್ ಜಾರಿ



ಬೆಂಗಳೂರು: ಬಹುಭಾಷಾ ನಟ ಪ್ರಕಾಶ್ ರಾಜ್ ಅವರು ಹಲವು ರಾಜ್ಯಗಳಲ್ಲಿ ಮತದಾರರ ಗುರುತು ಪತ್ರ ಪಡೆದಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಕಾನೂನು ಸಂಕಷ್ಟಕ್ಕೆ ಸಿಲುಕಿದ್ದು, ಈ ಸಂಬಂಧ ಬೆಂಗಳೂರಿನ 48ನೇ ಹೆಚ್ಚುವರಿ ಮುಖ್ಯ ಮಹಾನಗರ ದಂಡಾಧಿಕಾರಿ ನ್ಯಾಯಾಲಯ ಅವರ ವಿರುದ್ಧ ಜಾಮೀನು ರಹಿತ ಬಂಧನ ವಾರಂಟ್ ಹೊರಡಿಸಿದೆ.

ಈ ಪ್ರಕರಣವು ದಿಲೀಪ್ ಕುಮಾರ್ ಎಂಬ ವ್ಯಕ್ತಿಯು ಸಲ್ಲಿಸಿದ ದೂರಿನ ಆಧಾರದ ಮೇಲೆ ದಾಖಲಾಗಿದ್ದು, ಇದರನ್ವಯ ಪ್ರಕಾಶ್ ರಾಜ್ ಅವರು ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಾಣ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಮತದಾರರ ಗುರುತಿನ ಚೀಟಿಗಳನ್ನು ಪಡೆಯುವ ಮೂಲಕ ನಿಯಮಗಳನ್ನು ಉಲ್ಲಂಘಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಇತ್ತೀಚಿನ ಬೆಳವಣಿಗೆಯ ಪ್ರಕಾರ, ನ್ಯಾಯಾಲಯವು ಹಲವು ಬಾರಿ ಅವಕಾಶ ನೀಡಿದರೂ ಪ್ರಕಾಶ್ ರಾಜ್ ಅವರು ವಿಚಾರಣೆಗೆ ಹಾಜರಾಗಿಲ್ಲ ಎಂದು ತಿಳಿದುಬಂದಿದೆ. ನ್ಯಾಯಾಲಯದ ದಾಖಲೆಗಳ ಪ್ರಕಾರ, ಅವರಿಗೆ ಎರಡು ಬಾರಿ ಸಮನ್ಸ್ ಜಾರಿಗೊಳಿಸಲಾಗಿತ್ತು. ಅವರು ಹಾಜರಾಗದ ಕಾರಣ, ನಂತರ ಎರಡು ಬಾರಿ ಜಾಮೀನು ರಹಿತ ವಾರಂಟ್‌ಗಳನ್ನು ಹೊರಡಿಸಲಾಗಿತ್ತು. ಆದಾಗ್ಯೂ, ಅವರು ನ್ಯಾಯಾಲಯದ ಮುಂದೆ ವಿಚಾರಣೆಗೆ ಹಾಜರಾಗಿಲ್ಲವೆಂದು ಹೇಳಲಾಗಿದೆ. ಇದರ ಪರಿಣಾಮವಾಗಿ, ಬೆಂಗಳೂರು ದಂಡಾಧಿಕಾರಿ ನ್ಯಾಯಾಲಯವು ಇದೀಗ ಮೂರನೇ ಬಾರಿ ಅವರ ವಿರುದ್ಧ ಜಾಮೀನು ರಹಿತ ಬಂಧನ ವಾರಂಟ್ ಹೊರಡಿಸಿದೆ. ಪ್ರಕರಣದ ವಿಚಾರಣೆಗೆ ಸಂಬಂಧಿಸಿ ಅವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ಸಂಬಂಧಿತ ಅಧಿಕಾರಿಗಳಿಗೆ ನ್ಯಾಯಾಲಯ ನಿರ್ದೇಶನ ನೀಡಿದೆ. ಈ ಆರೋಪ ಇನ್ನೂ ನ್ಯಾಯಾಲಯದಲ್ಲಿ ಸಾಬೀತಾಗಿಲ್ಲ.

ಬಸವಮಾರ್ಗ ಫೌಂಡೇಷನ್‌ನಿಂದ ಯೋಗ ದಿನಾಚರಣೆ

ದೈಹಿಕ, ಮಾನಸಿಕ, ಆಧ್ಯಾತ್ಮಿಕ ಆರೋಗ್ಯ ಸುಧಾರಿಸುವ ಮಾರ್ಗ ಯೋಗ



ನಗರದ ಬಸವಮಾರ್ಗ ಫೌಂಡೇಷನ್‌ನಲ್ಲಿ ಭಾನುವಾರ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು.

ಮೈಸೂರು, ಜೂ.21– ಯೋಗವು ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಆರೋಗ್ಯವನ್ನು ಸುಧಾರಿಸುವ ಪ್ರಾಚೀನ ಭಾರತೀಯ ಅಭ್ಯಾಸವಾಗಿದೆ ಎಂದು ಬಸವಮಾರ್ಗ ಫೌಂಡೇಷನ್ ಸಂಸ್ಥಾಪಕ ಎಸ್.ಬಸವರಾಜು ಅಭಿಪ್ರಾಯಪಟ್ಟರು.

ನಗರದ ಹೆಬ್ಬಾಳಿನಲ್ಲಿರುವ ಬಸವ ಮಾರ್ಗ ಫೌಂಡೇಷನ್‌ನಲ್ಲಿ ಭಾನುವಾರ ಆಯೋಜಿಸಿದ್ದ ವಿಶ್ವ ಯೋಗದಿನದಲ್ಲಿ ಅವರು ಮಾತನಾಡಿದರು.

ಆಸನಗಳು ದೇಹವನ್ನು ಸದೃಢವಾಗಿ ಇಟ್ಟರೆ, ಧ್ಯಾನ ಮತ್ತು ಪ್ರಾಣಾಯಾಮವು ಮನಸ್ಸು ಮತ್ತು ಭಾವನೆಗಳನ್ನು ಆರೋಗ್ಯವಾಗಿಡುತ್ತದೆ. ಆ ಮೂಲಕ ಯೋಗವು ಒತ್ತಡ ಮತ್ತು ಆತಂಕವನ್ನು ನಿವಾರಿಸಿ ಏಕಾಗ್ರತೆಯನ್ನು ಸುಧಾರಿಸುತ್ತದೆ ಎಂದರು.

ಬಸವಮಾರ್ಗ ಸಂಸ್ಥೆಯಲ್ಲಿ ಯೋಗ, ಧ್ಯಾನ ಮತ್ತು ಪ್ರಾಣಾಯಾಮವನ್ನು ಒಂದು ಚಿಕಿತ್ಸೆ ರೂಪದಲ್ಲಿ ಅಳವಡಿಸಿಕೊಳ್ಳಲಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯು ಯೋಗಾಭ್ಯಾಸ ಮಾಡುವ ಮೂಲಕ ಆರೋಗ್ಯವಂತ ಜೀವನ ನಡೆಸಬೇಕೆಂದು ಸಲಹೆ ನೀಡಿದರು.

ಉದ್ಯಮಿ ಎಚ್.ಎನ್.ರವಿಕುಮಾರ್ ಮಾತನಾಡಿ, ನಿಯಮಿತ ಯೋಗಾಭ್ಯಾಸವು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಸುಧಾರಿಸಲು ಅತ್ಯುತ್ತಮವಾದ ಮಾರ್ಗವಾಗಿದೆ. ಇದು ನಮ್ಯತೆ, ಬಲ ಮತ್ತು ಸಮತೋಲನವನ್ನು ಹೆಚ್ಚಿಸುವುದಲ್ಲದೆ, ಒತ್ತಡವನ್ನು ಕಡಿಮೆ ಮಾಡಲು ಸಹಕರಿಸುತ್ತದೆ ಎಂದರು.

ಧ್ಯಾನ ಮತ್ತು ಉಸಿರಾಟದ ನಿಯಂತ್ರಣದಿಂದ ಮನಸ್ಸಿಗೆ ಶಾಂತಿ ದೊರೆಯುತ್ತದೆ. ನಿದ್ರೆಯ ಗುಣಮಟ್ಟ ಸುಧಾರಿಸುತ್ತದೆ ಮತ್ತು ಆತಂಕ ದೂರವಾಗುತ್ತದೆ. ಈ ನಿಟ್ಟಿನಲ್ಲಿ ಆರೋಗ್ಯಪೂರ್ಣ ಜೀವನಕ್ಕೆ ಯೋಗ ಅತ್ಯವಶ್ಯಕವಾಗಿದೆ ಎಂದು ತಿಳಿಸಿದರು.

ಕೇಂದ್ರ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಯೋಗ ಶಿಕ್ಷಕಿಯರಾದ ಎಂ.ಕಲಾವತಿ, ತೇಜಸ್ವಿನಿ ಹಾಗೂ ಶುಭಾ ಅವರ ನೇತೃತ್ವದಲ್ಲಿ ಶಿಬಿರಾರ್ಥಿಗಳು ಸಾಮೂಹಿಕವಾಗಿ ಯೋಗಾಭ್ಯಾಸ ಮಾಡಿದರು.

ಮೈಸೂರು ಮಿತ್ರ ಸೋಮವಾರ 22 ಜೂನ್ 2026

ಕಳೆದ ಚುನಾವಣೆಯಲ್ಲಿ 10 ಸಾವಿರಕ್ಕೂ ಹೆಚ್ಚು ಅಕ್ರಮ ಮತದಾನ

ಮತದಾರರ ಪರಿಷ್ಕರಣೆಯಲ್ಲಿ 7980 ಮತದಾರರ ಗುರುತು ಪತ್ತೆಯಾಗಿಲ್ಲ: ಮಾಜಿ ಸಚಿವ ಸಾ.ರಾ.ಮಹೇಶ್ ಆರೋಪ

ಕೆ.ಆರ್.ನಗರ, ಜೂ.21– ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದಲ್ಲಿ ಮತದಾರರ ಪರಿಷ್ಕರಣೆ (ಎಸ್‌ಐಆರ್) ಪ್ರಕಾರ 7,980 ಮತದಾರರ ಗುರುತು ಯಾವುದೇ ದಾಖಲೆಗಳಿಲ್ಲದೆ ಹೊಂದಾಣಿಕೆಯಾಗಿಲ್ಲ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಚುನಾವಣಾ ಆಯೋಗದ ವಿರುದ್ಧ ಗಂಭೀರ ಆರೋಪ ಮಾಡಿದರು.

ಪಟ್ಟಣದ ಶಿವಾನುಭವ ಮಂಟಪದಲ್ಲಿ ಜೆಡಿಎಸ್ ಪಕ್ಷದಿಂದ ಆಯೋಜಿಸಿದ್ದ ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ವಿಶೇಷ ಸಮಗ್ರ ಮತದಾರರ ಪರಿಷ್ಕರಣೆಯ ಬಿಎಲ್‌ಎ–2 ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಕಳೆದ ವಿಧಾನಸಭಾ ಚುನಾವಣೆಯಲ್ಲಿ 10 ಸಾವಿರಕ್ಕೂ ಹೆಚ್ಚು ಮತದಾರರು ಅಕ್ರಮವಾಗಿ ಮತ ಚಲಾವಣೆ ಮಾಡಿದ್ದಾರೆ. ಕೆ.ಆರ್.ನಗರದಲ್ಲಿ ನಾಲ್ಕು ಸಾವಿರ ಮತದಾರರ ಗುರುತು ಪತ್ತೆ ಆಗಿಲ್ಲ. ಇನ್ನೂ ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕಿನಲ್ಲಿ ಉಳಿದ ನಾಲ್ಕು ಸಾವಿರ ಮತದಾರರ ಗುರುತು ಪತ್ತೆ ಮಾಡಲು ಸಾಧ್ಯವಾಗಿಲ್ಲ ಎಂದರು.

ಮೃತಪಟ್ಟವರ ಹೆಸರಲ್ಲಿ ಕೆಲವರು ಮತ ಹಾಕಿದ್ದಾರೆ ಎಂದು ಆರೋಪಿಸಿದ ಮಾಜಿ ಸಚಿವರು ಇನ್ನೂ ಕೆಲವರು ಪಟ್ಟಣ ಹಾಗೂ ಹಳ್ಳಿಗಳಲ್ಲಿ 2 ಕಡೆಗಳಲ್ಲಿ ಮತ ಹಾಕಿದ್ದಾರೆ. ಇದು ಅಕ್ರಮ ಅಲ್ಲವೇ ಎಂದು ತಾಲೂಕು ಆಡಳಿತ ವಿರುದ್ಧ ಗುಡುಗಿದರು.

ಭಾರತೀಯ ಚುನಾವಣಾ ಆಯೋಗ ಮತದಾರರ ಪರಿಷ್ಕರಣೆಗೆ ಮುಂದಾದಾಗ ಕಾಂಗ್ರೆಸ್ ಪಕ್ಷ ಇದಕ್ಕೆ ವಿರೋಧ ವ್ಯಕ್ತಪಡಿಸಿತ್ತು. ಇದರಲ್ಲೇ ಗೊತ್ತಾಗುತ್ತದೆ ಯಾರು ನಕಲಿ ಮತ ಪಡೆಯುತ್ತಾರೆ ಎಂದು ಈ ಹಿನ್ನೆಲೆಯಲ್ಲಿ ಜೆಡಿಎಸ್ ಕಾರ್ಯಕರ್ತರಾದ ನೀವು ಬೂತ್ ಮಟ್ಟದ ಏಜೆಂಟ್‌ಗಳಿಗೆ ನಿಮ್ಮೂರಿನ ಮತದಾರರು ಯಾರು ಎಂದು ಗೊತ್ತಿರುತ್ತದೆ. ಹಾಗಾಗಿ ನಿಜವಾದ ಮತದಾರರನ್ನು ಗುರುತಿಸಿ. ಒಂದು ವೇಳೆ ಅಕ್ರಮವಾಗಿದ್ದರೆ ಅಂತಹ ಮತದಾರರನ್ನು ಮುಲಾಜಿಲ್ಲದೆ ರದ್ದು ಪಡಿಸಿ. ಮೃತಪಟ್ಟವರನ್ನು ಸಹ ಮತದಾರರ ಪಟ್ಟಿಯಿಂದ ತಪ್ಪದೇ ಡಿಲೀಟ್ ಮಾಡಿಸಿ ಎಂದು ಕರೆ ನೀಡಿದರು.

ಕ್ಷೇತ್ರದಲ್ಲಿ 250 ಬೂತ್‌ಗಳಿವೆ. 2,10,000 ಮತದಾರರು ಇದ್ದಾರೆ. ಜೂ.29ರಿಂದ ಜು.30ರವರೆಗೆ ಮತದಾರರ ಪರಿಷ್ಕರಣೆ (ಎಸ್‌ಐಆರ್) ನಡೆಯಲಿದೆ. ಹೀಗಾಗಿ ಪಕ್ಷದಿಂದ ಬಿಎಲ್‌ಒ–2 ಆಗಿ ನೇಮಕ ಮಾಡಲಾಗಿದೆಯೋ ಅವರು ಈ ಎಸ್‌ಐಆರ್ ಸಂಪೂರ್ಣ ಜವಾಬ್ದಾರಿ ಅವರದ್ದಾಗಿರುತ್ತದೆ ಎಂದರು.

ನಾನು ಶಾಸಕನಾಗಿ ನಮ್ಮಪ್ಪನನ್ನು ದೊಡ್ಡ ಹುದ್ದೆಗೆ ಅಧ್ಯಕ್ಷನಾಗಿ ಮಾಡಿದ್ದರೆ ನನ್ನ ಅಕ್ಕಪಕ್ಕದವರು, ಪಕ್ಷದ ಮುಖಂಡರೇ ಚರ್ಚೆ ಮಾಡುತ್ತಿದ್ದರು. ಹೀಗಾಗಿ ನಾನು ರಾಜಕೀಯದಲ್ಲಿ ಇರುವವರೆಗೂ ನಮ್ಮ ಕುಟುಂಬದಿಂದ ಯಾರು ಕೂಡ ಚುನಾವಣೆಯಲ್ಲಿ ಸ್ಪರ್ಧಿಸಲ್ಲ ಎಂದು ಸ್ಪಷ್ಟಪಡಿಸಿದರು.

ಇದಕ್ಕೂ ಮುನ್ನಾ ಜೆಡಿಎಸ್‌ನಿಂದ ರಾಜ್ಯ ಬಿಎಲ್‌ಎ ಆಗಿ ನೇಮಕಗೊಂಡಿರುವ ಪ್ರದೀಪ್ ಮತದಾರರ ಪರಿಷ್ಕರಣೆ (ಎಸ್‌ಐಆರ್) ಬಗ್ಗೆ ವಿವರಣೆ ನೀಡಿದರಲ್ಲದೆ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್‌ನ ಕೆಲವು ಅಭ್ಯರ್ಥಿಗಳು ಅತೀ ಕಡಿಮೆ ಅಂತರದ ಮತಗಳಿಂದ ಸೋತಿದ್ದಾರೆ. ಹಾಗಾಗಿ ಭಾರತೀಯ ಚುನಾವಣಾ ಆಯೋಗ ಕೈಗೊಂಡಿರುವ ಮತದಾರರ ಪರಿಷ್ಕರಣೆ ಬಗ್ಗೆ ಪಕ್ಷದಿಂದ ನೇಮಕಗೊಂಡಿರುವ ಬಿಎಲ್‌ಎ–2 ಅವರು ಪ್ರತಿಯೊಂದು ಬೂತ್‌ನಲ್ಲಿ ಮತದಾರರ ಪರಿಷ್ಕರಣೆ ವೇಳೆ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಿ ಎಂದರು.

ಜಿಪಂ ಮಾಜಿ ಉಪಾಧ್ಯಕ್ಷ ಅಡಗೂರು ಚನ್ನಬಸಪ್ಪ, ಜೆಡಿಎಸ್ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ತಾಲೂಕು ಜೆಡಿಎಸ್ ಅಧ್ಯಕ್ಷ ಹಂಪಾಪುರ ಕುಮಾರ್, ಸಾಲಿಗ್ರಾಮ ಮೆಡಿಕಲ್ ರಾಜಣ್ಣ, ಜೆಡಿಎಸ್ ಮತದಾರ ಪರಿಷ್ಕರಣೆ ಘಟಕದ ಅಧ್ಯಕ್ಷ ಅಂಕನಹಳ್ಳಿ ತಿಮ್ಮಪ್ಪ, ತಾಪಂ ಮಾಜಿ ಸದಸ್ಯೆ ಶೋಭಾ, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಶಿವರಾಮ್, ಜೆಡಿಎಸ್ ಜಿಲ್ಲಾಧ್ಯಕ್ಷೆ ದಾಕ್ಷಾಯಿಣಿ, ತಾಲೂಕು ಜಾ.ದಳ ಅಧ್ಯಕ್ಷೆ ರಾಜಲಕ್ಷ್ಮಿ, ತಾಲೂಕು ಯುವ ಜೆಡಿಎಸ್ ಡಿ.ವಿ.ಗುಡಿ ಯೋಗೇಶ್, ಪುರಸಭೆ ಮಾಜಿ ಸದಸ್ಯ ಸಂತೋಷ್ ಗೌಡ, ಕೆ.ಉಮೇಶ್, ರಾಜಾಶ್ರೀಕಾಂತ್, ದಲಿತ ಮುಖಂಡ ಹನಸೋಗೆ ನಾಗರಾಜ್, ಜೆಡಿಎಸ್ ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಕಗ್ಗೆರೆ ಕುಚೇಲ, ನಗರ ಯುವ ಜೆಡಿಎಸ್ ಅಧ್ಯಕ್ಷ ವಿಕಾಸ್, ಜೆಡಿಎಸ್ ಅಲ್ಪಸಂಖ್ಯಾತ ಘಟಕದ ತಾಲೂಕು ಅಧ್ಯಕ್ಷ ಮುಬಾರಕ್, ಜೆಡಿಎಸ್ ಮುಖಂಡರಾದ ಅನೀಫ್ ಗೌಡ, ಗಂಧನಹಳ್ಳಿ ಜಲೇಂದ್ರ ಅರ್ಜುನಹಳ್ಳಿ ಜ್ಞಾನಾನಂದ್, ಕಾಶಿ, ಸಾ.ರಾ.ನಾಗೇಶ್, ಡೈರಿ ಆನಂದ್, ಬಾಲಾಜಿ ಗಣೇಶ್, ರೂಪ ಸತೀಶ್, ಭಾಗ್ಯಲಕ್ಷ್ಮಿ ಸೇರಿದಂತೆ ಹಲವರಿದ್ದರು.



ಕಾರ್ಯಾಗಾರದಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್ ಮಾತನಾಡಿದರು.

ಪಕ್ಷ ತಾಯಿ ಇದ್ದಂತೆ. ಪಕ್ಷಕ್ಕೆ ದ್ರೋಹ ಮಾಡುವುದು ಒಂದೇ, ತಂದೆ ತಾಯಿಗಳನ್ನು ಬೀದಿಯಲ್ಲಿ ನಿಲ್ಲಿಸಿ ಮಾರಾಟ ಮಾಡುವುದು ಒಂದೇ ಎಂದು ಮೊನ್ನೆ ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದ ನಾಲ್ವರು ಜೆಡಿಎಸ್ ಶಾಸಕರ ಹೆಸರೇಳದೆ ಅವರ ವಿರುದ್ಧ ಗುಡುಗಿದರು. ಕಳೆದ 3 ವರ್ಷಗಳಲ್ಲಿ ಪಕ್ಷ ನಿಷ್ಠೆಯಲ್ಲಿ ಇರುವವರು ಯಾರು. 2 ಕಡೆ ಡಬ್ಬಲ್ ಗೇಮ್ ಮಾಡುವವರು ಯಾರು, ಜೊತೆಯಲ್ಲಿದ್ದು ಬೆನ್ನಿಗೆ ಚೂರಿ ಹಾಕುವವರು ಯಾರು ಎಲ್ಲವನ್ನು ತಿಳಿದುಕೊಂಡಿದ್ದೇನೆ. ಆದರೆ ಯಾರ ಬಗ್ಗೆಯೂ ಮಾತನಾಡಲ್ಲ. ಈ ಬಗ್ಗೆ ಯಾರ ಬಳಿ ಚರ್ಚೆ ಮಾಡಲ್ಲ ನನ್ನ ಮನದಲ್ಲಿ ಉಳಿದಿದೆ.

–ಸಾ.ರಾ.ಮಹೇಶ್, ಮಾಜಿ ಸಚಿವರು.

ಪ್ರತಿಯೊಬ್ಬರೂ ಯೋಗದ ಮಹತ್ವ ಅರಿಯುವುದು ಅವಶ್ಯಕ



ನಂಜನಗೂಡಿನಲ್ಲಿ ವಿಶ್ವ ಯೋಗ ದಿನಾಚರಣೆ ನಡೆಯಿತು.

ನಂಜನಗೂಡು: ಆಂತರಿಕ ಶಾಂತಿ, ಆರೋಗ್ಯಕರ ಮತ್ತು ಒತ್ತಡ ಮುಕ್ತ ಜೀವನಕ್ಕೆ ಯೋಗಾಭ್ಯಾಸ ತಳಹದಿಯಾಗಿದೆ ಎಂದು ಮೈಸೂರು ಹಿಮಾಲಯ ಪ್ರತಿಷ್ಠಾನ ಸಂಸ್ಥಾಪಕ ಎನ್.ಅನಂತು ತಿಳಿಸಿದರು.

ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಹಾಗೂ ಓಂ ಪ್ರಣಮ್ಯ ಯೋಗ ಶಾಲಾ ವತಿಯಿಂದ ನಗರದ ಜೆಎಸ್‌ಎಸ್ ಕಾಲೇಜು ಆವರಣದಲ್ಲಿ ಆಯೋಜಿಸಿದ್ದ 12ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಆಧುನಿಕ ಜ್ಞಾನ, ವಿಜ್ಞಾನ ಮತ್ತು ತಾಂತ್ರಿಕ ಯುಗದ ಒತ್ತಡದ ಜೀವನದಲ್ಲಿ ಯೋಗದ ಮಹತ್ವವನ್ನು ಎಲ್ಲರೂ ಅರಿಯುವುದು ಅವಶ್ಯಕ. ಜೀವನದ ನೈಜತೆಯನ್ನು ಅರ್ಥಪೂರ್ಣವಾಗಿಸಿಕೊಳ್ಳುವಲ್ಲಿ ನಿತ್ಯ ಯೋಗಾಭ್ಯಾಸದ ಅವಶ್ಯಕತೆ ಇದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ನನ್ನನ್ನು ನಾನು ಆರೋಗ್ಯವಂತ, ಶಾಂತಿಯುತ, ಸಂತೋಷಭರಿತ ಮತ್ತು ಪ್ರೀತಿಸುವ ಮಾನವನನ್ನಾಗಿಸಿಕೊಳ್ಳುವ ಸಂಕಲ್ಪವನ್ನು ಸ್ವೀಕರಿಸಲಾಯಿತು.

ಓಂ ಪ್ರಣಮ್ಯ ಯೋಗ ಶಾಲೆ ಸಂಸ್ಥಾಪಕ ಬಿ.ಎಂ.ರಮೇಶ್ ಮಾತನಾಡಿ, ಆಧುನಿಕ ತಂತ್ರಜ್ಞಾನ ಯುಗದಲ್ಲಿ ಪ್ರತಿಯೊಬ್ಬರೂ ಒತ್ತಡದ ಬದುಕನ್ನು ಸಾಗಿಸುತ್ತಿದ್ದು, ಆರೋಗ್ಯದ ಬಗ್ಗೆ ಅರಿವು ಮೂಡಿಸುವ ಪ್ರಯತ್ನ ಆಗಬೇಕಾಗಿದೆ. ಈ ದಿಸೆಯಲ್ಲಿ ಆರೋಗ್ಯದ ಮಹತ್ವದ ಮೂಲ ಬೇರು ಅರಿವೆಂಬ ಔಷಧಿಯಾಗಿದ್ದು, ಈ ಔಷಧಿ ಧ್ಯಾನ ಮತ್ತು ಯೋಗಾಭ್ಯಾಸದಿಂದ ಸಾಧ್ಯವಾಗುತ್ತದೆ ಎಂದರು.

ಪ್ರಾಂಶುಪಾಲ ಡಾ.ಸಿ.ಎಸ್.ಹೊನ್ನೇಗೌಡ ಮಾತನಾಡಿದರು.

ಕಾರ್ಯಕ್ರಮದಲ್ಲಿ ದೈಹಿಕ ಶಿಕ್ಷಣ ನಿರ್ದೇಶಕರಾದ ಪಿ.ಎಂ.ವಿಕ್ರಮ್, ಹೆಚ್.ಆರ್.ಗುರು, ಕೆ.ಎನ್.ಶಿವಕುಮಾರ್, ಕಾಲೇಜಿನ ಅಧ್ಯಾಪಕ, ಅಧ್ಯಾಪಕೇತರ ವರ್ಗದವರು, ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಹುಣಸೂರಲ್ಲಿ ಮಡಿಲು ಸಂಸ್ಥೆ ಕಚೇರಿ ಉದ್ಘಾಟನೆ



ಮಡಿಲು ಸಂಸ್ಥೆ ಕಚೇರಿಯನ್ನು ಗಾವಡಗೆರೆ ಮಠದ ನಟರಾಜ ಸ್ವಾಮೀಜಿ ಉದ್ಘಾಟಿಸಿದರು.

ಹುಣಸೂರು, ಜೂ.21– ಮನದ ಕತ್ತಲನ್ನು ಹೊಡೆದು ಹಾಕಿ ಬೆಳಕನ್ನು ಹರಿಸಿ ಮಡಿಲು ತುಂಬಿಸಿಕೊಳ್ಳುವ ಕೆಲಸ ದೂರ ದೃಷ್ಟಿಯುಳ್ಳ ಸಾಮಾಜಿಕ ಕಳಕಳಿಯಾಗಿದೆ ಎಂದು ಗಾವಡಗೆರೆ ಮಠದ ನಟರಾಜ ಸ್ವಾಮೀಜಿ ತಿಳಿಸಿದರು.

ನಗರದ ವಿಷ್ಣು ಬಡಾವಣೆಯಲ್ಲಿ ಮಡಿಲು ಸಂಸ್ಥೆಯ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, ಮಡಿಲು ಎನ್ನುವ ಪದವೇ ಒಂದು ಅದ್ಭುತ. ಮಗುವಿನ ಹಸಿವು, ಆರೈಕೆಯನ್ನು ಪೂರೈಸುವ ಅಮ್ಮನ ಮಡಿಲು ಎಷ್ಟು ಸುರಕ್ಷಿತವೋ ಅದೇ ರೀತಿ ದೀನ ದಲಿತರು, ಅಸಹಾಯಕರ ನೋವು ನಲಿವಿಗೆ ಸ್ಪಂದಿಸಿ ಅವರ ಬೆನ್ನೆಲುಬಾಗಿ ನಿಂತಿರುವ ತ್ರಿವೇಣಿಯವರ ಮಡಿಲು ಸಂಸ್ಥೆ ಹೆಚ್ಚು ಸಮಾಜಮುಖಿ ಕಾರ್ಯಗಳನ್ನು ಮಾಡುವ ಮೂಲಕ ಜನಮಾನಸದಲ್ಲಿ ಉಳಿಯಲಿ ಎಂದು ಹಾರೈಸಿದರು.

ಮಡಿಲು ಸಂಸ್ಥೆ ಅಧ್ಯಕ್ಷೆ ತ್ರಿವೇಣಿ ಮಾತನಾಡಿ, ಅಸಹಾಯಕರ ಮತ್ತು ಬಡವರ ಬದುಕಿನಲ್ಲಿ ಹೊಸ ಬೆಳಕನ್ನು ಹೊತ್ತಿಸುವ ನಿಟ್ಟಿನಲ್ಲಿ ಹಾಗೂ ಗ್ರಾಮೀಣ ಭಾಗದ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವ ಮೂಲಕ ಹಲವು ಸಾಮಾಜಿಕ ಕಾರ್ಯಗಳನ್ನು ಮಾಡುವ ನಿಟ್ಟಿನಲ್ಲಿ ನಮ್ಮ ಸಂಸ್ಥೆ ಮುಂದಾಗಿದೆ ಎಂದರು.

ನಾನು ದಿ.ಡಿ.ದೇವರಾಜ ಅರಸು ಅವರ ಅಭಿಮಾನಿಯಾಗಿರುವುದರಿಂದ ಸಾಮಾಜಿಕ ಕಾರ್ಯಕಗಳನ್ನು ಕೈಗೊಳ್ಳಲು ಹುಣಸೂರು ಕ್ಷೇತ್ರವನ್ನೇ ಆಯ್ಕೆ ಮಾಡಿ ಕೊಂಡಿದ್ದೇನೆ. ಕಳೆದ 2 ವರ್ಷಗಳಿಂದ ನಮ್ಮ ಕಚೇರಿ ಉದ್ಘಾಟಿಸಲು ಕಾಲ ಕೂಡಿ ಬಂದಿರಲಿಲ್ಲ. ಇದೀಗ ಗುರು ಹಿರಿಯರ ಸಮ್ಮುಖದಲ್ಲಿ ಕಚೇರಿ ಉದ್ಘಾಟಿಸುತ್ತಿದ್ದೇನೆ ಎಂದರು.

ಈ ವೇಳೆ ರಾಜ್ಯ ಕುರುಬರ ಸಂಘದ ಅಧ್ಯಕ್ಷ ಸುಬ್ಬಣ್ಣ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಕುನ್ನೇಗೌಡ, ಕಸಬಾ ಸೊಸೈಟಿ ಅಧ್ಯಕ್ಷ ವಾಸೇಗೌಡ, ಎ.ಪಿ.ಸ್ವಾಮಿ, ಮಹದೇವ, ತಾಲೂಕು ಕಾಂಗ್ರೆಸ್ ಅಧ್ಯಕ್ಷ ರವಿ ಪ್ರಸನ್ನ, ಗ್ಯಾರಂಟಿ ಯೋಜನೆ ತಾಲೂಕು ಅಧ್ಯಕ್ಷ ರಾಘು, ಸ್ವಾಮಿಗೌಡ, ಕಾಂಗ್ರೆಸ್ ಯುವ ಮುಖಂಡ ಸ್ವರೂಪ್, ಕೂಸಪ್ಪ, ಮಾಜಿ ತಾಪಂ ಸದಸ್ಯ ಪ್ರಸನ್ನ, ಗವಿನಾಯಕ, ಗೋವಿಂದೇಗೌಡ, ಇಂಟಕ್ ರಾಜು, ಶ್ರೀನಿವಾಸ್ ಇನ್ನಿತರರಿದ್ದರು.

ಯೋಗದಿಂದ ಮಾನಸಿಕ ಶಾಂತಿ, ನೆಮ್ಮದಿ ದೊರೆಯಲಿದೆ

ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕನ್ನಡ ಪ್ರಮೋದ್



ಹೆಚ್.ಡಿ.ಕೋಟೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ನಡೆಯಿತು.

ಹೆಚ್.ಡಿ.ಕೋಟೆ, ಜೂ.21– ದೈಹಿಕ, ಮಾನಸಿಕ ಮತ್ತು ಜೀವನೋತ್ಸಾಹವನ್ನು ಯೋಗದಿಂದ ಪಡೆದು ಉತ್ತಮ ಆರೋಗ್ಯ ಪೂರ್ಣ ಜೀವನ ರೂಪಿಸಿಕೊಳ್ಳಬಹುದು ಎಂದು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕನ್ನಡ ಪ್ರಮೋದ್ ತಿಳಿಸಿದರು.

ಪಟ್ಟಣದ ನ್ಯಾಯಾಲಯದ ಆವರಣ, ತಾಲೂಕು ಕ್ರೀಡಾಂಗಣದಲ್ಲಿ ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಆದಿಚುಂಚನಗಿರಿ ಶಿಕ್ಷಣ ಸಂಸ್ಥೆ ಹಾಗೂ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ಏರ್ಪಡಿಸಿದ್ದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಮಾತನಾಡಿದ ಅವರು, ಯೋಗದಿಂದ ಮಾನಸಿಕ ಶಾಂತಿ, ನೆಮ್ಮದಿ ಸಿಗುವುದರಿಂದ ಪ್ರತಿಯೊಬ್ಬರೂ ಯೋಗಾಭ್ಯಾಸದಲ್ಲಿ ತೊಡಗಬೇಕು. ಇದರಿಂದ ಸ್ವಸ್ಥ್ಯ ಸಮಾಜದ ನಿರ್ಮಾಣ ಸಾಧ್ಯ. ಯೋಗ, ಧ್ಯಾನ, ಪ್ರಾಣಾಯಾಮದಿಂದ ಮಾನಸಿಕ ಒತ್ತಡ ಕಡಿಮೆಯಾಗಲಿದೆ. ವಿದ್ಯಾರ್ಥಿಗಳು ನಿತ್ಯ ಯೋಗ ಮಾಡುವುದರಿಂದ ಏಕಾಗ್ರತೆ ಪಡೆಯಬಹುದು. ಇದರಿಂದ ಕಲಿಕೆಗೆ ಪೂರಕವಾಗಲಿದೆ ಎಂದರು.

ಮೈಸೂರು ಯೋಗದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೀರ್ತಿ ಗಳಿಸಲು ಅಭಿವೃದ್ಧಿ ಹರಿಕಾರ ನಾಲ್ವಡಿ ಕೃಷ್ಣರಾಜ ಒಡೆಯರ್ ಕಾರಣ. ಯೋಗ ಗುರು ಕೃಷ್ಣಮಾಚಾರ್ಯರ ಮೂಲಕ ಯೋಗವನ್ನು ಅಂದು ಪರಿಚಯಿಸಿದರು ಎಂದರು.

ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಈ ಬಾರಿಯ ಘೋಷಣೆಯು ವಿಶ್ವದಂತ ಬದಲಾಗುತ್ತಿರುವ ಸಮಾಜದಲ್ಲಿ ಜನಸಂಖ್ಯಾ ವ್ಯಾಪ್ತಿಗಳಿಗೆ ಹೊಂದಿಕೊಳ್ಳಲು ಸಕಾಲಿಕ ಸಂದೇಶ ನೀಡುತ್ತದೆ. ಸಕ್ರಿಯ ಜೀವನ ಶೈಲಿಯು ಕಾಯಿಲೆ ಬರದಂತೆ ತಡೆಗಟ್ಟುವುದು ಮತ್ತು ಯೋಗಕ್ಷೇಮ ನೀತಿ ಆರೋಗ್ಯಕರ ಜೀವನಕ್ಕೆ ನಾಂದಿ ಹಾಡುತ್ತವೆ. ಉತ್ತಮ ಗುಣಮಟ್ಟದ ಜೀವನ ಸುಧಾರಿಸಲು ಪ್ರಾಯೋಗಿಕ ಮಾರ್ಗವನ್ನು ನೀಡುತ್ತದೆ. 2026ರ ಅಂತಾರಾಷ್ಟ್ರೀಯ ಯೋಗ ದಿನವನ್ನು ಜಗತ್ತು ಸಿದ್ಧಗೊಂಡಿರುವಾಗ ಭಾರತೀಯರಾದ ನಾವು ಸಾಂಪ್ರದಾಯಿಕ ಜೀವನ ಶೈಲಿ, ಕೌಟುಂಬಿಕ ವ್ಯವಸ್ಥೆ, ಆಹಾರ ಪದ್ಧತಿ ಅಳವಡಿಸಿಕೊಂಡು ಬದುಕುವತ್ತ ನಮ್ಮ ಯುವ ಜನತೆ, ಮಕ್ಕಳನ್ನು ಉತ್ತೇಜಿಸಲು ಬದ್ಧರಾಗಿ ಜಗತ್ತೇ ನಮ್ಮತ್ತ ನಿಬ್ಬೆರಗಾಗಿ ನೋಡುವತ್ತ ಚಿತ್ತಹರಿಸಬೇಕಾಗಿದೆ ಎಂದರು.

ಕಾರ್ಯಕ್ರಮದಲ್ಲಿ ದೈಹಿಕ ಶಿಕ್ಷಣ ಪರಿವೀಕ್ಷಣಾಧಿಕಾರಿ ಅಜ್ಮತ್ ಉಲ್ಲಾಬೇಗ್, ಆದಿಚುಂಚನಗಿರಿ ಆಂಗ್ಲ ಮಾಧ್ಯಮ ಮುಖ್ಯ ಶಿಕ್ಷಕ ನಂದಿನಿ, ಲೆಕ್ಕಪರಿಶೋಧಕ ಸಂತೋಷ್, ಲಯನ್ಸ್ ಸಂಸ್ಥೆ ಮಾಜಿ ಅಧ್ಯಕ್ಷ ಸಿ.ಎನ್.ನಾಗಣ್ಣ, ಯೋಗಪಟು ಪಣಿಸ್ವಾಮಿ, ಉಪನ್ಯಾಸಕರಾದ ಸ್ವಾಮಿನಾಯಕ್, ಲೋಕೇಶ್, ದೈಹಿಕ ಶಿಕ್ಷಕರಾದ ಶಿವಕುಮಾರ್, ರಾಜೇಗೌಡ, ಕೈಸರ್ ಪಾಷ ಇದ್ದರು.

ಆದಿಚುಂಚನಗಿರಿ, ಆರ್ಯ ಪ್ರೌಢಶಾಲೆ, ವಿಶ್ವಭಾರತಿ, ಸೇಂಟ್ ಮೇರಿಸ್, ಸೇಂಟ್ ಜೋಸೆಫ್ ಶಾಲೆಗಳ 800ಕ್ಕೂ ಹೆಚ್ಚು ಮಕ್ಕಳು ಶಿಕ್ಷಕರು, ಹಿರಿಯ ನಾಗರಿಕರು ಯೋಗ ಪ್ರದರ್ಶನ ನೀಡಿದರು.

ಶ್ರೀಅನಂತನಾಥ ತೀರ್ಥಂಕರರ ವಾರ್ಷಿಕ ಪೂಜಾ ಮಹೋತ್ಸವ



ಸರಗೂರಲ್ಲಿ ಜೈನ ಸಮಾಜದಿಂದ ಪೂಜಾ ಮಹೋತ್ಸವ ನಡೆಯಿತು.

ಸರಗೂರು: ಪಟ್ಟಣದ ಜೈನ ಸಮಾಜದ ವತಿಯಿಂದ ತ್ರಿಭುವನ ವಿಜಯ ನಾಮಾಂಕಿತ 1008 ಶ್ರೀಅನಂತನಾಥ ತೀರ್ಥಂಕರರ ನೂತನ ಜಿನ ಚೈತ್ಯಾಲಯದ 131ನೇ ವಾರ್ಷಿಕ ಪೂಜಾ ಹಾಗೂ ಧಾಮ ಸಂಪ್ರೋಕ್ಷಣೆ ಮಹೋತ್ಸವ ಪಟ್ಟಣದಲ್ಲಿ ವಿಜೃಂಭಣೆಯಿಂದ ನಡೆಯಿತು.

ಮಹೋತ್ಸವ ಅಂಗವಾಗಿ ಕನಕಗಿರಿ ಕ್ಷೇತ್ರದ ಧರ್ಮಯೋಗಿ ಸ್ವಸ್ತಿಶ್ರೀ ಭುವನ ಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಅವರನ್ನು ಜೈನ ಮಠ ಆರತಿಪುರ ಶ್ರೀಕ್ಷೇತ್ರದ ಸ್ವಸ್ತಿಶ್ರೀ ಸಿದ್ಧಾಂತ ಕೀರ್ತಿ ಭಟ್ಟಾರಕ ಭಟ್ಟಾಚಾರ್ಯವರ್ಯ ಸ್ವಾಮೀಜಿ ಸಾನಿಧ್ಯದಲ್ಲಿ ಶ್ರೀಗಳನ್ನು ಮಂಗಳವಾದ್ಯ, ವಿವಿಧ ಕಲಾ ತಂಡಗಳ ಮೂಲಕ ಮೆರವಣಿಗೆಯಲ್ಲಿ ಜಿನ ಚೈತ್ಯಾಲಕ್ಕೆ ಕರೆ ತರಲಾಯಿತು.

ನಂತರ ಅಗ್ರೋಧಕ, ಕಳಶ ಸ್ಥಾಪನೆ, ಇಂದ್ರ ಪ್ರತಿಷ್ಠೆ, ಕಂಕಣಧಾರಣೆ, ಪೂಜಾ ನಂತರ ಧಾಮ ಸಂಪ್ರೋಕ್ಷಣೆ ಹಾಗೂ ಚತುರ್ದಿಕ್ಷು ಹೋಮ, ಶ್ರೀಅನಂತನಾಥ ತೀರ್ಥಂಕರರಿಗೆ ಬಿಂಬಶುದ್ಧಿ, ನಡೆಸಿ ನವ ಕಳಸ ಪಂಚಾಮೃತ ಮಹಾಭಿಷೇಕ ನಡೆಸಲಾಯಿತು. ಶ್ರಾವಕ ಶ್ರಾವಕಿಯವರು ಶ್ರದ್ಧಾ ಭಕ್ತಿಯಿಂದ ಪೂಜೆಯಲ್ಲಿ ಪಾಲ್ಗೊಂಡು ಶ್ರೀ ಅನಂತನಾಥ ತೀರ್ಥಕರ ಮಂತ್ರ ಪಠಿಸಿದರು.

ಕನಕಗಿರಿ ಕ್ಷೇತ್ರದ ಧರ್ಮಯೋಗಿ ಸ್ವಸ್ತಿಶ್ರೀ ಸ್ವಾಮೀಜಿ ಮಾತನಾಡಿ, ಜೈನ ಧರ್ಮದ ಮೂಲ ಸಂದೇಶವು ಅಹಿಂಸೆ, ಕರ್ಮ ಸಿದ್ಧಾಂತ ಮತ್ತು ಆತ್ಮ ವಿಮೋಚನೆಗೆ ಒತ್ತು ನೀಡುತ್ತದೆ. ಇದು ಕೇವಲ ಧಾರ್ಮಿಕ ಆಚರಣೆಗಳಿಗಿಂತ ಹೆಚ್ಚಾಗಿ, ಸ್ವಯಂ–ನಿಯಂತ್ರಣ, ಸಮಾನತೆ ಮತ್ತು ಪ್ರತಿಯೊಂದು ಜೀವಿಯ ಮೇಲಿನ ಅಪಾರ ಕರುಣೆ ಬೋಧಿಸುವ ಜೀವನ ಪದ್ಧತಿಯಾಗಿದೆ. ಸರಿಯಾದ ನಂಬಿಕೆ, ಸರಿಯಾದ ಜ್ಞಾನ ಮತ್ತು ಸರಿಯಾದ ನಡವಳಿಕೆ, ಕೋಪ, ಅಹಂಕಾರ, ವಂಚನೆ ಮತ್ತು ದುರಾಸೆಗಳಿಂದ ದೂರವಿರಬೇಕು. ಪ್ರಜ್ಞಾವಂತರಾಗಿ ಪ್ರತಿಯೊಬ್ಬರು ಮಕ್ಕಳಿಗೆ ಶಿಕ್ಷಣ ನೀಡಬೇಕು. ಯಾರೂ ಬದುಕಿ ಬಾಳಿದ ಮನೆ ಬಿಟ್ಟು ದೂರವಿರಬಾರದು. ಇದರ ಸಂರಕ್ಷಣೆ ಮಾಡಬೇಕು. ಶ್ರೀಅನಂತನಾಥ ತೀರ್ಥಂಕರರ ಜಿನ ಚೈತ್ಯಾಲಯಕ್ಕೆ ದೇಣಿಗೆ ನೀಡಿದ್ದೀರಿ. ಇದರಿಂದ ಮುಂದೆ ನಿಮ್ಮ ಕುಟುಂಬಗಳು ಬೆಳಕು ಕಾಣಲಿವೆ. ತೀರ್ಥಂಕರರ ಆಶೀರ್ವಾದದಿಂದ ರಾಜ್ಯದಲ್ಲಿ ಉತ್ತಮ ಮಳೆ ಬೆಳೆಯಾಗಿ ಪ್ರತಿಯೊಬ್ಬರೂ ಅಭಿವೃದ್ಧಿ ಹೊಂದಲಿ ಎಂದು ಆಶೀರ್ವಚನ ನೀಡಿದರು.

ಕಾರ್ಯಕ್ರಮದಲ್ಲಿ ಜೈನ ಸಮಾಜದ ಅಧ್ಯಕ್ಷ ಎಸ್.ಬಿ.ನಾಗರಾಜು, ಗೌರವಾಧ್ಯಕ್ಷ ಸನ್ಮತಿ ಎಸ್.ಡಿ.ಬ್ರಹ್ಮದೇವಯ್ಯ, ಕಾರ್ಯದರ್ಶಿ ದೇವೇಂದ್ರಯ್ಯ, ಖಜಾಂಚಿ ಎಸ್.ಪಿ.ನಿತೀನ್, ನಿರ್ದೇಶಕರಾದ ಜೀವಣ್ಣ ಎಸ್.ಬಿ.ಸುಮಂತ್, ಎಸ್.ವಿ.ಮಂಜುನಾಥ್ ಜೈನ್, ಗೊಮ್ಮಟ ರಾಜ್, ಎಸ್.ವಿ.ಅನಿಲ್ ಕುಮಾರ್, ಎಸ್.ಡಿ.ವಿಮಲ್, ಎಸ್.ಎಸ್.ಸನ್ಮತಿ, ಮಹಿಳಾ ಸಮಾಜದ ಅಧ್ಯಕ್ಷೆ ಮಂಜುಳ, ಎಸ್.ಬಿ.ಸತೀಶ್ ಕುಮಾರ್, ಎಸ್.ಎನ್.ಪದ್ಮಪ್ರಸಾದ್, ಜಿಪಂ ಮಾಜಿ ಸದಸ್ಯ ಪಿ.ರವಿ, ದೇವದಾಸ್, ವೀರಶೈವ ಸಮಾಜದ ಅಧ್ಯಕ್ಷ ಎಸ್.ಎನ್.ಮೋಹನ್ ಕುಮಾರ್, ಮುಖಂಡರಾದ ಶ್ರೀಕಂಠಸ್ವಾಮಿ, ಬಿ.ಸಿ.ಎಂ.ಸ್ವಾಮಿ, ವಿಶ್ವಕರ್ಮ ಸಮಾಜದ ಜಿ.ರವಿ, ಪದ್ಮಪ್ರಭ, ರವೀಂದ್ರನಾಥ್, ಎಸ್.ಪಿ.ಪ್ರಸಾದ್, ಮಹೇಂದ್ರ ಬ್ರಹ್ಮಣ್ಣ, ಹರ್ಷ, ದಿನೇಶ್, ಎಸ್.ಎಸ್.ಮಂಜುನಾಥ್ ಸೇರಿದಂತೆ ಶ್ರಾವಕ ಶ್ರಾವಕಿಯರಿದ್ದರು.

ಕನ್ನಡಸೇನೆ ಕರ್ನಾಟಕ ಸಂಘಟನೆ ಕಾರ್ಯ ಶ್ಲಾಘನೀಯ

ಪುರಸಭೆ ಮಾಜಿ ಸದಸ್ಯ ಅರ್ಜುನ್ ಆಶಯ



ಕನ್ನಡ ಸೇನೆ ಕರ್ನಾಟಕ ಸಂಘಟನೆ ತಾಲೂಕು ಅಧ್ಯಕ್ಷ ಕೆ.ರಾಜು ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಜೂ.21– ಬಡ ಜನರಿಗೆ ಕಷ್ಟ ಸುಖಗಳಿಗೆ ಸ್ಪಂದಿಸಿ ಸಹಾಯ ಮಾಡುವ ಮನೋಭಾವ ರೂಢಿಸಿಕೊಂಡಿರುವ ಕನ್ನಡ ಸೇನೆ ಕರ್ನಾಟಕ ಸಂಘಟನೆ ಕಾರ್ಯ ಶ್ಲಾಘನೀಯ ಎಂದು ಪುರಸಭೆ ಮಾಜಿ ಸದಸ್ಯ ಅರ್ಜುನ್ ತಿಳಿಸಿದರು.

ತಾಲೂಕಿನ ತುಂಬಲ ಗ್ರಾಮದ ಶ್ರೀಕಂಬದ ರಾಮದೇವರ ಬೆಟ್ಟದ ತಪ್ಪಲಿನಲ್ಲಿ ಸ್ನೇಹ ಬಳಗದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಜಾಸೇವೆ ಹಾಗೂ ಜನಸೇವೆ ಮಾಡಲು ರಾಜಕೀಯ ಸ್ಥಾನಮಾನ ಬಹುಮುಖ್ಯ ಆದರೆ ಸಮಾಜದ ಕಟ್ಟ ಕಡೆಯ ವ್ಯಕ್ತಿಗಳ ಸಮಸ್ಯೆಗಳಿಗೆ ಕನ್ನಡ ಸೇನೆ ಕರ್ನಾಟಕ ಸಂಘಟನೆ ಮೂಲಕ ಸ್ಪಂದಿಸುತ್ತಿರುವ ಸಮಘಟನೆ ಅಧ್ಯಕ್ಷ ರಾಜು ಅವರ ಜನಪರ ಸೇವೆ ನಿಜಕ್ಕೂ ಶ್ಲಾಘನೀಯ ಎಂದರು.

ಕನ್ನಡ ಸೇನೆ ಕರ್ನಾಟಕ ಸಂಘಟನೆ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಸಾರ್ವಜನಿಕ ಕ್ಷೇತ್ರಗಳಲ್ಲಿ ನಿರಂತರವಾಗಿ ಸೇವೆ ಸಲ್ಲಿಸುತ್ತಿದೆ. ಕೆಎಸ್‌ಐಸಿ ಕಾರ್ಮಿಕರ ಹೋರಾಟದ ಸಂದರ್ಭದಲ್ಲಿಯೂ ಸಂಘಟನೆ ಹೋರಾಟ ನಿರತ ಕಾರ್ಮಿಕರಿಗೆ ಒಂದು ದಿನದ ಉಪಹಾರದ ವ್ಯವಸ್ಥೆ ಕಲ್ಪಿಸುವ ಮೂಲಕ ಮಾನವೀಯತೆ ಮೆರೆದಿತ್ತು ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಕೆ.ರಾಜು, ಬಡವರು, ನೊಂದವರು ಹಾಗೂ ಅಗತ್ಯವಿರುವ ಜನರ ಸಂಕಷ್ಟಗಳಿಗೆ ಸ್ಪಂದಿಸುವುದು ತಮ್ಮ ಕರ್ತವ್ಯ. ಯಾವುದೇ ಪ್ರತಿಫಲ ಅಥವಾ ಹುದ್ದೆಯ ನಿರೀಕ್ಷೆ ಇಲ್ಲದೆ ಜನರ ಸೇವೆಯಲ್ಲಿ ತೊಡಗಿಕೊಂಡಿದ್ದು, ಮುಂದೆಯೂ ಇದೇ ಮನೋಭಾವದಿಂದ ಕಾರ್ಯ ನಿರ್ವಹಿಸುವುದಾಗಿ ಹೇಳಿದರು.

ಈ ವೇಳೆ ವಾಟಾಳು ಜಿ.ಎನ್.ಪುಟ್ಟಸ್ವಾಮಿ, ನಾಗರಾಜು, ಮೈಸೂರು ವೆಂಕಟರಾಜು, ಪುಟ್ಟಸುಂದ್ರ, ಯಡದೊರೆ ನಂಜುಂಡಸ್ವಾಮಿ, ತುಬಲ ರಾಚಪ್ಪ ಗಣೇಶ, ಮಹೇಶ್, ಸೋಮಣ್ಣ, ಕೇಬಲ್ ಸ್ವಾಮಿ, ಸಾಮ್ರಾಟ್, ಭೈರಾಪುರ ರಮೇಶ್, ಯಡದೊರೆ ಬಸವಣ್ಣ, ಪೇಯಿಂಟರ್ ಸೋಮಣ್ಣ, ಮಹದೇವಸ್ವಾಮಿ ಹಾಜರಿದ್ದರು.

ಯುವ ಪೀಳಿಗೆ ಸಮಾಜ ನಿರ್ಮಾಣದತ್ತ ಚಿಂತನೆ, ಶಕ್ತಿ ಕೇಂದ್ರೀಕರಿಸಿ

ಮಾದಾರ ಚೆನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ



ಚಿತ್ರದುರ್ಗದ ಶಿವಶರಣ ಮಾದಾರ ಚೆನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿಯವರನ್ನು ಪುರಸಭೆ ಮಾಜಿ ಸದಸ್ಯ ಅರ್ಜುನ್ ರಮೇಶ್ ಸನ್ಮಾನಿಸಿದರು.

ತಿ.ನರಸೀಪುರ, ಜೂ.21– ತಿ.ನರಸೀಪುರ ಕ್ಷೇತ್ರ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ವಿಶಿಷ್ಟ ಇತಿಹಾಸ ಹೊಂದಿದ್ದು, ಇಲ್ಲಿನ ಹಿರಿಯ ರಾಜಕೀಯ ನಾಯಕರ ಮಾರ್ಗದರ್ಶನದಲ್ಲಿ ಯುವ ಪೀಳಿಗೆ ಸಮಾಜ ನಿರ್ಮಾಣದತ್ತ ತಮ್ಮ ಚಿಂತನೆ ಮತ್ತು ಶಕ್ತಿ ಕೇಂದ್ರೀಕರಿಸಬೇಕು ಎಂದು ಚಿತ್ರದುರ್ಗದ ಶಿವಶರಣ ಮಾದಾರ ಚೆನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಪಿಡಬ್ಲ್ಯೂಡಿ ಅತಿಥಿ ಗೃಹದಲ್ಲಿ ಏರ್ಪಡಿಸಿದ್ದ ಸನ್ಮಾನ ಸಮಾರಂಭದಲ್ಲಿ ಪುರಸಭೆ ಮಾಜಿ ಸದಸ್ಯ ಅರ್ಜುನ್ ರಮೇಶ್ ಅವರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ತಿ.ನರಸೀಪುರ ಕ್ಷೇತ್ರ ಅನೇಕ ರಾಜಕೀಯ ನಾಯಕರು ಹಾಗೂ ಸಮಾಜಮುಖಿ ಚಿಂತಕರನ್ನು ನೀಡಿರುವ ನೆಲವಾಗಿದೆ. ಮಾಜಿ ಶಾಸಕ ಟಿ.ಎನ್.ನರಸಿಂಹಮೂರ್ತಿ ಅವರ ಕುಟುಂಬದಿಂದ ಇಂದಿನ ತಲೆಮಾರಿನ ರಾಜಕಾರಣಿಯಾಗಿ ಸಿ.ರಮೇಶ್ ಅವರು ಕಾರ್ಯ ನಿರ್ವಹಿಸುತ್ತಿದ್ದು, ಅವರೊಂದಿಗೆ ಮಾಜಿ ಸಚಿವ ಶಿವಣ್ಣ, ವಿಧಾನ ಪರಿಷತ್ ಮಾಜಿ ಸದಸ್ಯ ಧರ್ಮಸೇನಾ ಹಾಗೂ ಡಾ. ತಿಮ್ಮಯ್ಯ ಅವರಂತಹ ನಾಯಕರ ಅನುಭವ ಮತ್ತು ಮಾರ್ಗದರ್ಶನ ಯುವಕರಿಗೆ ದಾರಿದೀಪವಾಗಬೇಕಿದೆ ಎಂದು ಹೇಳಿದರು.

ಇಂದಿನ ಯುವಜನತೆ ಕೇವಲ ರಾಜಕೀಯ ಅಧಿಕಾರ ಅಥವಾ ಹುದ್ದೆಗಳ ಹಿಂದೆ ಹೋಗದೆ ಸಮಾಜದ ಅಭಿವೃದ್ಧಿ, ಶಿಕ್ಷಣ, ಸಂಘಟನೆ ಮತ್ತು ಸಾಮಾಜಿಕ ನ್ಯಾಯದ ವಿಚಾರಗಳತ್ತ ಗಮನ ಹರಿಸಬೇಕು. ಸಮಾಜದ ಏಳಿಗೆಗೆ ಯುವಕರು ತಮ್ಮ ಸಮಯ, ಪ್ರತಿಭೆ ಮತ್ತು ಶ್ರಮವನ್ನು ಮೀಸಲಿಡಬೇಕು. ಹಿಂದಿನ ದಿನಗಳಲ್ಲಿ ಸಮಾಜದ ಕೆಲಸಗಳಿಗೆ ಕೆಲವು ಯುವಕರು ಮುಂದೆ ಬರುತ್ತಿದ್ದರು. ಆದರೆ ಈಗಿನ ಕಾಲಘಟ್ಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿರುವುದು ಸಂತಸ ತಂದಿದೆ. ಇದು ಸಮಾಜದಲ್ಲಿ ಜಾಗೃತಿ ಮೂಡುತ್ತಿರುವುದರ ಸಂಕೇತವಾಗಿದೆ ಎಂದು ಅಭಿಪ್ರಾಯಪಟ್ಟರು.

ವಿಧಾನ ಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಮಾತನಾಡಿ, ಇಂದಿನ ದಿನಗಳಲ್ಲಿ ಯುವಕರು ಸಮಾಜದ ಹಕ್ಕುಗಳಿಗಾಗಿ ಒಗ್ಗಟ್ಟಿನಿಂದ ಹೋರಾಡುವ ಮನೋಭಾವ ಬೆಳೆಸಿಕೊಳ್ಳಬೇಕು. ಸಮಾಜಕ್ಕೆ ದೊರೆಯಬೇಕಾದ ಸೌಲಭ್ಯಗಳು ಮತ್ತು ಸಂವಿಧಾನಾತ್ಮಕ ಹಕ್ಕುಗಳ ಬಗ್ಗೆ ಅರಿವು ಮೂಡಿಸಿಕೊಳ್ಳುವುದು ಅಗತ್ಯವಾಗಿದೆ. ಮೀಸಲಾತಿ ವರ್ಗೀಕರಣದ ಸಂಪೂರ್ಣ ಪ್ರಯೋಜನ ಇನ್ನೂ ಸಮಾಜದ ಕೊನೆ ವ್ಯಕ್ತಿಗೆ ತಲುಪಿಲ್ಲ. ಈ ಕುರಿತು ಯುವಕರು ಜಾಗೃತರಾಗಬೇಕು ಹಾಗೂ ತಮ್ಮ ಸಮುದಾಯದ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಹೇಳಿದರು.

ಮಾದಾರ ಚೆನ್ನಯ್ಯ ಶ್ರೀಗಳು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸಮಾಜದ ಧ್ವನಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಮಾಜ ಮತ್ತು ಮಠಗಳು ಬೆಳೆಯಬೇಕಾದರೆ ಕೊನೆಯ ಹಂತದ ವ್ಯಕ್ತಿಯ ಬದುಕಿನಲ್ಲಿ ಬದಲಾವಣೆ ತರಬೇಕು ಎಂಬ ತತ್ವದೊಂದಿಗೆ ಅವರು ಕಾರ್ಯ ನಿರ್ವಹಿಸುತ್ತಿರುವುದು ಶ್ಲಾಘನೀಯ ಎಂದರು.

ಮಾಜಿ ಎಂಎಲ್‌ಸಿ ಆರ್.ಧರ್ಮಸೇನಾ ಮಾತನಾಡಿ, ಯಾವುದೇ ಸಮಾಜ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯವಾಗಿ ಅಭಿವೃದ್ಧಿ ಹೊಂದಬೇಕಾದರೆ ಧಾರ್ಮಿಕ ಮುಖಂಡರ ಮಾರ್ಗದರ್ಶನ ಮತ್ತು ಆಶೀರ್ವಾದ ಅಗತ್ಯ. ಸಮಾಜದ ಸಂಘಟನೆಗೆ ಸ್ವಾಮೀಜಿಗಳ ಕೊಡುಗೆ ಮಹತ್ತರವಾಗಿದೆ. ತಿ.ನರಸೀಪುರಕ್ಕೆ ಆಗಮಿಸಿರುವ ಮಾದಾರ ಚೆನ್ನಯ್ಯ ಶ್ರೀಗಳಿಗೆ ತಾಲೂಕಿನ ಸಮಸ್ತ ಸಮಾಜದ ಪರವಾಗಿ ಹೃತ್ಪೂರ್ವಕ ಸ್ವಾಗತ ಕೋರುತ್ತೇನೆ ಎಂದರು.

ಈ ವೇಳೆ ಮಾಜಿ ಸಚಿವ ಶಿವಣ್ಣ ವಾಟಾಳು ಪುಟ್ಟಸ್ವಾಮಿ, ಹುಣಸೂರು ರಾಚಪ್ಪ ಪ್ರದೀಪ್, ಜಯಪ್ಪ ಸಂದೀಪ್, ಗೋಪಾಲಪುರ ರಾಜಣ್ಣ ವಿಶ್ವ, ಮನೋಜ್, ಮಹದೇವಸ್ವಾಮಿ, ಶ್ರೀನಿ, ಮನೋಜ್ ಹಾಗೂ ಅರ್ಜುನ್ ಅಭಿಮಾನಿ ಬಳಗ ಸದಸ್ಯರು ಇತರರಿದ್ದರು.

ಸಮಾಜದ ಸಂಘಟನೆ, ಅಭಿವೃದ್ಧಿಗೆ ಶ್ರೀಗಳ ಮಾರ್ಗದರ್ಶನ ಅಗತ್ಯ

ತಿ.ನರಸೀಪುರ: ಸಮಾಜದ ಏಕತೆ, ಸಂಘಟನೆ ಹಾಗೂ ಅಭಿವೃದ್ಧಿಗೆ ಶ್ರೀಗಳ ಮಾರ್ಗದರ್ಶನ ಮತ್ತು ಆಶೀರ್ವಾದ ಅಗತ್ಯವಾಗಿದೆ. ಸಮಾಜದ ಜನರು ಬದಿಗೊತ್ತಿ ಒಗ್ಗಟ್ಟಿನಿಂದ ಕಾರ್ಯ ನಿರ್ವಹಿಸಿದಾಗ ಮಾತ್ರ ಸಮುದಾಯವು ಮತ್ತಷ್ಟು ಬಲಿಷ್ಠವಾಗಲು ಸಾಧ್ಯ ಎಂದು ಪುರಸಭೆ ಮಾಜಿ ಸದಸ್ಯ ಅರ್ಜುನ್ ರಮೇಶ್ ತಿಳಿಸಿದರು.

ಮಾದಾರ ಚೆನ್ನಯ್ಯ ಶ್ರೀಗಳು ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಸಮಾಜದ ಪರ ಧ್ವನಿಯಾಗಿದ್ದು, ಸಮಾಜದ ಶೈಕ್ಷಣಿಕ, ಸಾಮಾಜಿಕ ಮತ್ತು ಸಂಘಟನಾ ಬೆಳವಣಿಗೆಗಾಗಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಅವರ ನೇತೃತ್ವವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಸಮಾಜದ ಪ್ರತಿಯೊಬ್ಬರೂ ಕೈಜೋಡಿಸಬೇಕು. ಸಮಾಜದ ಸಂಘಟನೆ ಸದೃಢಗೊಂಡರೆ ಮಾತ್ರ ಸಮುದಾಯದ ಹಕ್ಕುಗಳು, ಅವಕಾಶಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಜನರಿಗೆ ತಲುಪಲಿವೆ ಎಂದು ಅಭಿಪ್ರಾಯಪಟ್ಟರು.

ಮುಂದಿನ ಆಗಸ್ಟ್‌ನಲ್ಲಿ ತಿ.ನರಸೀಪುರದ ಬಾಬು ಜಗಜೀವನ ರಾಂ ಭವನದಲ್ಲಿ ಸಮಾಜದ ಬೃಹತ್ ಮಟ್ಟದ ಸಮಾವೇಶ ಹಾಗೂ ಸಂಘಟನಾ ಕಾರ್ಯಕ್ರಮ ಆಯೋಜಿಸಲು ಉದ್ದೇಶಿಸಲಾಗಿದೆ. ಈ ಕಾರ್ಯಕ್ರಮವು ಸಮಾಜದ ಒಗ್ಗಟ್ಟು ಮತ್ತು ಅಭಿವೃದ್ಧಿಗೆ ಹೊಸ ದಿಕ್ಕು ನೀಡುವ ವೇದಿಕೆಯಾಗಲಿದ್ದು, ರಾಜ್ಯ ಹಾಗೂ ರಾಷ್ಟ್ರಮಟ್ಟದ ಪ್ರಮುಖ ನಾಯಕರು, ಜನಪ್ರತಿನಿಧಿಗಳು, ಧಾರ್ಮಿಕ ಮುಖಂಡರು ಮತ್ತು ಸಮಾಜದ ಗಣ್ಯರನ್ನು ಆಹ್ವಾನಿಸುವ ಯೋಜನೆ ರೂಪಿಸಲಾಗಿದೆ. ಕಾರ್ಯಕ್ರಮವನ್ನು ಪಕ್ಷಾತೀತವಾಗಿ ನಡೆಸುವ ಉದ್ದೇಶ ಹೊಂದಿದ್ದು, ಸಮಾಜದ ಏಳಿಗೆ ಮತ್ತು ಸಂಘಟನೆಯ ಬಲವರ್ಧನೆಗೆ ಎಲ್ಲರ ಸಹಕಾರ ಅಗತ್ಯವಾಗಿದೆ ಎಂದು ತಿಳಿಸಿದರು.

ಕೆಪಿಸಿಸಿ ಅಧ್ಯಕ್ಷರಾಗಿ ಬಿ.ಕೆ.ಹರಿಪ್ರಸಾದ್ ಪದಗ್ರಹಣ

●ನಿಕಟಪೂರ್ವ ಅಧ್ಯಕ್ಷ, ಸಿಎಂ ಡಿ.ಕೆ.ಶಿವಕುಮಾರ್ ಅವರಿಂದ ಪಕ್ಷದ ಅಧಿಕಾರ ಹಸ್ತಾಂತರ
●ಬಿಜೆಪಿ, ಆರ್‌ಎಸ್‌ಎಸ್ ವಿರುದ್ಧ ವಾಗ್ದಾಳಿ; ಡಿಕೆ ಡಿಕೆ ಘೋಷಣೆಯಿಂದ ಖರ್ಗೆ ಗರಂ

ಬೆಂಗಳೂರು: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ(ಕೆಪಿಸಿಸಿ) ಅಧ್ಯಕ್ಷರಾಗಿ ಹಿರಿಯ ಕಾಂಗ್ರೆಸ್ ನಾಯಕ ಬಿ.ಕೆ.ಹರಿಪ್ರಸಾದ್ ಭಾನುವಾರ ಅಧಿಕೃತವಾಗಿ ಅಧಿಕಾರ ಸ್ವೀಕರಿಸಿದರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಭಾನುವಾರ ನಡೆದ ಬೃಹತ್ ಸಮಾರಂಭದಲ್ಲಿ ಕೆಪಿಸಿಸಿ ಅಧ್ಯಕ್ಷರೂ ಆಗಿದ್ದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹರಿಪ್ರಸಾದ್ ಅವರಿಗೆ ಪಕ್ಷದ ಅಧಿಕಾರವನ್ನು ಹಸ್ತಾಂತರಿಸಿದರು.

ಸಿಟ್ಟಾದ ಖರ್ಗೆ: ಕಾರ್ಯಕ್ರಮದ ವೇದಿಕೆಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಜರಾಗುತ್ತಿದ್ದಂತೆ ಡಿಕೆ... ಡಿಕೆ... ಎಂದು ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿಗಳು ಕೂಗುತ್ತಿದ್ದರು. ಅಲ್ಲದೆ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಎದ್ದುನಿಂತು ಮೈಕ್ ಮುಂದೆ ಮಾತನಾಡುವಾಗಲೂ ಡಿಕೆ... ಡಿಕೆ... ಎಂದು ಜೋರಾಗಿ ಕೂಗುವುದನ್ನು ಮುಂದುವರಿಸಿದರು. ಆಗ ಮಲ್ಲಿಕಾರ್ಜುನ ಖರ್ಗೆಯವರ ಸಿಟ್ಟಿಗೆದ್ದು, ಡಿಕೆ ಡಿಕೆ ಅಂತ ನೀವು ಕೂಗುತ್ತಿದ್ದರೆ, ಬಾಕಿ ಉಳಿದವರು ಏನು ಕಸ ಗುಡಿಸೋದಕ್ಕೆ ಬಂದಿದ್ದಾರಾ, ಆಯ್ತಾ...ನೀವು ಇಲ್ಲಿ ಕೂಗಿದರೆ ಇಡೀ ದೇಶ ನಿಮ್ಮ ಕೈಗೆ ಸಿಕ್ಕಿದಂತೆ ಆಗುತ್ತದೆಯೇ, ಯೂಸ್ ಲೆಸ್ ಫೆಲೋಸ್ ಎಂದು ಆಕ್ರೋಶ ವ್ಯಕ್ತಪಡಿಸಿದರು. ಆಗ ಸ್ವತಃ ಡಿ.ಕೆ.ಶಿವಕುಮಾರ್ ಅವರೇ ಎದ್ದು ನಿಂತು ಸುಮ್ಮನಿರಿ ಎಂದು ಕೈಸನ್ನೆ ಮಾಡಿದರು. ರಂದೀಪ್ ಸಿಂಗ್ ಸುರ್ಜೆವಾಲಾ ಕೂಡ ಸುಮ್ಮನಿರುವಂತೆ ಕೇಳಿಕೊಂಡರು.



ಬೆಂಗಳೂರಿನ ಅರಮನೆ ಮೈದಾನದಲ್ಲಿ ಭಾನುವಾರ ನಡೆದ ಬೃಹತ್ ಸಮಾರಂಭದಲ್ಲಿ ಕೆಪಿಸಿಸಿ ಅಧ್ಯಕ್ಷರೂ ಆಗಿದ್ದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹರಿಪ್ರಸಾದ್ ಅವರಿಗೆ ಅಧಿಕಾರವನ್ನು ಹಸ್ತಾಂತರಿಸಿದರು.

ಪಕ್ಷ ಪೂಜೆ ಮುಖ್ಯ: ನಂತರ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಂದೀಪ್ ಸಿಂಗ್ ಸುರ್ಜೆವಾಲಾ ಮಾತನಾಡುವಾಗ ಮಧ್ಯೆ ಬಂದ ಸಿಎಂ ಡಿ.ಕೆ.ಶಿವಕುಮಾರ್, ಡಿಕೆ ಡಿಕೆ ಎಂದು ಮೆರೆಯಲು ಸಾಧ್ಯವಿಲ್ಲ, ಹಾಗೆ ಹೇಳುವುದು ನಿಲ್ಲಿಸಿ, ವ್ಯಕ್ತಿ ಪೂಜೆ ಮಾಡುವುದಕ್ಕಿಂತ ಪಕ್ಷದ ಪೂಜೆ ಮಾಡಿ ಎಂದು ಹಿಂದೆಯೂ ಹೇಳಿದ್ದೇನೆ ಇಂದೂ ಹೇಳುತ್ತಿದ್ದೇನೆ, ದಯವಿಟ್ಟು ಶಿಸ್ತು ಕಾಪಾಡಿ ಎಂದು ಸಿಟ್ಟಿನಿಂದ ಎಚ್ಚರಿಕೆ ನೀಡಿದರು.

ಆರ್‌ಎಸ್‌ಎಸ್‌ಗೆ ಧೈರ್ಯವಿಲ್ಲ: ಕೆಪಿಸಿಸಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮಾತನಾಡಿದ ಬಿ.ಕೆ.ಹರಿಪ್ರಸಾದ್, ಆರ್‌ಎಸ್‌ಎಸ್‌ನವರು ಪುಕ್ಕಲರು, ಅವರಿಗೆ ಧೈರ್ಯ ಇಲ್ಲ. ಆದರೆ, ನಾವು ಮೈಮರೆಯುತ್ತಿದ್ದೇವೆ. ಅದಕ್ಕಾಗಿಯೇ ಅವರು ವಿಜೃಂಭಿಸುತ್ತಿದ್ದಾರೆ ಎಂದು ಗುಡುಗಿ ದರಲ್ಲದೆ, ಇದು ನನ್ನ ಜೀವನದ ಮಹತ್ವಪೂರ್ಣ ದಿನ ಎಂದು ಸಂತಸ ವ್ಯಕ್ತಪಡಿಸಿದರು.

ಗ್ಯಾರಂಟಿ ನಿಲ್ಲಲ್ಲ: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಅಬ್ಬರದ ಭಾಷಣದಲ್ಲಿ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರಲ್ಲದೆ, ಯಾವುದೇ ಕಾರಣಕ್ಕೂ ಗ್ಯಾರಂಟಿ ಕಾರ್ಯಕ್ರಮಗಳು ನಿಲ್ಲುವುದಿಲ್ಲ ಎಂದು ಪುನರುಚ್ಚರಿಸಿದರು.

ಹಿಂದೂ ರಾಷ್ಟ್ರವಾಗಲು ಬಿಡಬೇಡಿ: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ಬಿಜೆಪಿಯವರು ಜಾತಿ-ಧರ್ಮದ ಹೆಸರಿನಲ್ಲಿ ಸಮಾಜವನ್ನು ಒಡೆಯುತ್ತಿದ್ದಾರೆ. ಹಿಂದೂ ರಾಷ್ಟ್ರ ಮಾಡಲು ಹೊರಟಿದ್ದಾರೆ, ಅದಕ್ಕೆ ನೀವ್ಯಾರೂ ಅವಕಾಶ ಮಾಡಿಕೊಡಬಾರದು. ಡಿ.ಕೆ.ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರಾಗಿ ಉತ್ತಮವಾಗಿ ಕೆಲಸ ಮಾಡಿದ್ದರಿಂದಲೇ ಕಳೆದ ಚುನಾವಣೆಯಲ್ಲಿ ಬಹುಮತ ಸಾಧಿಸಲು ಸಾಧ್ಯವಾಯಿತು ಎಂದು ಹೇಳಿದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಹಾಗೂ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಪಕ್ಷದ ಹಲವು ಉನ್ನತ ನಾಯಕರು ಮತ್ತು ಗಣ್ಯರು ಈ ವೇಳೆ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಚಿತ್ರಮಂದಿರ / ಚಿತ್ರ	ದೂರವಾಣಿ / ಪ್ರದರ್ಶನ
ಪದ್ಮ	(ದೂ: 2521923)
ಬ್ಲಾಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹಂಟೆಡ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಲಾಂ ಪಾಕ್ಯ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಪೆದ್ದಿ (ಕ)	4 ಪ್ರದರ್ಶನಗಳು
ರಾಜಕಮಲ್	
ಜಾಲನ್ (ತ)	4 ಪ್ರದರ್ಶನಗಳು
ಸಂಗಂ	
ನೂರ್ ಸ್ವಾಮಿ	4 ಪ್ರದರ್ಶನಗಳು
ಲಿಡೋ	
ಕೆಡಿ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕಾಲಘಟ್ಟ (ಕ)	4 ಪ್ರದರ್ಶನಗಳು

ಮೈಸೂರಿನ ಹೆಬ್ಬಾಳಿನಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ



ಮೈಸೂರು ಹೆಬ್ಬಾಳಿನ ಬಸವನಗುಡಿ ಸರ್ಕಲ್‌ನಲ್ಲಿರುವ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಉದ್ಯಾನವನದಲ್ಲಿ ಭಾನುವಾರ 12ನೇ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು.

ಮೈಸೂರು, ಜೂ.21(ಎಂಕೆ)– ಮೈಸೂರು ಹೆಬ್ಬಾಳಿನ ಬಸವನಗುಡಿ ಸರ್ಕಲ್‌ನಲ್ಲಿರುವ ಡಾ.ನಿರ್ಮಲಾನಂದ ನಾಥ ಸ್ವಾಮೀಜಿ ಉದ್ಯಾನವನದಲ್ಲಿ ನಗರ ಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್ ನೇತೃತ್ವದಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು.

ಬೆಳಗ್ಗೆ 6.30ಕ್ಕೆ ಉದ್ಯಾನವನಕ್ಕೆ ಆಗಮಿಸಿದ ನೂರಾರು ಮಂದಿ ಯೋಗ ದಲ್ಲಿನ ಭದ್ರಾಸನ, ವಕ್ರಾಸನ, ವೃಕ್ಷಾಸನ, ಮಕರಾಸನ, ಭುಜಂಗಾಸನ, ಸೇತುಬಂಧ, ತ್ರಿಕೋನಾಸನ, ಅರ್ಧಹಲಸನ, ಪ್ರಾಣಾಯಾಮ ನಾಡಿಶೋಧನಾಸನ ಸೇರಿದಂತೆ ಹತ್ತು-ಹಲವು ಆಸನಗಳನ್ನು ಮಾಡುವ ಮೂಲಕ ಆರೋಗ್ಯಕರ ಜೀವನಕ್ಕೆ ಯೋಗವೇ ಔಷಧವೆಂಬ ಸಂದೇಶವನ್ನು ಸಾರಿದರು.

ಈ ವೇಳೆ ನಗರ ಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್ ಮಾತನಾಡಿ, ಪ್ರತಿ ವರ್ಷದಂತೆ ಈ ವರ್ಷವೂ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಿದ್ದು, ಹೆಬ್ಬಾಳಿನ ನಿವಾಸಿಗಳು ಸ್ವಯಂ ಪ್ರೇರಿತರಾಗಿ ಭಾಗವಹಿಸಿದ್ದಾರೆ. ವಿಶ್ವಮಟ್ಟದಲ್ಲಿ ಆಚರಣೆಯಾಗುವ ಯೋಗ ದಿನಾಚರಣೆ ಒಂದು ದಿನಕ್ಕೆ ಸೀಮಿತವಾಗಬಾರದು. ಪ್ರತಿನಿತ್ಯ ಮನೆಯಲ್ಲೇ ಯೋಗಾಭ್ಯಾಸ ಮಾಡುವ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಈ ವೇಳೆ ಮುಖಂಡರಾದ ಪುಟ್ಟ ಸೋಮಣ್ಣ ವೀರೇಶ್, ನಾಗೇಗೌಡ, ಭಾಗ್ಯ, ರೂಪ, ಸೌಮ್ಯ, ದಿವ್ಯ, ಲಕ್ಷ್ಮಿ ಮತ್ತಿತರರಿದ್ದರು.

ಟೂಲ್ ಮೆಷಿನಿಸ್ಟ್ ಕೋರ್ಸ್‌ಗೆ ಅರ್ಜಿ ಆಹ್ವಾನ

ಮೈಸೂರು, ಜೂ.21– ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ಎಸ್.ಎಸ್.ಎಲ್.ಸಿ ಉತ್ತೀರ್ಣ, ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ತಾಂತ್ರಿಕ ನೈಪುಣ್ಯತೆ ಪಡೆದು ಉತ್ತಮ ಉದ್ಯೋಗ ಅವಕಾಶಗಳನ್ನು ಗಳಿಸಿಕೊಳ್ಳಲು ಒಂದು ವರ್ಷದ ತರಬೇತಿ ನೀಡಲು ಅರ್ಜಿ ಆಹ್ವಾನಿಸಲಾಗಿದ್ದು, ಜೂನ್ 30 ರೊಳಗೆ ಅರ್ಜಿ ಸಲ್ಲಿಸಬೇಕು.

ಈ ಕೋರ್ಸಿನಲ್ಲಿ ಕನ್ವೆನ್ಷನಲ್ ಹಾಗೂ ಅಡ್ವಾನ್ಸ್ ಸಿ.ಎನ್.ಸಿ ಮಿಷಿನಿಂಗ್ ಒಳಗೊಂಡಂತೆ ಟರ್ನಿಂಗ್, ಮಿಲ್ಲಿಂಗ್, ಗ್ರೆಂಡಿಂಗ್ ಭಾಗದಲ್ಲಿ ಪರಿಣಿತರಿಂದ ಥಿಯರಿ ಹಾಗೂ ಪ್ರಾಕ್ಟಿಕಲ್ ತರಬೇತಿ ನೀಡಲಾಗುವುದು ಮತ್ತು ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಎಸ್.ಎಸ್.ಎಲ್.ಸಿ ಯಲ್ಲಿ ತೇರ್ಗಡೆ ಹೊಂದಿರುವ) ಅಭ್ಯರ್ಥಿಗಳಿಗೆ ಉಚಿತವಾಗಿ ತರಬೇತಿಯನ್ನು ಎಎಟಿಟಿ (ಎಸ್‌ಸಿಪಿ/ಟಿಎಸ್‌ಪಿ) ಯೋಜನೆ ಅಡಿಯಲ್ಲಿ ನೀಡಲಾಗುತ್ತದೆ. ಇತರ ಪಂಗಡಗಳ ಅಭ್ಯರ್ಥಿಗಳು ಶುಲ್ಕ ರೂ –18200 (ಹದಿನೆಂಟು ಸಾವಿರದ ಎರಡು ನೂರು ರೂ.ಮಾತ್ರ) ಪಾವತಿಸಬೇಕಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ #93–94 ಬೆಳಗೊಳ ಕೈಗಾರಿಕ ಪ್ರದೇಶ ಕೆ.ಆರ್.ಎಸ್ ರೋಡ್, ಮೈಸೂರು ಇಲ್ಲಿನ ದೂ.ಸಂ: 9945442654, 9019232390, 008212–582097 ಅನ್ನು ಸಂಪರ್ಕಿಸಬಹುದೆಂದು ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ಸಿ.ಓ.ಇ ಮುಖ್ಯಸ್ಥರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಲ್ಲಿ ಆನಂದ್ ಸ್ವೀಟ್ಸ್ & ಸೇವರೀಸ್ ಆರಂಭ

ಗ್ರಾಹಕರ ಬೇಡಿಕೆಗನುಗುಣವಾಗಿ ಸಿಹಿ, ಖಾರಾ ತಿಂಡಿಗಳ ಮಾರಾಟ



ಆನಂದ್ ಸ್ವೀಟ್ಸ್ & ಸೇವರೀಸ್ ನೂತನ ಮಳಿಗೆ ಉದ್ಘಾಟನಾ ಸಮಾರಂಭದಲ್ಲಿ ಖ್ಯಾತ ಹಿನ್ನೆಲೆ ಗಾಯಕ ವಿಜಯ್ ಪ್ರಕಾಶ್, ಮತ್ತಿತರ ಗಣ್ಯರು ಹಾಗೂ ಸಂಸ್ಥೆಯ ಪ್ರಮುಖರು ಭಾಗವಹಿಸಿದ್ದರು.

ಮೈಸೂರು, ಜೂ.21– ಬೆಂಗಳೂರಿನ ಹೆಸರಾಂತ ಸಿಹಿತಿಂಡಿ ಸಂಸ್ಥೆ ಆನಂದ್ ಸ್ವೀಟ್ಸ್ & ಸೇವರೀಸ್ ತನ್ನ ಮೊದಲ ಮಳಿಗೆಯನ್ನು ಸಾಂಸ್ಕೃತಿಕ ರಾಜಧಾನಿ ಮೈಸೂರಿನಲ್ಲಿ ಆರಂಭಿಸಿದೆ. ವಿಜಯನಗರದ ಕಾಳಿದಾಸ ರಸ್ತೆಯಲ್ಲಿ ನೂತನ ಮಳಿಗೆಯನ್ನು ಭಾನುವಾರ ಉದ್ಘಾಟಿಸಲಾಯಿತು.

ಉದ್ಘಾಟನಾ ಸಮಾರಂಭದಲ್ಲಿ ಖ್ಯಾತ ಹಿನ್ನೆಲೆ ಗಾಯಕ ವಿಜಯ್ ಪ್ರಕಾಶ್ ಹಾಗೂ ಇತಿಹಾಸ ತಜ್ಞ ಧರ್ಮೇಂದ್ರ ಕುಮಾರ್ ಅತಿಥಿಗಳಾಗಿ ಭಾಗವಹಿಸಿ ಕಾರ್ಯಕ್ರಮಕ್ಕೆ ಮೆರುಗು ತಂದರು.

ಬೆಂಗಳೂರಿನ ಹೊರಗೆ ಕರ್ನಾಟಕದಲ್ಲಿ ಮೊದಲ ಮಳಿಗೆ ತೆರೆಯಬೇಕೆಂದರೆ ಅದು ಮೈಸೂರಿನಲ್ಲೇ ಆಗಬೇಕು ಎಂಬುದು ನಮ್ಮ ನಿರ್ಧಾರವಾಗಿತ್ತು. ಇಲ್ಲಿನ ಗ್ರಾಹಕರಿಂದ ನಮ್ಮ ಉತ್ಪನ್ನಗಳಿಗೆ ಉತ್ತಮ ಪ್ರತಿಕ್ರಿಯೆ ದೊರೆಯುತ್ತಿದೆ. ಪರಂಪರೆ ಮತ್ತು ಗುಣಮಟ್ಟಕ್ಕೆ ಮಹತ್ವ ನೀಡುವ ಮೈಸೂರಿನ ಸಂಸ್ಕೃತಿ ನಮ್ಮ ಮೌಲ್ಯಗಳಿಗೆ ಹತ್ತಿರವಾಗಿದೆ ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಅರವಿಂದ್ ದಾಡು ಹೇಳಿದರು.

ಮೈಸೂರಿನ ಹೊಸ ಮಳಿಗೆಯಲ್ಲಿ ಆನಂದ್‌ನ ಜನಪ್ರಿಯ ಸಿಹಿತಿಂಡಿಗಳಾದ ಬಾದಾಮಿಕಾ, ಪಿಸ್ತಾಮಿಕಾ, ಚೋಕೋಮಿಕಾ, ಮೀತಾಝ್, ಮೋತಿಚೂರ್ ಲಡ್ಡು, ಕಾಜು ಕಟ್ಲಿ ಹಾಗೂ ರಸಮಲೈ ಸೇರಿದಂತೆ ಹಲವು ಬಗೆಯ ಸಿಹಿತಿಂಡಿಗಳು ಲಭ್ಯವಿವೆ. ಇದರ ಜೊತೆಗೆ ಮಧ್ಯಪ್ರಾಚ್ಯದ ವಿಶೇಷ ಸಿಹಿತಿಂಡಿಗಳಾದ ಬಕ್ಲಾವಾ ಮತ್ತು ಕುನಾಫಾ ಹಾಗೂ ವಿವಿಧ ವಿನ್ಯಾಸದ ಉಡುಗೊರೆ ಹ್ಯಾಂಪರ್‌ಗಳನ್ನೂ ಗ್ರಾಹಕರಿಗಾಗಿ ಪರಿಚಯಿಸಲಾಗಿದೆ.

ಮೈಸೂರಿನ ಗ್ರಾಹಕರ ಅಭಿರುಚಿಗೆ ತಕ್ಕಂತೆ ಮದ್ದೂರು ವಡೆ, ಅಕ್ಕಿ–ತೆಂಗಿನ ಕೋಡುಬಳೆ, ಬೆಣ್ಣೆ ಮುರುಕು, ಅಡ್ಯಾರ್ ಮುರುಕು ಸೇರಿದಂತೆ ವಿವಿಧ ಖಾರದ ತಿಂಡಿಗಳನ್ನೂ ಮಳಿಗೆಯಲ್ಲಿ ಮಾರಾಟ ಮಾಡಲಾಗುತ್ತಿದೆ. ಸಿಹಿತಿಂಡಿಗಳನ್ನು ಶುದ್ಧ ತುಪ್ಪ ಮತ್ತು ಸಾವಯುವ ಹಾಲಿನಿಂದ ತಯಾರಿಸಲಾಗುತ್ತಿದ್ದು, ಖಾರದ ಪದಾರ್ಥಗಳಲ್ಲಿ ಪಾಮ್ ಎಣ್ಣೆ ಬಳಸುವುದಿಲ್ಲ ಎಂದು ಸಂಸ್ಥೆ ತಿಳಿಸಿದೆ.

ಆರೋಗ್ಯದ ಬಗ್ಗೆ ಕಾಳಜಿ ಹೊಂದಿರುವ ಗ್ರಾಹಕರಿಗಾಗಿ ಸಕ್ಕರೆ ರಹಿತ ಕಾಜು ಕಟ್ಲಿ, ಬೇಸನ್ ಲಡ್ಡು, ಸೋಹನ್ ಪಾಪ್ಡಿ, ರಾಗಿ, ಸಿರಿಧಾನ್ಯ, ಅಗಸೆ ಬೀಜ ಹಾಗೂ ಗೊಂಡ್ ಲಡ್ಡುಗಳಂತಹ ಆರೋಗ್ಯಕರ ಉತ್ಪನ್ನಗಳನ್ನೂ ಲಭ್ಯವಾಗಿಸಲಾಗಿದೆ.

ಮಳಿಗೆಯ ಪ್ರಮುಖ ಆಕರ್ಷಣೆಯಾಗಿ ಲೈವ್ ಹಾಟ್ ಮೈಸೂರು ಪಾಕ್ ಟೇಸ್ಟಿಂಗ್ ಸ್ಟೇಷನ್ ವ್ಯವಸ್ಥೆ ಮಾಡಲಾಗಿದೆ. ಇಲ್ಲಿ ಸಾಂಪ್ರದಾಯಿಕ ಮೈಸೂರು ಪಾಕ್ ಜೊತೆಗೆ ಮಾಲ್ಟ್ ಮೈಸೂರು ಪಾಕ್, ಡ್ರೈ ಫ್ರೂಟ್ ಮೈಸೂರು ಪಾಕ್, ಬೆಲ್ಲದ ಮೈಸೂರು ಪಾಕ್ ಮತ್ತು ಕಾಜು ಮೈಸೂರು ಪಾಕ್‌ಗಳನ್ನು ಬಿಸಿ ಬಿಸಿಯಾಗಿ ಸವಿಯಬಹುದಾಗಿದೆ. ಮಳಿಗೆಯೂ ವಾರದ ಎಲ್ಲಾ ದಿನಗಳೂ ತೆರೆಯಲಿದ್ದು, ಬೆಳಗ್ಗೆ 8.30 ರಿಂದ ರಾತ್ರಿ 10.30 ವರೆಗೆ ತಮಗಿಷ್ಟದ ಖಾದ್ಯಗಳನ್ನು ಸವಿಯಬಹುದಾಗಿದೆ.

1988ರಲ್ಲಿ ಬೆಂಗಳೂರಿನಲ್ಲಿ ಆರಂಭವಾದ ಈ ಸಂಸ್ಥೆಯು, ಕರ್ನಾಟಕದಲ್ಲಿ ಬೆಂಗಳೂರಿನ ಹೊರಗೆ ಆರಂಭಿಸಿರುವ ಮೊದಲ ಮಳಿಗೆ ಇದಾಗಿದೆ. ಸಂಸ್ಥೆಯು ಈಗಾಗಲೇ ಬೆಂಗಳೂರು, ಅಹಮದಾಬಾದ್ ಹಾಗೂ ಕೊಚ್ಚಿ ವಿಮಾನ ನಿಲ್ದಾಣಗಳಲ್ಲಿ ತನ್ನ ಮಳಿಗೆಗಳನ್ನು ಹೊಂದಿದೆ.

ಬೆಂಗಳೂರಿನಲ್ಲಿ ಹಲವು ಪ್ರಶಸ್ತಿಗಳನ್ನು ಪಡೆದಿರುವ ಆನಂದ್ ಸ್ವೀಟ್ಸ್ & ಸೇವರೀಸ್, ಸಾಂಪ್ರದಾಯಿಕ ಭಾರತೀಯ ಸಿಹಿತಿಂಡಿಗಳನ್ನು ಆಧುನಿಕ ಶೈಲಿಯಲ್ಲಿ ಗ್ರಾಹಕರಿಗೆ ಪರಿಚಯಿಸುವ ಮೂಲಕ ತನ್ನದೇ ಆದ ವಿಶಿಷ್ಟ ಗುರುತನ್ನು ಪಡೆದಿದೆ.

ಯೋಗ ದಿನಾಚರಣೆ



ಮೈಸೂರಿನ ವಿಜಯನಗರ ಎರಡನೇ ಹಂತದ 'ಸಖಿತ್ ಸೊಪ್ಪು ಸಾವಯವ ಭಾನುವಾರದ ರೈತ ಸಂತೆ'ಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಯೋಗ ಪರಿಣಿತ ಚಂದನ್ ಮಾರ್ಗದರ್ಶನದಲ್ಲಿ ಯೋಗ ಮತ್ತು ಯೋಗಾಸನದ ಬಗ್ಗೆ ಅರಿವು ಮೂಡಿಸುವ ಕೆಲಸ ಹಾಗೂ ಹಲವು ಯೋಗಾಸನವನ್ನು ಪ್ರದರ್ಶಿಸಲಾಯಿತು.

ನನ್ನದು ರೈತರ ಪರ ಹೋರಾಟ ಹೊರತು ಯಾರೋ ಒಬ್ಬರ ವಿರುದ್ಧವಲ್ಲ

ಬಿಡದಿ ಹೋರಾಟದ ಬಗ್ಗೆ ಸ್ಪಷ್ಟಪಡಿಸಿದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ

●ವೈಯಕ್ತಿಕ ನೆಲೆಗಟ್ಟಿನ ಹೋರಾಟ ನನಗೆ ಅಗತ್ಯವಿಲ್ಲ; ಭೂಮಿ ದಂಧೆಕೋರರ ವಿರುದ್ಧ ನನ್ನ ಹೋರಾಟ ●ನಾನು ರೈತರ ಭೂಮಿ ಉಳಿಸಿದ್ದೆ ಎಂದು ಕಾಂಗ್ರೆಸ್ ಶಾಸಕರೇ ಹೇಳುತ್ತಿದ್ದಾರೆ ●ವಿಧಾನಸಭೆಯಲ್ಲಿ 3 ದಿನ ಚರ್ಚೆ ನಡೆದಿತ್ತು, ಹಾಲಿ ಸಿಎಂ ಕೂಡ ಇದ್ದರು ಎಂದು ನೆನಪಿಸಿದ ಹೆಚ್ಡಿಕೆ

ಮಂಡ್ಯ, ಜೂ.21– ಬಿಡದಿ ಟೌನ್‌ಶಿಪ್ ಯೋಜನೆಯ ವಿಚಾರದಲ್ಲಿ ನಾನು ಹಾಲಿ ಮುಖ್ಯಮಂತ್ರಿ ವಿರುದ್ಧ ವೈಯಕ್ತಿಕ ನೆಲೆಗಟ್ಟಿನಲ್ಲಿ ಹೋರಾಟ ಮಾಡುತ್ತಿಲ್ಲ. ಭೂಮಿ ಕಳೆದುಕೊಳ್ಳುತ್ತಿರುವ ರೈತರ ಪರವಾಗಿ ದನಿ ಎತ್ತಿದ್ದೇನೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

ಮಂಡ್ಯದಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆಯ ನಂತರ ಮಾಧ್ಯಮಗಳ ಪ್ರಶ್ನೆಗಳಿಗೆ ಉತ್ತರಿಸಿದ ಸಚಿವರು; ನನ್ನ ಹೋರಾಟಕ್ಕೆ ವೈಯಕ್ತಿಕ ನೆಲೆಗಟ್ಟಿನ ಲೇಪ ಹಾಗೂ ಜಾತಿ ವಿಚಾರವನ್ನು ತರುವ ಪ್ರಯತ್ನವನ್ನು ಕೆಲವರು ಮಾಡುತ್ತಿದ್ದಾರೆ. ಮಾಡುತ್ತಿರುವ ಅನ್ಯಾಯವನ್ನು ಮುಚ್ಚಿಟ್ಟುಕೊಳ್ಳಲು ಇಂತಹ ವಿಚಾರಗಳನ್ನು ಮುನ್ನಲೆಗೆ ತರುವುದು ಸರಿಯಲ್ಲ. ಇವರೆಲ್ಲ ಸೇರಿ ರೈತರ ಭೂಮಿಯನ್ನು ರಿಯಲ್ ಎಸ್ಟೇಟ್ ದಂಧೆಕೋರರಿಗೆ ಕೊಡಲು ಕೊಳ್ಳೆ ಹೊಡೆಯಲು ಹೊರಟಿದ್ದಾರೆ. ಇದನ್ನು ತಡೆಯಲು ನಾನು ರೈತರ ಜೊತೆ ಸೇರಿ ಹೋರಾಟಕ್ಕೆ ಇಳಿದಿದ್ದೇನೆ ಎಂದರು.



ಪಾಂಡವಪುರ ತಾಲೂಕಿನ ಕೆರೆತೊಣ್ಣೂರು ಗ್ರಾಮದ ದೇವಾಲಯಕ್ಕೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ಟೌನ್‌ಶಿಪ್ ವಿಚಾರದಲ್ಲಿ ಮುಖ್ಯಮಂತ್ರಿ ಮತ್ತು ಅವರ ಹಿಂಬಾಲಕರು ಸುಳ್ಳಿನ ಸರಮಾಲೆಯನ್ನೇ ಸೃಷ್ಟಿ ಮಾಡುತ್ತಿದ್ದಾರೆ. ನಾನು ರೆಡ್ ಜೋನ್ ತೆಗೆಯಲಿಲ್ಲ ಏಕೆ ಎಂದು ನನ್ನನ್ನು ಪ್ರಶ್ನೆ ಮಾಡುತ್ತಿದ್ದಾರೆ. ಅದೇ ಪಕ್ಷದ ಕೆಲವರು ಕುಮಾರಸ್ವಾಮಿ ಅವರು ರೆಡ್ ಜೋನ್ ಮಾಡಿದ್ದರಿಂದಲೇ ಬಿಡದಿ ಭಾಗದಲ್ಲಿ ರೈತರ ಭೂಮಿ ಉಳಿದುಕೊಂಡಿದೆ. ಇಲ್ಲವಾಗಿದ್ದಿದ್ದರೆ ಈ ವೇಳೆಗೆ ಇಡೀ ಭೂಮಿಯಲ್ಲ ರಿಯಲ್ ಎಸ್ಟೇಟ್ ಕುಳಗಳ ಪಾಲಾಗುತ್ತಿತ್ತು ಎಂದು ಹೇಳಿದ್ದಾರೆ. ಇದರಲ್ಲಿ ಯಾವುದು ಸತ್ಯ ಎಂಬುದನ್ನು ಜನರೇ ಅರ್ಥ ಮಾಡಿಕೊಂಡಿದ್ದಾರೆ ಎಂದು ಸಚಿವರು ಹೇಳಿದರು.

ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಪ್ರಧಾನಮಂತ್ರಿ ಡಾ. ಮನಮೋಹನ್ ಸಿಂಗ್ ಅವರ ಅಧಿಕಾರ ಅವಧಿಯಲ್ಲಿ ರಾಷ್ಟ್ರದ ಎಲ್ಲೆಡೆ ವಿಶೇಷ ಕೈಗಾರಿಕಾ ವಲಯಗಳನ್ನು (SEZ) ಸ್ಥಾಪಿಸಲು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ನೀತಿಯನ್ನು ಜಾರಿಗೆ ತಂದರು. ಅದೇ ಸಂದರ್ಭದಲ್ಲಿ ರಾಜ್ಯದ ಮುಖ್ಯಮಂತ್ರಿ ಆಗಿದ್ದ ನಾನು ಬಿಡದಿ ಸೇರಿದಂತೆ ಐದು ಕಡೆಗಳಲ್ಲಿ ಟೌನ್‌ಶಿಪ್‌ಗಳನ್ನು ಮಾಡಿ ಬೆಂಗಳೂರಿನ ಮೇಲೆ ಒತ್ತಡ ಕಡಿಮೆ ಮಾಡಲು ಯೋಜನೆ ರೂಪಿಸಿದ್ದು ನಿಜ. ಆದರೆ ಭೂಮಿಯನ್ನು ಕೊಡಲು ರೈತರು ಕೂಡ ಖಂಡಿತವಾಗಿ ನಿರಾಕರಿಸಿದ ಹಿನ್ನೆಲೆಯಲ್ಲಿ ನಾನು ಆ ಯೋಜನೆಯನ್ನು ಅಲ್ಲಿಗೇ ಕೈ ಬಿಟ್ಟೆ. ಅಂದು ನಾನು ಆ ನಿರ್ಧಾರ ತೆಗೆದುಕೊಂಡ ಕಾರಣಕ್ಕೆ ರೈತರ ಭೂಮಿ ಉಳಿದುಕೊಂಡಿತು. ಈಗ ಆ ಭೂಮಿಗೆ ಬಂಗಾರಕ್ಕೂ ಮಿಗಿಲಾದ ಬೆಲೆ ಬಂದಿದೆ. ಅದಕ್ಕಾಗಿ ಅದರ ಮೇಲೆ ಭೂಗಳ್ಳರ ಕಣ್ಣು ಬಿದ್ದಿದೆ. ಈ ಸರ್ಕಾರ ಅವರಿಗೆ ರೈತರಿಂದ ಭೂಮಿಯನ್ನು ಕಿತ್ತು ಕೊಡಲು ಹೊರಟಿದೆ. ಇದನ್ನಷ್ಟೇ ನಾವು ಪ್ರಶ್ನಿಸುತ್ತಿದ್ದೇವೆ. ಅದನ್ನು ಹೊರತುಪಡಿಸಿ ಕಾಂಗ್ರೆಸ್ ನಾಯಕರು ಜನರ ದಿಕ್ಕು ತಪ್ಪಿಸಲು ಸುಳ್ಳಿನ ಕಥೆ ಕಟ್ಟುತ್ತಿದ್ದಾರೆ ಎಂದು ಅವರು ಕಟುವಾಗಿ ಟೀಕಿಸಿದರು.

2006–07ರಲ್ಲಿ ಇದೇ ವಿಷಯದ ಬಗ್ಗೆ ವಿಧಾನಸಭೆಯಲ್ಲಿ ಮೂರು ದಿನಗಳ ಕಾಲ ಸುಧೀರ್ಘ ಚರ್ಚೆ ನಡೆಯಿತು. ಆ ಚರ್ಚೆಯಲ್ಲಿ ಇವತ್ತಿನ ರಾಜ್ಯಸಭೆಯಲ್ಲಿ ಪ್ರತಿಪಕ್ಷ ನಾಯಕರಾಗಿರುವ ಮಲ್ಲಿಕಾರ್ಜುನ ಖರ್ಗೆ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಹಾಲಿ ಮುಖ್ಯಮಂತ್ರಿ ಕೂಡ ಭಾಗಿಯಾಗಿದ್ದರು. ಆ ಸಂದರ್ಭದಲ್ಲಿ ಏನೇನು ಚರ್ಚೆ ಆಗಿದ್ದು ಎಂಬುದು ಇವರಿಗೆ ಗೊತ್ತಿಲ್ಲವೇ? ಎಲ್ಲವೂ ದಾಖಲೆಗಳಲ್ಲಿ ಸೇರಿದೆ, ಅದನ್ನು ತೆಗೆಸಿ ನೋಡುವುದಕ್ಕೆ ಇವರಿಗೆ ಏನು ಸಮಸ್ಯೆ? ಎಂದು ಸಚಿವ ಕುಮಾರಸ್ವಾಮಿ ಅವರು ಪ್ರಶ್ನಿಸಿದರು.

ನನ್ನ ಮತ್ತು ರೈತರ ಪ್ರಶ್ನೆಗಳಿಗೆ ಉತ್ತರಿಸಲಾಗದ ಕಾಂಗ್ರೆಸ್ ನಾಯಕರು ಈಗ ರೆಡ್ ಜೋನ್ ವಿಷಯವನ್ನು ಮುನ್ನೆಲೆಗೆ ತಂದು ಸುಳ್ಳು ಹೇಳುತ್ತಿದ್ದಾರೆ. ಅದರ ಬಗ್ಗೆ ಅವರ ಪಕ್ಷದ ಮಾಗಡಿ ಶಾಸಕರೇ ಸತ್ಯ ಹೇಳಿದ್ದಾರೆ. ನಾನು ರೈತರ ಭೂಮಿ ಉಳಿಸಿದೆ, ಈಗಿನ ಮುಖ್ಯಮಂತ್ರಿ ರೈತರ ಭೂಮಿಯನ್ನು ಕಸಿದುಕೊಳ್ಳಲು ಹೊರಟಿದ್ದಾರೆ. ಒಂದು ಇಂಚು ಫಲವತ್ತಾದ ಭೂಮಿಯನ್ನು ವಶಕ್ಕೆ ಪಡೆಯುವುದಿಲ್ಲ ಎಂದು ಅಂದು ಕಲಾಪದಲ್ಲಿ ನೇರವಾಗಿ ಹೇಳಿದ್ದೆ. ಇವರು ಅದೇ ಭೂಮಿಯನ್ನು ಲಪಟಾಯಿಸಲು ಮುಂದಾಗಿದ್ದಾರೆ. ಇನ್ನು ಮುಖ್ಯಮಂತ್ರಿ ಡಿನೋಟಿಫಿಕೇಶನ್ ಮಾಡಿದರೆ ಜೈಲಿಗೆ ಹೋಗಬೇಕಾಗುತ್ತದೆ ಎಂದು ನಾಟಕ ಮಾಡುತ್ತಿದ್ದಾರೆ. ನೀವು ಡಿನೋಟಿಫಿಕೇಶನ್ ಮಾಡಿ ಜೈಲಿಗೆ ಹೋಗಬೇಕಾದ ಅಗತ್ಯವಿಲ್ಲ. ರೈತರ ಹಿತಕ್ಕಾಗಿ ಇಡೀ ಯೋಜನೆಯನ್ನು ಕೈಬಿಡಿ. ಇಡೀ ರಾಜ್ಯದ ಜನರು ನಿಮ್ಮ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಅದನ್ನು ಬಿಟ್ಟು ಭೂಮಿಗೆ ಕನ್ನ ಹಾಕಿದ್ದೀರಿ ಎಂದು ಕುಮಾರಸ್ವಾಮಿ ಅವರು ಆಕ್ರೋಶ ವ್ಯಕ್ತಪಡಿಸಿದರು.

ಬಡ ರೈತರ ಕಷ್ಟಗಳ ಜೊತೆ ಚೆಲ್ಲಾಟ ಆಡಬೇಡಿ. ಚೆಕ್ಕುಗಳನ್ನು ಪ್ರದರ್ಶನ ಮಾಡುವ ಮೂಲಕ ಅವರನ್ನು ಅಪಮಾನ ಮಾಡಬೇಡಿ. ರೈತರು ಭೂಮಿಯನ್ನು ನಂಬಿ ಬದುಕು ಕಟ್ಟಿಕೊಳ್ಳುವ ಜನ. ಜನರಿಗೆ ಅನ್ನ ಕೊಡುವ ಅನ್ನದಾತರು. ಅಂತವರನ್ನು ಹಣದ ಮೂಲಕ ಚೆಕ್ಕುಗಳ ಮೂಲಕ ಅವಮಾನ ಮಾಡುವ ಕೆಲಸ ಮಾಡಬೇಡಿ. ಚೆಕ್ಕುಗಳ ಪ್ರದರ್ಶನ ನಿಮ್ಮ ದರ್ಪವಲ್ಲದೆ ಬೇರೇನೂ ಅಲ್ಲ ಆಗಿರುವ ತಪ್ಪನ್ನು ತಿದ್ದಿಕೊಳ್ಳದಿದ್ದರೆ ಆ ಜನರೇ ನಿಮಗೆ ತಕ್ಕ ಶಾಸ್ತಿ ಮಾಡುತ್ತಾರೆ ಎಂದು ಗುಡುಗಿದರು.

ಮಾಗಡಿ ಶಾಸಕರು ಚೆಕ್ ವಿತರಣೆ ಮಾಡಿದ ಕ್ರಮವನ್ನು ಕಟು ಶಬ್ದಗಳಲ್ಲಿ ಟೀಕಿಸಿದ ಸಚಿವ ಕುಮಾರಸ್ವಾಮಿ ಅವರು; ಹಣವನ್ನು ನಿಮ್ಮ ಮನೆಯಿಂದ ತಂದು ಕೊಡುತ್ತಿಲ್ಲ. ಹುಡ್ಕೋದಿಂದ ಸಾವಿರಾರು ಕೋಟಿ ರೂಪಾಯಿ ಸಾಲ ತಂದು ನಾಟಕ ಮಾಡುತ್ತಿದ್ದೀರಿ. ಈಗೇನೋ ಸಾಲ ತಂದು ಡ್ರಾಮಾ ಮಾಡಿ ಹೋಗಿಬಿಡುತ್ತೀರಿ. ಆಮೇಲೆ ಬಂದವರು ಏನು ಮಾಡಬೇಕು? ಇಷ್ಟು ದೊಡ್ಡ ಪ್ರಮಾಣದ ಸಾಲವನ್ನು ತೀರಿಸುವುದು ಹೇಗೆ? ರಾಜ್ಯದ ಹಣಕಾಸು ಪರಿಸ್ಥಿತಿಯ ಮೇಲೆ ಯಾವ ಪರಿಣಾಮ ಬೀರುತ್ತದೆ ಎಂಬ ಎಳ್ಳಷ್ಟು ಕಾಳಜಿ ಎಚ್ಚರಿಕೆ ಇವರಿಗೆ ಬೇಡವೇ ಎಂದು ಕುಮಾರಸ್ವಾಮಿ ಅವರು ಕಿಡಿಕಾರಿದರು.

ಕೈಗಾರಿಕೆಗಳನ್ನು ಮಾಡಬೇಡಿ ಅಥವಾ ಟೌನ್‌ಶಿಪ್‌ಗಳನ್ನು ನಿರ್ಮಾಣ ಮಾಡಬೇಡಿ ಎಂದು ನಾನು ಹೇಳುತ್ತಿಲ್ಲ. ರಾಜ್ಯದಲ್ಲಿ ಬೇಕಾದಷ್ಟು ಒಣಭೂಮಿ ಇದೆ. ನೀರಾವರಿಗೆ ಯೋಗ್ಯವಲ್ಲದ ಜಾಗ ಬಹಳಷ್ಟಿದೆ. ಅಲ್ಲಿ ಹೋಗಿ ಟೌನ್ ಶಿಪ್ ಯೋಜನೆಗಳನ್ನು ಜಾರಿ ಮಾಡಿ. ಆದರೆ ಫಲವತ್ತಾದ ನೀರಾವರಿ ಭೂಮಿ ಏಕೆ ಬೇಕು? ರಾಕ್ಷಸಿ ಪ್ರವೃತ್ತಿಯಿಂದ ರೈತರ ಏಕೈಕ ಜೀವನಾಧಾರವಾದ ಭೂಮಿಯನ್ನು ಕಿತ್ತುಕೊಳ್ಳಲು ಏಕೆ ಹೊರಟಿದ್ದೀರಿ. ಇದರಿಂದ ನಿಮಗೆ ಒಳ್ಳೆಯದಾಗುವುದಿಲ್ಲ ಎಂದು ಸಚಿವರು ಹೇಳಿದರು.



ಮೈಸೂರಿನ ಕಾಡ ಕಚೇರಿಯಲ್ಲಿ ಭಾನುವಾರದ ಪ್ರಥಮ ರೈತ ಸಂತೆಯಲ್ಲಿ ಯೋಗಚಾರ್ಯ ಕ್ಯಾತನಹಳ್ಳಿ ವೆಂಕಟೇಶ್ ಮಾರ್ಗದರ್ಶನದಲ್ಲಿ ಯೋಗ ಪ್ರದರ್ಶನ ಮತ್ತು ಯೋಗಾಸನದ ಬಗ್ಗೆ ಅರಿವು ಮೂಡಿಸುವ ಮೂಲಕ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು.


ಉದ್ಯೋಗ ಮೇಳ

ಮೈಸೂರು, ಜೂ.21– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಮೈಸೂರು ವತಿಯಿಂದ ಜೂನ್ 24 ರಂದು ಬಿ.ಜಿ.ಎಸ್ ಶಿಕ್ಷಣ ಸಂಸ್ಥೆಗಳು, ಅಬ್ಬೂರು ಗ್ರಾಮ, ಪಿರಿಯಾಪಟ್ಟಣ ತಾಲ್ಲೂಕು ಮೈಸೂರು ಜಿಲ್ಲೆ ಇಲ್ಲಿ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ.

ಉದ್ಯೋಗ ಮೇಳದಲ್ಲಿ ಮೈಸೂರಿನ ಹೆಸರಾಂತ ಕಂಪನಿಗಳಾದ ಇನ್ಫೋಸಿಸ್, ಜೆಕೆ ಟೈರ್ಸ್, ಟಿ.ವಿ.ಎಸ್, ರಾಣೆ–ಮದ್ರಾಸ್, ಟ್ರೈಟಾನ್ ವಾಲ್ವ್ಸ್, ಆಟೋಮೋಟಿವ್ ಎಕ್ಸೆಲ್ಸ್, ಸುಪ್ರೀಂ ಫಾರ್ಮಾಸ್ಯುಟಿಕಲ್ಸ್ ಮುಂತಾದವು 60ಕ್ಕೂ ಹೆಚ್ಚು ಮೈಸೂರು–ಕೊಡಗಿನ ಹೆಸರಾಂತ ಕಂಪನಿಗಳು ತಮ್ಮ ಸಂಸ್ಥೆಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳಿಗೆ ಬೆಳಿಗ್ಗೆ 9 ಘಂಟೆಯಿಂದ ಸಾಯಂಕಾಲ 4 ಗಂಟೆಯವರೆಗೆ ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಲಾಗುತ್ತದೆ.

ಎಸ್.ಎಸ್.ಎಲ್.ಸಿ ಪಾಸು/ಫೇಲು, ಪಿಯುಸಿ/ಪದವಿ/ಐಟಿಐ/ಡಿಪ್ಲೋಮಾ/ಸ್ನಾತಕೋತ್ತರದಲ್ಲಿ ತೇರ್ಗಡೆ ಹೊಂದಿದ 18 ರಿಂದ 35 ವರ್ಷ ವಯೋಮಿತಿ ಹೊಂದಿರುವ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳನ್ನು ನೇರ ಸಂದರ್ಶನದ ಮೂಲಕ ಆಯ್ಕೆ ಮಾಡಿಕೊಳ್ಳುತ್ತಿದ್ದು, ಆಸಕ್ತ ಅಭ್ಯರ್ಥಿಗಳು ವಿದ್ಯಾರ್ಹತೆಯ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಗಳು ಮತ್ತು ಆಧಾರ್ ಕಾರ್ಡ್, ಸ್ವ–ವಿವರವುಳ್ಳ 10 ಬಯೋಡೇಟಾ ಪ್ರತಿಗಳೊಂದಿಗೆ ಹಾಜರಾಗಿ ಇದರ ಸದುಪಯೋಗವನ್ನು ಪಡೆದುಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಮೈಸೂರು–07. ಇವರನ್ನು ಅಥವಾ ದೂರವಾಣಿ ಸಂಖ್ಯೆ 0821–2489972 9036356862 9964463361 8748984360 ನ್ನು ಸಂಪರ್ಕಿಸಬಹುದು.


ಹಾರ್ದಿಕ ಅಭಿನಂದನೆಗಳು
ಕರ್ನಾಟಕ ವಿಧಾನ ಪರಿಷತ್
ಸದಸ್ಯರಾಗಿ ಆಯ್ಕೆಯಾಗಿರುವ ಹಾಗೂ
ಬಿಜೆಪಿ ರಾಜ್ಯ ಓಬಿಸಿ ಮೋರ್ಚಾ ಅಧ್ಯಕ್ಷರಾದ
ಶ್ರೀ ಆರ್. ರಘು ಕೌಟಿಲ್ಯ
ರವರಿಗೆ
ಹಾರ್ದಿಕ ಅಭಿನಂದನೆಗಳು
ರಾಜ್ಯದ ಅಭಿವೃದ್ಧಿಗಾಗಿ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು
ಎತ್ತಿಹಿಡಿಯಲು ತಮ್ಮ ಕಾರ್ಯಕ್ರಮಗಳು ಯಶಸ್ವಿಯಾಗಲಿ.
ನಿಮ್ಮ ಉಜ್ವಲ ಭವಿಷ್ಯಕ್ಕಾಗಿ ನಮ್ಮ ಶುಭ ಹಾರೈಕೆಗಳು...
ಶುಭ ಕೋರುವವರು
ಕಾಯಕ ಸಮುದಾಯಗಳ ಪರವಾಗಿ,
ಬೆಂಗಳೂರು